24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 4 | ನವದೆಹಲಿ | ಬೆಲೆ ₹ 10 | ಜೂನ್ 30, 2026, ಮಂಗಳವಾರ

## ಒಳಪುಟಗಳಲ್ಲಿ

ವನ್ಯಜೀವಿ ಸಂಪತ್ತು ರಕ್ಷಣೆಗೆ ಪರಿಣಾಮಕಾರಿ ಕ್ರಮ ಅಗತ್ಯ: ಸಿಎಂ ಡಿಕೆಶಿ- ಪು.2

ಶ್ರೀರಾಮ ಮಂದಿರದಲ್ಲಿ ದೇಣಿಗೆ ದುರ್ಬಳಕೆ ಆರೋಪ ತುರ್ತು ವಿಚಾರಣೆಗೆ ಸುಪ್ರೀಂಕೋರ್ಟ್ ನಕಾರ- ಪು.4

ಹಾರ್ಮುಜ್ ಜಲಸಂಧಿಯ ಭವಿಷ್ಯದ ನಿರ್ವಹಣೆಯ ಕುರಿತು ಇರಾನ್-ಒಮಾನ್ ನಡುವೆ ಮೊದಲ ಔಪಚಾರಿಕ ಚರ್ಚೆ-ಪು.8

# ಬಿಡದಿ ಸ್ಮಾರ್ಟ್‌ಸಿಟಿ ವಿರೋಧಿಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಸೆಡ್ಡು

### ಹಾಸನದಲ್ಲಿ ಉದ್ದೇಶಿತ ಐಟಿ ಭೂಸ್ವಾಧೀನ ಸಂತ್ರಸ್ತರಿಗೆ ಕಾನೂನುಪ್ರಕಾರ ಪರಿಹಾರದ ಭರವಸೆ

### ರೈತ ಪ್ರತಿನಿಧಿಗಳು, ಜನಪ್ರತಿನಿಧಿಗಳು, ಅಧಿಕಾರಿಗಳ ಜತೆ ಮುಖ್ಯಮಂತ್ರಿ ಸಭೆ

**ಬೆಂಗಳೂರು, ಜೂ.29:** ಹಾಸನದಲ್ಲಿ ಉದ್ದೇಶಿತ ಐಟಿ ಯೋಜನೆಗಾಗಿ ಭೂಮಿ ಕಳೆದುಕೊಂಡು ಕಳೆದ ಎರಡು ದಶಕಗಳಿಂದ ಸಂಕಷ್ಟ ಎದುರಿಸುತ್ತಿರುವ ಭೂಸಂತ್ರಸ್ತ ರೈತರಿಗೆ ನ್ಯಾಯಾಲಯದ ಆದೇಶದನ್ವಯ ಕಾನೂನುಬದ್ಧ ಪರಿಹಾರ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಹಾಸನ ಜಿಲ್ಲಾ ರೈತ ಸಂಘಟನೆಗಳ ಪದಾಧಿಕಾರಿಗಳು, ರೈತ ಪ್ರತಿನಿಧಿಗಳು ಹಾಗೂ ಉನ್ನತ ಅಧಿಕಾರಿಗಳ ಮಹತ್ವದ ಸಭೆ ಜರುಗಿತು. ಸಭೆಯಲ್ಲಿ ದೊಡ್ಡಹೊನ್ನೇನಹಳ್ಳಿ, ಕಾಚನಾಯಕನಹಳ್ಳಿ ಸೇರಿದಂತೆ ಯೋಜನೆ ವ್ಯಾಪ್ತಿಯ 7 ಗ್ರಾಮಗಳ ರೈತರು ಪಾಲ್ಗೊಂಡು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ರೈತರ ಅಹವಾಲುಗಳನ್ನು ಆಲಿಸಿದ ಸಿಎಂ, ಸ್ಥಳದಲ್ಲೇ ಅಧಿಕಾರಿಗಳಿಂದ ನಕ್ಷೆ ಮತ್ತು ದಾಖಲಾತಿಗಳನ್ನು ತರಿಸಿಕೊಂಡು ಸುದೀರ್ಘ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಜೆಡಿಎಸ್ ಮುಖಂಡರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ರೈತರು, ಎಚ್.ಡಿ.ದೇವೇಗೌಡ ಎಜುಕೇಷನ್ ಟ್ರಸ್ಟ್ ಮಾಡಲು ನಮ್ಮ ಫಲವತ್ತಾದ ಭೂಮಿಯನ್ನು ಕಬಳಿಸುವ ಸಂಚು ನಡೆಯುತ್ತಿದೆ. ಮಾಜಿ ಸಚಿವ ಎಚ್.ಡಿ.ರೇವಣ್ಣ ಅವರ ಕುಮ್ಮಕ್ಕಿನಿಂದಾಗಿ ನಮಗೆ ಇತ್ತ ನ್ಯಾಯಯುತ ಪರಿಹಾರವೂ ಇಲ್ಲ, ಅತ್ತ ನಿವೇಶನವೂ ಇಲ್ಲದಂತಾಗಿದೆ ಎಂದು ದೂರಿದ್ದಾರೆ.ಆರಂಭದಲ್ಲಿ ಐಟಿ ಯೋಜನೆಗೆ 334 ಎಕರೆ ಭೂಮಿ ಸಾಕು ಎಂದಿದ್ದ ಅಧಿಕಾರಿಗಳು, ಈಗ 1057 ಎಕರೆ ಎಂದು ಹೇಳುತ್ತಿದ್ದಾರೆ. ಈಗಾಗಲೇ ಐಟಿ ಧಾರವಾಡಕ್ಕೆ ಸ್ಥಳಾಂತರಗೊಂಡಿದ್ದರೂ, ಐಟಿ ಹೆಸರಿನಲ್ಲಿ ಗೌಡರ ಕುಟುಂಬ ಮತ್ತು ಜೆಡಿಎಸ್ ನಾಯಕರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕೋಟ್ಯಂತರ ರೂಪಾಯಿ ಬೆಲೆಬಾಳುವ ಜಮೀನನ್ನು ದೋಚಲು ಹೊರಟಿದ್ದಾರೆ ಎಂದು ರೈತರು ಗಂಭೀರ ಆರೋಪಿಸಿದರು.

ರೈತರ ಮಾತುಗಳನ್ನು ಆಲಿಸಿದ ನಂತರ ಮಾತನಾಡಿದ ಸಿಎಂ, ಬಿಡದಿ ರೈತರಿಗೆ ಒಂದು ನ್ಯಾಯ, ಹಾಸನ ರೈತರಿಗೆ ಮತ್ತೊಂದು ನ್ಯಾಯ ಮಾಡಲು ನಾನು ಸಿದ್ಧನಿಲ್ಲ. ರೈತರ ಕೈಗೆ ಹೆಚ್ಚಿನ ಹಣ ಬಂದರೆ ಎಲ್ಲರಿಗಿಂತ ಹೆಚ್ಚು ಸಂತೋಷ ಪಡುವವನು ನಾನು. ನಮ್ಮ ಸರ್ಕಾರ ಎಂದಿಗೂ ರೈತರ ಪರವಾಗಿರುತ್ತದೆ ಎಂದು ಅಭಯ ನೀಡಿದರು.



2007ರಲ್ಲಿ ಎಕರೆಗೆ 15 ರಿಂದ 25 ಲಕ್ಷ ರೂ. ಪರಿಹಾರ ನಿಗದಿಪಡಿಸಲಾಗಿತ್ತು. ಅಭಿವೃದ್ಧಿಪಡಿಸಿದ ಜಾಗದಲ್ಲಿ 50:50 ಅನುಪಾತದಲ್ಲಿ ನಿವೇಶನ ನೀಡುವುದಾಗಿ ಕೋರ್ಟ್‌ನಲ್ಲಿ ಭರವಸೆ ನೀಡಿ ರೈತರಿಂದ ಕೇಸ್ ವಾಪಸ್ ಪಡೆಸಲಾಗಿತ್ತು. ಆದರೆ, ಈಗ ನಿವೇಶನ ಲಭ್ಯವಿಲ್ಲ ಎಂದು ಅಧಿಕಾರಿಗಳು ಹಿಂಬರಹ ನೀಡುತ್ತಿದ್ದಾರೆ. ವರ್ಷಕ್ಕೆರಡು ಬಾರಿ ಪರಿಹಾರ ಪಡೆದುಕೊಳ್ಳಿ ಎಂದು ನೋಟಿಸ್ ನೀಡುವ ಅಧಿಕಾರಿಗಳು, ಅಲ್ಲಿಗೆ ಹೋದರೆ ಹಾಸನ, ಮೈಸೂರು ಎಂದು ಅಲೆದಾಡಿಸುತ್ತಿದ್ದಾರೆ. ಪರಿಹಾರ ಕೇವಲ ಪೇಪರ್ ಮೇಲೆ ಉಳಿದಿದ್ದು, ಅಧಿಕಾರಿಗಳು ರೇವಣ್ಣ ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

ಪ್ರಸ್ತುತ ಈ ಜಾಗದ ಪಕ್ಕದಲ್ಲೇ ರೇವಣ್ಣ ಅವರ ನೇತೃತ್ವದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತಿದ್ದು, ಅಲ್ಲಿ ಅಡಿಗೆ 7–8 ಸಾವಿರ ರೂ. ದರವಿದೆ. ಹೀಗಿರುವಾಗ ನಮಗೆ ಎಕರೆಗೆ ಕೇವಲ 25 ಲಕ್ಷ ರೂ. ಕೊಟ್ಟರೆ ಏನು ಮಾಡುವುದು, ನಮಗೆ ಪರಿಹಾರದ ಸೈಟೂ ಬೇಡ, ದುಡ್ಡೂ ಬೇಡ, ನಮ್ಮ ಜಮೀನನ್ನು ನಮಗೆ ಡಿನೋಟಿಫೈ ಮಾಡಿ ವಾಪಸ್ ಕೊಡಿಸಿ ಎಂದು ರೈತರು ಸಿಎಂ ಮುಂದೆ ಗೋಳು ತೋಡಿಕೊಂಡರು.

ಶಾಸಕ ಶಿವಲಿಂಗೇಗೌಡ ಅವರು ರೈತರ ಪರವಾಗಿ ಧ್ವನಿ ಎತ್ತಿ, ಕೋರ್ಟ್ ನಿರ್ದೇಶನದ 50:50 ಶೇರಿಂಗ್ ಉಲ್ಲಂಘನೆಯಾಗಿದೆ. ಹಾಸನಕ್ಕೆ ನಿಜವಾಗಿಯೂ ಐಟಿ ತರುವುದಾದರೆ ನಾವು ರೈತರ ಕಾಲು ಹಿಡಿದು 350 ಎಕರೆ ಭೂಮಿ ಕೊಡಿಸುತ್ತೇವೆ. ಆದರೆ ಐಟಿ ನೆಪದಲ್ಲಿ ರೈತರನ್ನು ಲೂಟಿಮಾಡಲು ಬಿಡುವುದಿಲ್ಲ ಎಂದರು. ರೈತರ ಹಾಗೂ ಕ್ಲಾಸ್ ಒನ್ ಗುತ್ತಿಗೆದಾರರ ನಡುವೆ ಭಿನ್ನಾಭಿಪ್ರಾಯ ಮೂಡಿಸಿ ಒಡೆದು ಆಳುವ ರಾಜಕೀಯ ಮಾಡಲಾಗುತ್ತಿದೆ ಎಂಬ ದೂರನ್ನು ಆಲಿಸಿದ ಸಿಎಂ, ಪ್ರಕರಣದ ಎಲ್ಲಾ ಆಯಾಮಗಳನ್ನು ಪರಿಶೀಲಿಸಿ ಕಾನೂನುಬದ್ಧ ಹಾಗೂ ನ್ಯಾಯಸಮ್ಮತ ರೀತಿಯಲ್ಲಿ ಸಮಸ್ಯೆ ಬಗೆಹರಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.ಅಧಿಕಾರಿಗಳು ಪ್ರಾಥಮಿಕ ವಾಸ್ತವ ಸಂಗತಿಗಳನ್ನು ವಿವರಿಸಿದ್ದಾರೆ. ಅವರ ಜೊತೆ ಮತ್ತೊಂದು ಸುತ್ತಿನ ತುರ್ತು ಸಭೆ ನಡೆಸಿ, ರೈತರ ಹಿತರಕ್ಷಣೆಗೆ ಬದ್ಧವಾಗಿರುವ ಸೂಕ್ತ ಪರಿಹಾರ ಮಾರ್ಗವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ಸಿಎಂ ಭರವಸೆ ನೀಡಿದರು.

ಸಭೆಯಲ್ಲಿ ಸಂಸದ ಶ್ರೇಯಸ್ ಪಟೇಲ್, ಮಾಜಿ ಎಂಎಲ್‌ಸಿ ಗೋಪಾಲಸ್ವಾಮಿ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಜನರ ಧ್ವನಿಯಾಗಿ ಕೆಲಸ ಮಾಡುವೆ

**ನವದೆಹಲಿ, ಜೂ.29:** ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯಸಭೆ ಸದಸ್ಯರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಸಂಸತ್ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಸಭೆ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಅವರು ಪ್ರಮಾಣವಚನ ಬೋಧಿಸಿದರು.




■ ರಾಜ್ಯಸಭೆ ಸದಸ್ಯರಾಗಿ ಮಲ್ಲಿಕಾರ್ಜುನ ಖರ್ಗೆ ಪ್ರಮಾಣ

ಪ್ರಮಾಣವಚನ ಸ್ವೀಕಾರದೊಂದಿಗೆ ರಾಜ್ಯಸಭೆ ಪ್ರತಿಪಕ್ಷ ನಾಯಕನಾಗಿಯೂ ಖರ್ಗೆ ಅವರು ಆಯ್ಕೆಯಾದರು. ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಮಲ್ಲಿಕಾರ್ಜುನ ಖರ್ಗೆ, ನನ್ನ ಸುದೀರ್ಘ ಸಾರ್ವಜನಿಕ ಜೀವನ ಮತ್ತು ಸಂಸದೀಯ ಸೇವೆಯ ಪ್ರಯಾಣದಲ್ಲಿ ನನ್ನ ಮೇಲೆ ನಿರಂತರವಾಗಿ ಅಪಾರ ವಿಶ್ವಾಸವಿಟ್ಟ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಕ್ಷದ ಕೋಟ್ಯಂತರ ಕಾರ್ಯಕರ್ತರು ಹಾಗೂ ಇಂಡಿಯಾ ಒಕ್ಕೂಟದ ಎಲ್ಲಾ ಸಹೋದ್ಯೋಗಿ ಮಿತ್ರರಿಗೆ ಮನಃಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದಿದ್ದಾರೆ. ಪ್ರಮಾಣ ವಚನ ಸ್ವೀಕಾರದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಖರ್ಗೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿ ದೇಶದ ಜನರ ಸೇವೆಯನ್ನು ಮುಂದುವರಿಸುತ್ತಿರುವುದು ತಮಗೆ ಹೆಮ್ಮೆಯ ಮತ್ತು ಜವಾಬ್ದಾರಿಯ ವಿಷಯವಾಗಿದೆ ಎಂದರು.

### ಮಾ.ನಾಗರಾಜ್ ಸೇರಿ ಇತರ 6 ಮಂದಿ ಪ್ರಮಾಣವಚನ

**ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಬಿಜೆಪಿ ನಾಯಕ ತರುಣ್ ಚುಗ್ ಸೇರಿ ಒಟ್ಟು ಎಂಟು ಮಂದಿ ರಾಜ್ಯಸಭೆ ಸದಸ್ಯರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಈ ಪೈಕಿ ಕರ್ನಾಟಕದಿಂದ ಬಿಜೆಪಿಯ ಮಾ.ನಾಗರಾಜ್, ಜಿತೇಂದ್ರ ಮೇಘ್‌ಜಿಭಾಯ್ ಕಂಜಾರಿಯಾ ಮತ್ತು ಮಾನ್ ಸಿಂಗ್ ಮೇರಾಮನ್ ಪರ್ಮಾರ್ (ಗುಜರಾತ್), ರಾಜೇಂದ್ರ ಹೀರಾಲಾಲ್ ಜೈನ್ (ಮಹಾರಾಷ್ಟ್ರ), ಅಧಿಕಾರಿಮಯಂ ಶಾರದಾ ದೇವಿ (ಮಣಿಪುರ) ಮತ್ತು ಅಲ್ಕಾ ಸಿಂಗ್ (ರಾಜಸ್ಥಾನ) ಸೇರಿದ್ದಾರೆ.**



# ಮಹಾತ್ಮ ಗಾಂಧಿ ವಿಬಿಜಿ ರಾಮ್‌ಜೀ ಎಂದು ಹೆಸರಿಡಿ

**ನವದೆಹಲಿ, ಜೂ.29:** ಉದ್ಯೋಗ ಖಾತ್ರಿ ಯೋಜನೆಯಲ್ಲಿ ಗ್ರಾಮ ಸ್ವರಾಜ್ಯದ ಪ್ರತಿಪಾದಕರಾಗಿದ್ದ ಮಹಾತ್ಮಾ ಗಾಂಧಿ ಹೆಸರು ಕೈಬಿಟ್ಟಿರುವ ಕೇಂದ್ರ ಸರ್ಕಾರ, ಮಹಾತ್ಮ ಗಾಂಧಿ ವಿಬಿ ಜಿ ರಾಮ್ ಜೀ ಎಂದು ಮರುನಾಮಕರಣ ಮಾಡಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಆಗ್ರಹಿಸಿದ್ದಾರೆ.

ದೆಹಲಿಯಲ್ಲಿ ಸೋಮವಾರ ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅಧ್ಯಕ್ಷತೆಯಲ್ಲಿ ನಡೆದ ಎಲ್ಲ ರಾಜ್ಯಗಳ ಗ್ರಾಮೀಣಾಭಿವೃದ್ಧಿ ಸಚಿವರ ಸಭೆಯಲ್ಲಿ ಮಾತನಾಡಿದ ಅವರು, ಗಾಂಧೀಜಿ ಅವರು ಭಾರತ ಹಳ್ಳಿಗಳ ದೇಶವಾಗಿದ್ದು, ದೇಶದ ಆತ್ಮ ಇರುವುದೇ ಗ್ರಾಮಗಳಲ್ಲಿ ಎಂದು ಹೇಳಿದ್ದರು. ಗ್ರಾಮಗಳ ಅಭಿವೃದ್ಧಿ ಆಗದೆ ದೇಶದ ಅಭಿವೃದ್ಧಿ ಆಗದು ಎಂದು ಪ್ರತಿಪಾದಿಸಿದ್ದರು, ಇಂತಹ ಮಹಾಪುರುಷರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ. ಈ ಯೋಜನೆಗೆ ಮಹಾತ್ಮ ಗಾಂಧೀ ಹೆಸರು ಸೇರಿಸಬೇಕು ಇಲ್ಲವೇ ದೇಶದಲ್ಲಿರುವ 2.68 ಲಕ್ಷ ಗ್ರಾ.ಪಂ.ಗಳಿಗೆ ಮಹಾತ್ಮ ಗಾಂಧೀ ಹೆಸರಿಡಬೇಕು ಎಂದು ಒತ್ತಾಯಿಸಿದರು.

**365 ದಿನವೂ ಉದ್ಯೋಗ:** ಗ್ರಾಮೀಣ ಜನರಿಗೆ ಸುಗ್ಗಿಯ ಕಾಲದಲ್ಲಿ 60 ದಿನಗಳ ಕಾಲ ಉದ್ಯೋಗ ನೀಡುವುದಿಲ್ಲ ಎಂಬುದು ಸರಿಯಲ್ಲ. ಗ್ರಾಮೀಣ ಕುಟುಂಬದ ಜನರು ಉದ್ಯೋಗಕ್ಕೆ ಬೇಡಿಕೆ ಇಟ್ಟಾಗ ಅವರಿಗೆ ಉದ್ಯೋಗ ನೀಡಬೇಕು. ವರ್ಷದ 365 ದಿನವೂ ಉದ್ಯೋಗದ ಖಾತ್ರಿ ನೀಡಬೇಕು ಎಂದು ಖಂಡ್ರೆ ಸಲಹೆ ನೀಡಿದರು.



ಕೇಂದ್ರ ಸರ್ಕಾರ ವಿಬಿಜಿ ರಾಮ್‌ಜಿಯಲ್ಲಿ 60:40ರ ಅನುಪಾತ ಮಾಡಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರಗಳಿಗೆ ಅಧಿಕ ಹೊರೆಯಾಗುತ್ತಿದೆ. ಹಿಂದೆ ಇದ್ದಂತೆ 90:10ರ ಅನುಪಾತವನ್ನೇ ಮುಂದುವರಿಸಬೇಕು ಹಾಗೂ 15ನೇ ಹಣಕಾಸು ಆಯೋಗದ ಶಿಫಾರಸಿನಂತೆ ರಾಜ್ಯಕ್ಕೆ 2186 ಕೋಟಿ ರೂ. ಬಾಕಿ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

## ಮುಖ್ಯಮಂತ್ರಿ ಶಿವಕುಮಾರ್ ನೆಹರು ಕುಟುಂಬದ ನಂಬಿಕಸ್ತ ಬಂಟ!





ದೊಡ್ಡಾಲಳ್ಳಿ ಕೆಂಪೇಗೌಡ ಶಿವಕುಮಾರ್ ದಕ್ಷ ಜಾತ್ಯಾತೀತ, ದಕ್ಷಿಣ ಭಾರತದ ಅಗ್ರಮಾನ್ಯ ಕಾಂಗ್ರೆಸ್ ನಾಯಕ. ತನು, ಮನ, ಧನ, ಆಯಸ್ಸು ಶಕ್ತಿ ಎಲ್ಲವನ್ನು ಕಾಂಗ್ರೆಸ್ ಪಕ್ಷಕ್ಕೆ ಅರ್ಪಿಸಿಕೊಂಡಿರುವ ರುವಾರಿ. ಇಂದಿರಾಗಾಂಧಿ ಕುಟುಂಬದ ನಂಬಿಕಸ್ತ ಬಂಟ, ಸರ್ವಧರ್ಮ ಜನಾಂಗಗಳನ್ನು ಗೌರವಿಸಿ; ಅಪ್ಪಿಕೊಂಡು, ಒಪ್ಪಿಕೊಂಡು ಬಂದ ಕ್ರಿಯಾಶೀಲ ರಾಜಕಾರಣಿ. ಕರ್ನಾಟಕದ ಬೇಸಾಯ ಕುಟುಂಬಕ್ಕೆ ಸೇರಿದ ಮಣ್ಣಿನ ಮಗ; ಭಾರತದ ಎತ್ತರಕ್ಕೆ ಬೆಳೆಯುತ್ತಿರುವ ಶಿವಕುಮಾರ್ ದೈತ್ಯ ಸಂಘಟನೆಯ ಕುಶಾಲಾಗ್ರ ಮತಿಯ ರಾಜಕಾರಣಿ. ಮುಖ್ಯಮಂತ್ರಿ ಶಿವಕುಮಾರ್ ದಕ್ಷಿಣ ಭಾರತದ ಸಂಘಟನೆಯ ಆಶಾಕಿರಣ. ಎಲ್ಲಾ ಜನಾಂಗದ ಧರ್ಮಗುರುಗಳು ಶಿವಕುಮಾರ್‌ರನ್ನು ಅಭಿನಂದಿಸಿದ್ದು ಕಾಲಘಟ್ಟದ ವಿರಾಟರೂಪ. ವಿಧಿ ದೈವ, ಭೂಮಂಡಲ ಆಯಸ್ಸು, ಕಾಲನ ಮಹಿಮೆ, ಶಿವಕುಮಾರ್ ಅವರೇ ಹೇಳುವಂತೆ ದೊಡ್ಡ ಬಂಡೆ ದೈವತ್ವದ ಯಾವ ಮೂರ್ತಿಗಳನ್ನು ಬೇಕಾದರೂ ಕೆತ್ತಿಸಬಹುದು. ಸಾಮರ್ಥ್ಯದ ಹೋರಾಟದಿಂದ ರಾಜ್ಯದ ಮುಖ್ಯಮಂತ್ರಿ ಆಗಿರುವುದು, ಸಮಸ್ತ ಕನ್ನಡಿಗರು ಸಂಭ್ರಮಿಸುವ ದಿನ. ದೈವಭಕ್ತರಾಗಿರುವ ಶಿವಕುಮಾರ್ ದಕ್ಷತೆಯಿಂದ ಸರ್ಕಾರ ನಡೆಸುತ್ತಾರೆಂಬುದು ಎಲ್ಲರ ನಂಬಿಕೆಯಾಗಿದೆ.

ದಕ್ಷಿಣದ ತೆಲಂಗಾಣ, ಕೇರಳ, ತಮಿಳುನಾಡು, ಗೋವಾ ಜೊತೆಗೆ, ಅಸ್ಸಾಂ, ಗುಜರಾತ್ ರಾಜ್ಯಗಳಲ್ಲೂ ಕಾಂಗ್ರೆಸ್ ಸಂಘಟನೆಯ ಕಹಳೆ ಊದಿದವರು ಮುಖ್ಯಮಂತ್ರಿ ಶಿವಕುಮಾರ್. ಸೋನಿಯಾಗಾಂಧಿ, ಪ್ರಿಯಾಂಕ, ಸಂಸತ್ತಿನ ವಿರೋಧ ಪಕ್ಷದ ನಾಯಕ ರಾಹುಲ್‌ಗಾಂಧಿಗೆ ಆಪ್ತರಾಗಿರುವ ಶಿವಕುಮಾರ್; ಸಂಘಟನೆಯ ಶಕ್ತಿ. ಕರ್ನಾಟಕ ರಾಜ್ಯದ ಶಾಸಕರು, ಮಂತ್ರಿಗಳು ಮತ್ತು ಕಾಂಗ್ರೆಸ್ ಮುಖಂಡರುಗಳು, ಶಿವಕುಮಾರ್ ಸರ್ಕಾರಕ್ಕೆ ಬೆಂಬಲ ನೀಡುವುದು ಅಗತ್ಯವಾಗಿದೆ. ಯಾಕೆಂದರೆ ಶಿವಕುಮಾರ್ ರಾಷ್ಟ್ರೀಯ ಕಾಂಗ್ರೆಸ್‌ನ ನಂಬಿಕಸ್ತ ಸೇವಕ. ನೆಹರು ಕುಟುಂಬದ ಬಂಟ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಶಿವಕುಮಾರ್ ಹಗಲು ರಾತ್ರಿ ನೂರಾರು ಭಾರಿ ಕರ್ನಾಟಕವನ್ನು ಸುತ್ತಿ ಪಕ್ಷ ಕಟ್ಟಿದ್ದಾರೆ. ಕಾಂಗ್ರೆಸ್ ಪಕ್ಷವನ್ನು ಯುವಕರು, ವಿದ್ಯಾವಂತರು ತತ್ವಸಿದ್ಧಾಂತದ ಮೇಲೆ ಸಂಘಟಿಸಬೇಕು. ಕಾಂಗ್ರೆಸ್ ಹರಿವ ನದಿಯಾಗಬೇಕು. ದಕ್ಷಿಣ ಭಾರತದ ಸಂಘಟನೆಯ ದೈತ್ಯ ಶಕ್ತಿಯಾಗಿರುವ ಶಿವಕುಮಾರ್‌ರನ್ನು ದುರ್ಬಲಗೊಳಿಸುವ ಯಾವುದೇ ಯತ್ನ ಕಾಂಗ್ರೆಸಿಗೆ ದ್ರೋಹ ಬಗೆದಂತೆ; ಇನ್ನು ಹತ್ತು ವರ್ಷಗಳ ಕಾಲ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಈ ವಾಸ್ತವತೆಯನ್ನು ಕಾಂಗ್ರೆಸಿನ ಧುರೀಣರು, ಶಾಸಕರು, ಮಂತ್ರಿಗಳು ಅವಲೋಕಿಸಬೇಕು. ಬೆಂಗಳೂರಿನಲ್ಲಿ ಕೋಟೆ ಕಟ್ಟಿಕೊಂಡು ಮದ್ಯ, ಮಾಂಸದ ಅಮಲಿನಲ್ಲಿ ಜಾತಿಯ ವಿಷಬೀಜ ಬಿತ್ತುತ್ತಿರುವವರು ಬದಲಾಗಬೇಕು. ಬಿಜೆಪಿ ಸರ್ಕಾರ ಒಂದೊಂದು ರಾಜ್ಯಗಳ ಮೇಲೆ ದಂಡ ಯಾತ್ರೆ ನಡೆಸುತ್ತಿರುವ ಅಪಾಯ ಎದ್ದು ಕಾಣುತ್ತಿದೆ.

2028ರ ವಿಧಾನಸಭೆ ಮತ್ತು ಲೋಕಸಭೆಯ ಮಹಾಚುನಾವಣೆಯ ಅಖಾಡದ ಹೋರಾಟಕ್ಕೆ ಶಿವಕುಮಾರ್‌ರನ್ನು ಬಿಟ್ಟರೆ ಬೇರೆ ಯಾರು ಇಲ್ಲ. ಹತ್ತು ಲಕ್ಷ ಕೋಟಿ ಸಾಲದಲ್ಲಿ ಸರ್ಕಾರ ಸಾಗುತ್ತಿದೆ. ಇಂಥ ಸಂಕಷ್ಟದ ಹೊತ್ತಿನಲ್ಲಿ ಇಲಾಖೆಗಳ ಬಗ್ಗೆಯೇ ಮಂತ್ರಿಗಳು ತಲೆಕೆಡಿಸಿಕೊಳ್ಳುವುದು ಸಾದುವಾದುದಲ್ಲ. ಮುಖ್ಯಮಂತ್ರಿ ಶಿವಕುಮಾರ್ ದಕ್ಷತೆಯಿಂದ ಆಡಳಿತ ನಡೆಸಿದಲ್ಲಿ ಮತ್ತೆ ಕಾಂಗ್ರೆಸ್ ಕರ್ನಾಟಕದಲ್ಲಿ ಜಯಭೇರಿ ಬಾರಿಸುತ್ತದೆ. ದಕ್ಷಿಣ ಭಾರತದ ಕೇರಳ ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳಲ್ಲಿ ಕಾಂಗ್ರೆಸ್ ಕಹಳೆ ಊದಿದವರೇ ಶಿವಕುಮಾರ್. ಡೆಲ್ಲಿ ಕಾಂಗ್ರೆಸ್ ಹೈಕಮಾಂಡ್‌ಗೆ ಶಿವಕುಮಾರ್ ಅವರ ರಣತಂತ್ರದ ಅಭೂತಪೂರ್ವ ಸಂಘಟನೆ; ಎಲ್ಲಾ ಸಮುದಾಯಗಳನ್ನು ಒಗ್ಗೂಡಿಸುವ ಜಾದು ಗೊತ್ತಿದೆ. ಶಿವಕುಮಾರ್ ಅವರ ರಾಜಕಾರಣದ ಚಾಣಕ್ಷತನ ದೇಶದ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹಮಂತ್ರಿ ಅಮಿತ್ ಶಾರವರಿಗೂ ಗೊತ್ತಿದೆ. ದಕ್ಷಿಣ ಭಾರತದಲ್ಲೇ ಚುನಾವಣಾ ಪ್ರಚಾರದ ರಣಕಹಳೆಯೇ ಶಿವಕುಮಾರ್; ಅಸಾಮಾನ್ಯ ಸಮರ್ಥ ರಾಜಕಾರಣಿ ಎಂದು ರೂಪಿಸಿವೆ. ಇನ್ನೂ 15 ವರ್ಷಗಳ ಕಾಲ ಕಾಂಗ್ರೆಸ್ ಪಕ್ಷಕ್ಕೆ ಅನಿವಾರ್ಯವಾಗಿರುವ, ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿ ಆಗಿರುವುದಕ್ಕೆ ಸಮಸ್ತ ಕನ್ನಡಿಗರು ಸಂತಸ ಪಡಬೇಕಾದ ಕಾಲ. ದೇಶ ವಿದೇಶಗಳಿಂದ ರಾಜಕೀಯ ಗಣ್ಯರು ಶಿವಕುಮಾರ್‌ರವರನ್ನು ಅಭಿನಂದಿಸುತ್ತಿರುವುದು; ಅವರ ವ್ಯಕ್ತಿತ್ವದ ಮೇರು ಘಟ್ಟ. ಕರ್ತಾರ ಕಮ್ಮಟನ ಹರ ವಿರಂಚರ ವಿಧಿತ. ಈ ಭೂಮಂಡಲದಲ್ಲಿ ಯಾರು ಶಾಶ್ವತವು ಅಲ್ಲ, ಯಾವುದೂ ಶಾಶ್ವತವಲ್ಲ, ಜೀವನವೊಂದು ನಾಟಕ.

ಜಾಗತಿಕ ಬರಹಗಾರ, ಮಾನವ ಹಕ್ಕುಗಳ ಪ್ರತಿಪಾದಕನಾದ ನಾನು 30 ವರ್ಷಗಳಿಂದ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡುತ್ತಿದ್ದೇನೆ. ರಾಷ್ಟ್ರೀಯ ಕಾಂಗ್ರೆಸ್ ದೀನ ದಲಿತರು, ರೈತರು, ದುರ್ಬಲರು, ಅಲ್ಪಸಂಖ್ಯಾತರು ಮತ್ತು ದಿಕ್ಕು ದೆಶೆ ಇಲ್ಲದವರ ಪರ ಕಾನೂನುಗಳನ್ನು ಮಾಡುತ್ತಿರುವ ಪಕ್ಷ, ಜೊತೆಗೆ ಪ್ರಬಲ ಕೋಮಿನವರ ಬೆಂಬಲವೂ ಅತ್ಯಗತ್ಯ. ಸಮಾಜದ ಎಲ್ಲಾ ಬಡವರ ಸರ್ವಾಂಗೀಕರಣದ ಅಭಿವೃದ್ಧಿ ಕಾಂಗ್ರೆಸ್ ಪಕ್ಷದ ತಾರಕಮಂತ್ರವಾಗಬೇಕು. ಶಿವಕುಮಾರ್ ಮುಖ್ಯಮಂತ್ರಿಯಾದ ಘಳಿಗೆಯಲ್ಲೇ ಎರಡು ಅಭೂತಪೂರ್ವ ಘೋಷಣೆಗಳನ್ನು ಮಾಡಿದ್ದಾರೆ. ರಾಜ್ಯದ ಎಲ್ಲಾ ಶಾಲಾ, ಕಾಲೇಜು ಮಕ್ಕಳಿಗೆ ಉಚಿತ ಬಸ್ ಪ್ರಯಾಣ. ಎರಡನೆಯದು ಕರ್ನಾಟಕದಾದ್ಯಂತ ಸಮಸ್ಯೆಯಾಗಿದ್ದ ಬಿ ಖಾತೆಯನ್ನು ಎ ಖಾತೆಯಾಗಿ ಘೋಷಿಸಿರುವುದು. ಈ ಎರಡು ಮಹತ್ವ ಪೂರ್ಣ ಕಾನೂನುಗಳನ್ನು ತಂದಿದ್ದಕ್ಕೆ ಸಮಸ್ತ ಕನ್ನಡಿಗರ ಪರವಾಗಿ ಶಿವಕುಮಾರ್‌ರನ್ನು ಅಭಿನಂದಿಸುತ್ತೇನೆ. ಮಾಜಿ ಮುಖ್ಯಮಂತ್ರಿ ನನ್ನ ಪರಮ ಮಿತ್ರರಾದ ಸಿದ್ದರಾಮಣ್ಣ ಈ ಬಗೆಯ ಸಮಾಜವಾದಿ ಘೋಷಣೆಗಳನ್ನು ಮೆಚ್ಚಿ ಶಿವಕುಮಾರ್‌ರನ್ನು ಬೆಂಬಲಿಸಬೇಕು. ಮಾಜಿ ಮುಖ್ಯಮಂತ್ರಿ ಸಿದ್ದರಾಮಣ್ಣನಂತವರು 5 ಜನ ಸೇರಿದರು ಒಬ್ಬ ಶಿವಕುಮಾರ್ ಅವರಿಗೆ ಸಮ. ಸಿದ್ಧಾಂತ ಮತ್ತು ಜನಪರ ಚಿಂತನೆ ಪ್ರಧಾನವೇ ಪರಂತು ಜಾತಿ, ಜಾತಿಯ ವಿಷ ಬೀಜವಲ್ಲ. ಜಾಗತಿಕವಾಗಿ ಜನತಂತ್ರವನ್ನು ಭದ್ರ ಬುನಾದಿಯ ಮೇಲೆ ಕಟ್ಟುವುದು ಅವಶ್ಯ.

ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಯಾಗಿ ಸಿದ್ದರಾಮಣ್ಣ 8 ವರ್ಷಗಳ ಕಾಲ ಏಕಪಕ್ಷೀಯವಾಗಿ ಕೆಲಸ ಮಾಡಿದ್ದಾರೆ. 10 ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ ಅಧಿಕಾರ ಮಾಡಿದ್ದಾರೆ. ಜೆಡಿಎಸ್ ಪಕ್ಷದಿಂದ ಬಂದ ನಿಮಗೆ ಕಾಂಗ್ರೆಸ್ ಪಕ್ಷ ಎಲ್ಲಾ ಅಧಿಕಾರವನ್ನು ಕೊಟ್ಟಿದೆ. ನಿಮ್ಮಷ್ಟೇ ಸಮರ್ಥವಾಗಿ ಕಾಂಗ್ರೆಸ್ ಕಟ್ಟಿದ ಶಿವಕುಮಾರ್ ರವರಿಗೆ ಎಲ್ಲಾ ರೀತಿಯ ಬೆಂಬಲ ಕೊಡುವುದು ರಾಜಕಾರಣದ ಹೆಗ್ಗಳಿಕೆ. ಸಮಾಜವಾದಿ ಎಂದು ಹೇಳಿ ಕೊಳ್ಳುವ ನೀವು ಸಾಮಾಜಿಕನ್ಯಾಯ ಮತ್ತು ಕಾಂಗ್ರೆಸ್ ಪಕ್ಷವನ್ನು ಯುವಕರಿಗೆ ನೀಡುವ ದಿಕ್ಕಿನಲ್ಲಿ ನೀವು ಚಿಂತಿಸದೆ ಹೋದದ್ದು ದೊಡ್ಡ ವಿಪರ್ಯಾಸ ಸಿದ್ದರಾಮಣ್ಣ? ಪ್ರಜಾತಂತ್ರ ಸಮೃದ್ಧವಾಗಿ ನಿಲ್ಲಬೇಕಾದರೆ ಯುವಕರಿಗೆ ಮಾರ್ಗದರ್ಶನವಾಗಬೇಕು. ಜಗತ್ತಿನಲ್ಲಿ ಸುಖಶಾಂತಿ ನೆಲಸಬೇಕಾದರೆ ಜನತಂತ್ರ ಆಧೂತವಾಗಿ ಬೆಳೆಯಬೇಕು.

ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಗೆ ನಿಮ್ಮನ್ನು ಸದಸ್ಯರನ್ನಾಗಿ ರಾಹುಲ್‌ಗಾಂಧಿಯವರು ನೇಮಕ ಮಾಡಿರುವುದು ಪಕ್ಷ ನಿಮಗೆ ನೀಡಿರುವ ಬಹುದೊಡ್ಡ ಕೊಡುಗೆ. ರಾಜಕಾರಣದ ಬದುಕಿನಲ್ಲಿ ಸಹಾಯ, ಸಾಮಾಜಿಕ ನ್ಯಾಯ, ಧರ್ಮದ ಜನಾಂದೋಲನದಲ್ಲಿ ಭಗವಂತಿಕೆಯನ್ನು ಕಾಣುವುದು ಬದುಕಿನ ವಿಜೃಂಭ. ವಿಶ್ವವೇ ತನ್ನದೆಂದುಕೊಂಡ ಬಲಿಷ್ಠ ನಾಯಕರುಗಳು ಹೇಳಲೆಸರಿಲ್ಲದಂತೆ ಅಮಾಯಕರಾಗಿ ಕುಂತು ನಿಂತಲ್ಲೇ ಕುಸಿದು ಬಿದ್ದು ಹೆಣವಾಗಿದ್ದಾರೆ.

**ಸಿಂಹಾಸನ ದಾಹ**! ಅಧಿಕಾರದ ಮತ್ತು! ಜಾತಿಯ ವಿಷಬೀಜ! ಮಾನವೀಯತೆಯನ್ನು ನುಚ್ಚುನೂರು ಮಾಡುವ ಹೇಯ ಘಟ್ಟ. ಜಗತ್ತಿನ ಮಾನವ ಚರಿತ್ರೆಯಲ್ಲಿ ಚಕ್ರವರ್ತಿಗಳು, ಸೇನಾನಿಗಳು, ಪ್ರಧಾನಿಗಳು, ವಿಶ್ವಸುಂದರಿಯವರು ಮಣ್ಣಲ್ಲಿ ಮಣ್ಣಾಗಿದ್ದಾರೆ. ಜಾತಿ, ಹಣ, ಅಧಿಕಾರ ಗರ್ವ ಮಾಯಾಜಿಂಕೆ; ಭೂಮಂಡಲದ ಶಾಶ್ವತತೆಯ ಭ್ರಮೆ! ದಿನ ದಿನವೂ ಮುಪ್ಪು, ಜಾಡ್ಯಗಳು ಬೆನ್ನ ಹತ್ತುತ್ತಿಹವು.

ಮೈಸೂರಿನ ನಿವೇಶನ ಹಂಚಿಕೆಯ ಹಗರಣದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಭ್ರಷ್ಟಾಚಾರ ಮತ್ತು ಅಕ್ರಮಗಳಲ್ಲಿ ನೀವು ಮತ್ತು ನಿಮ್ಮ ಪತ್ನಿ ಪಾಲುದಾರರೆಂದು; ನಡೆಸಿದ ಪ್ರತಿಭಟನೆ ರಾಜ್ಯಕ್ಕೆ ಗೊತ್ತಿದೆ. ಸಿದ್ದರಾಮಣ್ಣ ಅವರ ಪತ್ನಿ ಪಾರ್ವತಿರವರಿಗೂ ನಿವೇಶನಗಳಿಗೂ ಯಾವ ಸಂಬಂಧ ಇಲ್ಲವೆಂದು ರಾಜ್ಯದ ಎಲ್ಲಾ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅಗ್ರ ಲೇಖನಗಳನ್ನು ಬರೆದವನು ಈ ದುರ್ಗದ ರಾಜೇಗೌಡ. **ನನ್ನ ಪರಿಶ್ರಮಕ್ಕೆ ನೀವು ಟೀಗೂ ಆಹ್ವಾನಿಸದೆ ಇದದ್ದು ನಿಮ್ಮ ದೊಡ್ಡತನ.**

ಈ ಸಂಬಂಧ ಇಡೀ ರಾಜ್ಯದಲ್ಲಿ ಆಂದೋಲನ ಸೃಷ್ಟಿ ಮಾಡಿದವನು ನಾನು. ಅಹಿಂದ ಸಮುದಾಯದ ಯಾವ ಬರಹಗಾರರು, ಪ್ರಗತಿಶೀಲರು, ಚಿಂತನ-ಮಂಥನಕಾರರು ನಿಮ್ಮ ಪರ ಧ್ವನಿ ಎತ್ತಲಿಲ್ಲ. ಅಗ್ರ ಉಗ್ರ ಅಮೂಲಾಗ್ರ ಲೇಖನಗಳನ್ನು ನಿಮ್ಮ ಪರವಾಗಿ ಬರೆಯಲಿಲ್ಲ. ರಾಷ್ಟ್ರೀಯ ಪತ್ರಿಕೆಗಳ ಮುಖಪುಟಗಳಲ್ಲಿ ಜಾಹೀರಾತು ರೂಪದಲ್ಲಿ ಪ್ರಕಟಣೆಗೆ ಲಕ್ಷಾಂತರ ರೂಪಾಯಿಗಳನ್ನು ಸಾಲ ಮಾಡಿಕೊಂಡವನು ನಾನು. ಅಹಿಂದ ವರ್ಗದ ಪ್ರಗತಿಶೀಲ ಬರಹಗಾರರು, ಬಾಷಣಕಾರರು ನಿಮ್ಮ ಪರ ಬೀದಿಗಿಳಿಯಲಿಲ್ಲ. ಭವಿಷತ್ತಿನ ಅಲ್ಲೋಲ ಕಲ್ಲೋಲದ ಚಿಂತಾಗ್ನಿಯಲ್ಲಿ ನೀವೆಷ್ಟು ರಾತ್ರಿಗಳು ನಿದ್ರೆಗಳಿಲ್ಲದೆ ಪರದಾಡಿದ್ದೀರಿ ಎಂಬುದು ನನಗೆ ಗೊತ್ತು. ಕೆಂಗಲ್ ಹನುಮಂತಯ್ಯನವರ ಜನ್ಮ ದಿನದಂದು ಮುಖ್ಯಮಂತ್ರಿಯಾಗಿ ನೀವು ನನಗೆ ಕೊಟ್ಟ ಮಾತಿಗೆ ತಪ್ಪಿದ್ದೀರಿ. ಸಿದ್ದರಾಮಣ್ಣ ಕೊಟ್ಟ ಮಾತಿಗೆ ತಪ್ಪುತ್ತಾರೆಂದು ನಾನು ಎಣಿಸಿರಲಿಲ್ಲ. ದುರ್ಗದ ರಾಜೇಗೌಡ ಒಕ್ಕಲಿಗ ಎಂಬ ಕಾರಣಕ್ಕೆ ನನ್ನನ್ನು ಕೈಬಿಟ್ಟು ನಿಮ್ಮ ಜನಾಂಗದ ಶಿವಣ್ಣನನ್ನು ಆಯ್ಕೆ ಮಾಡಿದ್ದೀರಿ. **ರಾಷ್ಟ್ರಕವಿ ಕನಕದಾಸರ ಕಾವ್ಯ ಸಂದೇಶವನ್ನು** ನಿಮಗೆ ನೆನಪು ಮಾಡುತ್ತೇನೆ. ಕುಲ ಕುಲ ಕುಲವೆಂದು ಹೊಡೆದಾಡದಿರಿ, ಕುಲದ ನೆಲೆಯನ್ನೇನಾದರೂ ಬಲ್ಲೀರಾ!!? ವಿಶ್ವಮಾನವತೆಯನ್ನು ಪ್ರತಿಪಾದಿಸಬೇಕಾಗಿದ್ದ ಸಿದ್ಧರಾಮಣ್ಣ ಕುಲದ ಭ್ರಮೆಯ ಕುಲುಮೆಯಲ್ಲಿ ಬಿದ್ದು ಒದ್ದಾಡುತ್ತಿರುವುದು ಪ್ರಜಾತಂತ್ರದ ಘೋರ ದುರಂತ.

**ದುರ್ಗದ ರಾಜೇಗೌಡ**
**ಜಾಗತಿಕ ಬರಹಗಾರ, ಮೊಬೈಲ್: 9740929960**

ADVT

## ನಿತ್ಯ ಪಂಚಾಂಗ 30.06.2026 ಮಂಗಳವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ ಋತು, ಚಾಂದ್ರಮಾನ, ಚೈತ್ರ–ವೈಶಾಖ ಮಾಸ

ಕದಳೀಗೌರೀ ವ್ರತ, ರಂಭಾ ತೃತೀಯಾ, ಕೈವಾರ ಮಹಾರಾಜ ಆರಾಧನೆ, ಮೊಹರಂ ತಿಂಗಳ ಆರಂಭ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ವನ್ಯಜೀವಿ ಸಂಪತ್ತು ರಕ್ಷಣೆಗೆ ಪರಿಣಾಮಕಾರಿ ಕ್ರಮ ಅಗತ್ಯ: ಸಿಎಂ ಡಿಕೆಶಿ

**ಬೆಂಗಳೂರು, ಜೂ.29:** ಅಮೂಲ್ಯ ವನ್ಯಜೀವಿ ಸಂಪತ್ತು ಸಂರಕ್ಷಣೆಗೆ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕು. ಅರಣ್ಯ ವಾಸಿಗಳ ಹಿತರಕ್ಷಣೆ ಜೊತೆಗೆ ಕೈಗಾರಿಕೆ ಹಾಗೂ ಗಣಿಗಾರಿಕೆ ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ನಿಗದಿತ ಕಾಲಮಿತಿಯೊಳಗೆ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆದೇಶ ನೀಡಿದ್ದಾರೆ.

ಅರಣ್ಯ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ಗಣಿಗಾರಿಕೆ ಸೇರಿ ನಾನಾ ಚಟುವಟಿಕೆಗಳಿಗೆ ಸರ್ಕಾರಿ ಜಾಗ ಪಡೆದು ವರ್ಷಗಳ ಕಾಲ ಚಟುವಟಿಕೆ ಆರಂಭಿಸದಿದ್ದರೆ ಕ್ರಮ ಕೈಗೊಳ್ಳಬೇಕು. ಬಾಕಿ ಇರುವ ಅರಣ್ಯ ಅನುಮತಿ ಪ್ರಕರಣಗಳನ್ನು ಜುಲೈ 15ರೊಳಗೆ ಇತ್ಯರ್ಥಪಡಿಸಬೇಕು. ಸರ್ಕಾರದ ಜಾಗ ಪಡೆದು ಐದಾರು ವರ್ಷಗಳ ಕಾಲ ಖಾಲಿಬಿಟ್ಟರೆ ಸರ್ಕಾರಕ್ಕೆ ಯಾವುದೇ ಆದಾಯ ದೊರೆಯುವುದಿಲ್ಲ. ಅಷ್ಟೇ ಅಲ್ಲದೆ, ಈ ಅವಧಿಯಲ್ಲಿ ಉತ್ಪಾದನಾ ವೆಚ್ಚ, ಸರಕುಗಳ ಬೆಲೆ ಹಾಗೂ ಯೋಜನೆಯ ಒಟ್ಟು ಮೌಲ್ಯವೂ



ಹೆಚ್ಚಾಗುತ್ತದೆ. ಇಂತಹ ವಿಳಂಬವನ್ನು ಸಹಿಸುವುದಿಲ್ಲ ಎಂದರು. ಅರಣ್ಯವಾಸಿಗಳ ಅರಣ್ಯ ಹಕ್ಕುಗಳನ್ನು ಯಾವುದೇ ಕಾರಣಕ್ಕೂ ಕಡೆಗಣಿಸಬಾರದು. ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟು ಅವರಿಗೆ ತೊಂದರೆ ನೀಡಬಾರದು. ನಿಯಮಾನುಸಾರ ಕುಡಿಯುವ ನೀರು, ರಸ್ತೆ, ವಿದ್ಯುತ್ ಸೇರಿದಂತೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಬೇಕು ಎಂದು ಸೂಚಿಸಿದರು. ನೆಡುತೋಪು ನಿರ್ಮಾಣ ಮಾಡಲು ಸಾರ್ವಜನಿಕರಿಗೆ ಸಸಿ ವಿತರಣೆ ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಇಲಾಖೆಯ ಆಡಳಿತ ವ್ಯವಸ್ಥೆ, ಪ್ರಮುಖ ಯೋಜನೆಗಳು ಹಾಗೂ ವಿವಿಧ ಹಂತಗಳಲ್ಲಿ ಖಾಲಿ ಇರುವ ಹುದ್ದೆಗಳ ಕುರಿತು ಸಮಗ್ರ ಮಾಹಿತಿ ಪಡೆದು, ಅಗತ್ಯ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು. ಬೆಳೆನಾಶ, ಜಾನುವಾರು ಜೀವಹಾನಿ, ಮಾನವ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಭಾಗಶಃ ಅಂಗವಿಕಲತೆ, ಮಾನವ ಗಾಯ, ಆಸ್ತಿನಾಶ, ಮಾಶಾಸನಗಳಿಗಾಗಿ 2025–2026ನೇ ಸಾಲಿನಲ್ಲಿ 6306 ಲಕ್ಷ ರೂ ಪರಿಹಾರ ವಿತರಿಸಲಾಗಿದೆ. ಮಾನವ, ಅರಣ್ಯಜೀವಿ ಸಂಘರ್ಷ ತಪ್ಪಿಸಲು ರೇಲ್ವೇ ಬ್ಯಾರಿಕೇಡ್, ಆನೆತಡೆ ಕಂದಕ ಮತ್ತು ಸೌರತಂತಿ ಬೇಲಿಗಳನ್ನು ಅಳವಡಿಸಲಾಗುತ್ತಿರುವ, ಆನೆ, ಚಿರತೆ ಕಾರ್ಯಪಡೆ ಹಾಗೂ ಎಸ್‌ಎಂಎಸ್ ಮತ್ತು ಇತರ ಡಿಜಿಟಲ್ ಬೋರ್ಡ್‌ಗಳ ಮೂಲಕ ಅರಿವು ಮೂಡಿಸುತ್ತಿರುವ ಬಗ್ಗೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು, ಪ್ರಾಣಿಗಳು ಸಹ ಈ ಎಲ್ಲಾ ಅಡೆತಡೆಗಳನ್ನು ದಾಟಲು ನಾನಾ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಹೀಗಾಗಿ ಅಧಿಕಾರಿಗಳು ಕೂಡ ಆಗಾಗ ಇತರೆ ಹೊಸ ಮಾರ್ಗೋಪಾಯಗಳ ಬಗ್ಗೆ ಅಧ್ಯಯನ ನಡೆಸಬೇಕು ಎಂದು ಸೂಚನೆ ನೀಡಿದರು. ಜೊತೆಗೆ ಇಲಾಖೆಯ ಖಾಲಿ ಹುದ್ದೆಗಳ ಭರ್ತಿ ಕುರಿತು ಪರಿಶೀಲನೆ ಮಾಡಬೇಕು. ಪ್ರಾಣಿ ಸಂಪತ್ತಿನ ಮೇಲೆ ನಿಗಾ ಇಡಲು ಥರ್ಮಲ್ ಡ್ರೋಣ್ ವ್ಯವಸ್ಥೆ ಜಾರಿಗೆ ತರಬೇಕು. ಶರಾವತಿ ಪಂಪ್ ಸ್ಟೋರೇಜ್, ಗೋವಾ ತಮ್ನೇರ್, ಕಳಸಾ ಬಂಡೂರಿ ಮತ್ತು ಬಿಡಿಎ ಫೆರಿಫೆರಲ್ ರಿಂಗ್ ರಸ್ತೆ ವಿಚಾರಕ್ಕೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಅರಣ್ಯ ಇಲಾಖೆಗಳ ವಿವಿಧ ಹಂತಗಳಲ್ಲಿ ಬಾಕಿ ಇರುವ ಅರಣ್ಯ ಅನುಮತಿ ವಿಚಾರಗಳಲ್ಲಿ ತ್ವರಿತ ಗತಿಯಲ್ಲಿ ಕ್ರಮ ವಹಿಸಿದರು. ಸರಕಾರದ ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿಗಳಾದ ತುಷಾರ್ ಗಿರಿನಾಥ್, ರಿತೇಶ್‌ಕುಮಾರ್ ಸಿಂಗ್, ಅಂಜುಮ್ ಪರ್ವೇಜ್, ಕರ್ನಾಟಕ ಅರಣ್ಯ ಪಡೆ ಮುಖ್ಯಸ್ಥರಾದ ಮೀನಾಕ್ಷಿ ನೇಗಿ, ಸಿಎಂ ಆರ್ಥಿಕ ಸಲಹೆಗಾರ ಎಲ್ ಕೆ ಅತೀಕ್ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಕೆಲಸದಲ್ಲಿ ಜೀರೋ, ವಿವಾದದಲ್ಲಿ ಹೀರೋ

**ಬೆಂಗಳೂರು, ಜೂ.29:** ಕಲ್ಯಾಣ ಕರ್ನಾಟಕದ ಶಾಲೆಗಳ ದುರಸ್ತಿ ಬಗ್ಗೆ ಮುಖ್ಯಮಂತ್ರಿಗಳಿಗೆ ಯಾವಾಗ ಪತ್ರ ಬರೆಯುತ್ತೀರಿ ಎಂದು ಕಲಬುರಗಿ, ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಕಾರ್ಯವೈಖರಿ ಬಗ್ಗೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಲೇವಡಿ ಮಾಡಿದ್ದಾರೆ. ತಾವು ಮತ್ತು ತಮ್ಮ ಕುಟುಂಬ ಕಲ್ಯಾಣ ಕರ್ನಾಟಕದ ಜನತೆಯ ಮತ ಪಡೆದು ದಶಕಗಳಿಂದ ಅಧಿಕಾರ ಅನುಭವಿಸುತ್ತಿದ್ದೀರಿ. ಆದರೆ ಕಲ್ಯಾಣ ಕರ್ನಾಟಕ ಮಾತ್ರ ಇನ್ನೂ ನಿಜಾಮರ ಆಡಳಿತದಲ್ಲಿಯೇ ಇದೆಯೇನೋ ಅನ್ನುವಷ್ಟು ಕೆಟ್ಟ ಪರಿಸ್ಥಿತಿಯಲ್ಲಿದೆ. ಕೆಲಸದಲ್ಲಿ ಜೀರೋ, ವಿವಾದದಲ್ಲಿ ಹೀರೋ ಎನ್ನುವಂತಾಗಿದೆ ನಡೆ ಎಂದು ಟೀಕಿಸಿದ್ದಾರೆ.

ಪತ್ರಿಕಾ ವರದಿಯನ್ನು ಒಮ್ಮೆ ಕಣ್ಣುಬಿಟ್ಟು ನೋಡಿ. ನಿಮ್ಮದೇ ಉಸ್ತುವಾರಿ ಜಿಲ್ಲೆಗಳನ್ನೊಳಗೊಂಡ ಕಲ್ಯಾಣ ಕರ್ನಾಟಕದ ಶಾಲಾ ಕೊಠಡಿಗಳ ದುಸ್ಥಿತಿ ಬಿಚ್ಚಿಡುತ್ತಿದೆ. 18,022 ಶಾಲಾ ಕೊಠಡಿಗಳು ಸಂಪೂರ್ಣ ಶಿಥಿಲಾವಸ್ಥೆಯಲ್ಲಿದ್ದು, ದುರಸ್ತಿಗೆ ಕಾಯುತ್ತಿವೆ. ಇದರಲ್ಲಿ ಬರೋಬ್ಬರಿ 8,006 ಕೊಠಡಿಗಳು ಸಂಪೂರ್ಣ ಜೀರ್ಣಾವಸ್ಥೆಯಲ್ಲಿದ್ದು, ಕಲಿಯಲು ಯೋಗ್ಯವೇ ಅಲ್ಲ ಎಂದು ಇಲಾಖೆಯೇ ಕೈಚೆಲ್ಲಿದೆ. ಸಿಮೆಂಟ್ ಉದುರಿದ ತಾರಸಿ, ಬಿರುಕುಬಿಟ್ಟ ಗೋಡೆಗಳ ನಡುವೆ ಬಡವರ ಮಕ್ಕಳು ಪ್ರಾಣ ಕೈಯಲ್ಲಿ ಹಿಡಿದು ಅಕ್ಷರ ಕಲಿಯಬೇಕಾದ ದುರ್ಗತಿ ಬಂದಿದೆ. ಮಾಧ್ಯಮಗಳ ಮುಂದೆ ದಿನವಿಡೀ ಭಾಷಣ ಬಿಗಿಯುವ, ಅನಗತ್ಯ ವಿವಾದ ಸೃಷ್ಟಿಸುವ ನಿಮಗಾಗಲಿ, ಪೂರ್ಣಾವಧಿ ಶಿಕ್ಷಣ ಸಚಿವರೇ ಇಲ್ಲದ ನಿಮ್ಮ ನಾಲಾಯಕ್ ಕಾಂಗ್ರೆಸ್ ಸರ್ಕಾರಕ್ಕಾಗಲಿ ಕಲ್ಯಾಣ ಕರ್ನಾಟಕದ ಬಡಮಕ್ಕಳ ಭವಿಷ್ಯದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಹೈಕಮಾಂಡ್ ನಾಯಕರನ್ನು ಮೆಚ್ಚಿಸಲು ತಾವು ತೋರುವ ಸೈದ್ಧಾಂತಿಕ ಬದ್ಧತೆ, ನಿಷ್ಠೆಯನ್ನು, ನಿಮಗೆ ಮತ ನೀಡಿ ಗೆಲ್ಲಿಸಿ, ಅಧಿಕಾರ ಕೊಟ್ಟಿರುವ ಕಲ್ಯಾಣ ಕರ್ನಾಟಕದ ಜನತೆಗೂ, ಅಲ್ಲಿನ ಶಾಲೆಗಳ ಅಭಿವೃದ್ಧಿಗೂ ಸ್ವಲ್ಪ ತೋರಿಸಿ. ಕಲ್ಯಾಣ ಕರ್ನಾಟಕದ ಜನತೆಗೆ ನೀಡಬೇಕಾದ ಕನಿಷ್ಠ ಮೂಲಸೌಕರ್ಯದ ಕರ್ತವ್ಯದಲ್ಲಿ ಸಂಪೂರ್ಣ ವೈಫಲ್ಯ ಕಂಡಿದ್ದೀರಿ. ಬಡ ಮಕ್ಕಳ ಜೀವದ ಜೊತೆ ಆಟವಾಡುವುದನ್ನು ನಿಲ್ಲಿಸಿ, ಮೊದಲು ಆ ಶಾಲೆಗಳನ್ನು ಸರಿಪಡಿಸಿ ಎಂದು ಆಗ್ರಹಿಸಿದ್ದಾರೆ.

### ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸಿದ ಆಡಿಯೋ

# ವಿಜಯೇಂದ್ರ ಪದಚ್ಯುತಿಗೆ ಡಿವಿಎಸ್ ಸಂಚು?



**ಬೆಂಗಳೂರು, ಜೂ.29:** ಕರ್ನಾಟಕ ಬಿಜೆಪಿಯಲ್ಲಿ ಮತ್ತೆ ನಾಯಕತ್ವ ಬದಲಾವಣೆ ಚರ್ಚೆ ಮುನ್ನಲೆಗೆ ಬಂದಿದೆ. ಇದಕ್ಕೆ ಪೂಕರವೆಂಬಂತೆ ರಾಜ್ಯಾಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರರನ್ನು ಕೆಳಗಿಳಿಸಲು ದೆಹಲಿ ನಾಯಕರಲ್ಲಿ ಒತ್ತಾಯ ಮಾಡಿರುವ ಡಿ.ವಿ. ಸದಾನಂದ ಗೌಡ ಅವರದ್ದು ಎನ್ನಲಾದ ಆಡಿಯೋ ವೈರಲ್ ಆಗಿದೆ. ಬಿಜೆಪಿ ದೆಹಲಿ ಮಟ್ಟದ ನಾಯಕ ಪ್ರದೀಪ್ ಎಂಬುವವರ ಜೊತೆಗೆ ಇಂಗ್ಲಿಷ್ ಭಾಷೆಯಲ್ಲಿ ನಡೆಸಿದ ಸಂಭಾಷಣೆ ಇದಾಗಿದ್ದು, ಇದರಲ್ಲಿ ಮೂರು ತಿಂಗಳ ಬಳಿಕ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕೆಳಗಿಳಿಸಿ ಎಂದು ಇದರಲ್ಲಿ ಬೇಡಿಕೆ ಇಡಲಾಗಿದೆ. ಈ ಆಡಿಯೋ ಇದೀಗ ರಾಜ್ಯ ಬಿಜೆಪಿಯಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸಿದ್ದು, ಮತ್ತೆ ಬಣ ಬಡಿದಾಟ ಶುರುವಾಗಿದೆ.

ವೈರಲ್ ಆಗಿರುವ ಆಡಿಯೋ ಬಗ್ಗೆ ಸದಾನಂದಗೌಡ ಸ್ಪಷ್ಟನೆ ನೀಡಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, ಯಾವುದೋ ಒಂದು ಆಡಿಯೋ ಬಂದಿದೆ. ನನ್ನದಲ್ಲದ ಆಡಿಯೋ, ವಿಡಿಯೋಗಳಿಗೆ ನಾನ್ಯಾಕೆ ಪ್ರತಿಕ್ರಿಯಿಸಲಿ.

ಈ ಬಗ್ಗೆ ಹೈಕಮಾಂಡ್ ಬಳಿ ಮಾತನಾಡುತ್ತೇನೆ. ನಾನು ಯಾವುದೇ ಮಾತುಗಳನ್ನು ಆಡಿಲ್ಲ. ವೈರಲ್ ಆಗಿರುವ ಆಡಿಯೋ ನನ್ನದಲ್ಲ. ಈ ಬಗ್ಗೆ ತನಿಖೆ ನಡೆದು ಸತ್ಯಾಸತ್ಯತೆ ಹೊರಬರಲಿ. ನನ್ನದಲ್ಲದ ವಿಚಾರಕ್ಕೆ ನಾನ್ಯಾಕೆ ಮೈಮೇಲೆ ಎಳೆದುಕೊಳ್ಳಲಿ ಎಂದಿದ್ದಾರೆ.

ಪಕ್ಷದಲ್ಲಿ ನನ್ನ ಬಗ್ಗೆ ಬಹಳ ದಿನಗಳಿಂದಲೂ ಚರ್ಚೆ ನಡೆಯುತ್ತಿದೆ. ಅಡ್ಡಮತದಾನ ಆದಾಗಲೂ ಚರ್ಚೆ ಆಯ್ತು. ಸತ್ಯ ಹೇಳಿದ್ದಕ್ಕೆ ಚರ್ಚೆ ಆಯ್ತು. ಪಕ್ಷದ ಹಿತದೃಷ್ಟಿಯಿಂದ ಕೋರ್ ಕಮಿಟಿಯಲ್ಲಿಯೂ ಮಾತನಾಡಿದ್ದೆ. ಈಗ ನನ್ನದಲ್ಲದ ಆಡಿಯೋ ಬಗ್ಗೆ ನಾನು ಯಾಕೆ ದೂರು ಕೊಡಲಿ. ನಾನು ಯಾವುದಕ್ಕಾಗಿ ಟಾರ್ಗೆಟ್ ಆಗಬೇಕು. 30 ವರ್ಷದ ರಾಜಕೀಯ ಜೀವನದಲ್ಲಿ ನನ್ನಿಂದ ಏನಾದರೂ ವ್ಯತ್ಯಾಸವಾಗಿದ್ದರೆ ಸಾರ್ವಜನಿಕರಲ್ಲಿ ಕ್ಷಮೆ ಕೇಳುತ್ತೇನೆ ಎಂದು ತಿಳಿಸಿದ್ದಾರೆ.

### ಆಡಿಯೋದಲ್ಲಿ ಏನಿದೆ?

**ಡಿ.ವಿ.ಸದಾನಂದಗೌಡ ಅವರು ಕೇಂದ್ರದ ನಾಯಕರೊಬ್ಬರೊಂದಿಗೆ ಮಾತನಾಡಿದ್ದಾರೆ ಎನ್ನಲಾದ ಈ ಆಡಿಯೋದಲ್ಲಿ ವಿಜಯೇಂದ್ರ ಅವರನ್ನು ಸ್ಥಾನದಿಂದ ಕಿತ್ತಾಕಿ ಎಂದಿದ್ದಾರೆ. ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ವರೆಗೂ ಮುಂದುವರಿಯಲು ಬಿಡಿ, ಬಳಿಕ ಅಧ್ಯಕ್ಷ ಸ್ಥಾನದಿಂದ ಕಿತ್ತು ಬಿಸಾಕಿ. ಈಗಲೇ ಕಿತ್ತು ಹಾಕಿದರೆ ಬಿಜೆಪಿ ಮತ್ತೆ ಲಿಂಗಾಯಿತ ವಿರೋಧಿ ಅಂತಾಗುತ್ತೆ. ಹಾಗಾಗಿ ಕಾದು ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು ಎಂದಿದ್ದಾರೆ. ಈ ಆಡಿಯೋ ಇದೀಗ ರಾಜ್ಯ ಬಿಜೆಪಿಯಲ್ಲಿ ಭೂಕಂಪವನ್ನೇ ಸೃಷ್ಟಿಸಿದೆ. ವಿಧಾನ ಪರಿಷತ್ ಚುನಾವಣೆಯ ಫಲಿತಾಂಶದ ಬಳಿಕ ಬಿಜೆಪಿ ಹಿರಿಯ ನಾಯಕರೇ ಬಿ.ವೈ.ವಿಜಯೇಂದ್ರ ವಿರುದ್ಧ ಅಸಮಾಧಾನ ಹೊರಹಾಕಿದ್ದರು. ಹಿರಿಯರನ್ನು ಕಡೆಗಣಿಸುತ್ತಿದ್ದಾರೆ ಎಂದು ಮುರುಗೇಶ್ ನಿರಾಣಿ ಆರೋಪಿಸಿದ್ದರು. ಇದೀಗ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರು ಮಾತನಾಡಿದ್ದಾರೆ ಎನ್ನಲಾದ ಆಡಿಯೋ ವೈರಲ್ ಆಗಿರುವುದು ಬಿಜೆಪಿಯಲ್ಲಿ ಸಂಚಲನ ಸೃಷ್ಟಿಸಿದೆ.**



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ಅಸೋಸಿಯೇಷನ್ ಒಕ್ಕೂಟದವರು ಬೆಂಗಳೂರು ಅರಮನೆ ಮೈದಾನದಲ್ಲಿ ಸೋಮವಾರ ಏರ್ಪಡಿಸಿದ್ದ ಅಭಿನಂದನೆ ಸಮಾರಂಭವನ್ನು ಸಿಎಂ ಡಿ.ಕೆ ಶಿವಕುಮಾರ್ ಉದ್ಘಾಟಿಸಿದರು. ಇಂಧನ ಸಚಿವ ಕೆ ಜೆ ಜಾರ್ಜ್, ನೌಕರರ ಸಂಘದ ಅಧ್ಯಕ್ಷ ಕೆ ಬಲರಾಮ್, ಎಂಜಿನಿಯರ್ ಸಂಘದ ಅಧ್ಯಕ್ಷ ಸಿ ಬಸವಣ್ಣ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸಯ್ಯದ್ ಅಜ್ಜಂಪೀರ್ ಖಾದ್ರಿ, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಕೆ ಹರೀಶ್‌ಕುಮಾರ್, ಕಲ್ಬುರ್ಗಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಎಂ ಡಿ ರಾಮ್‌ಪ್ರಸಾತ್ ಮನೋಹರ್ ಮತ್ತಿತರರು ಇದ್ದರು.

# ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿಕೆಗೆ ಸಚಿವ ಸತೀಶ್ ಜಾರಕಿಹೊಳಿ ಸಮರ್ಥನೆ

**ಬೆಂಗಳೂರು, ಜೂ.29:** ರಾಜಕಾರಣದಲ್ಲಿ ಜನರ ಸಂಪರ್ಕ ಉಳಿಸಿಕೊಳ್ಳುವುದು ಮುಖ್ಯ ಎಂದು ಹೇಳುವ ಮೂಲಕ ಸಿದ್ದರಾಮಯ್ಯ ಕುರಿತ ಪ್ರಶ್ನೆಗೆ ಮಹತ್ವದ ಪ್ರತಿಕ್ರಿಯೆ ಸಚಿವ ಸತೀಶ್ ಜಾರಕಿಹೊಳಿ ನೀಡಿದರು.

ಸಿದ್ದರಾಮಯ್ಯ ಅವರನ್ನು ಕಡೆಗಣಿಸಲಾಗುತ್ತಿದೆ ಎಂಬ ಪ್ರಶ್ನೆಗೆ ಸೋಮವಾರ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಜಾರಕಿಹೊಳಿ, "ಇದು ವೇಗದ ಕಾಲ. ಆ ವೇಗಕ್ಕೆ ತಕ್ಕಂತೆ ಓಡಬೇಕು. ರಾಜಕಾರಣವೂ ಅದೇರೀತಿಯದ್ದಾಗಿದೆ. ಓಡದೇ ಇದ್ದರೆ ಟ್ರೇನ್ ಮಿಸ್ ಆಗುತ್ತದೆ" ಎಂದು ಹೇಳಿದರು.

ಟ್ರೇನ್ ಮಿಸ್ ಆದರೆ ತುಮಕೂರಿಗೋ ಅರಸೀಕೆರೆಗೋ ಗಾಡಿಯಲ್ಲಿ ಹೋಗಿಯಾದರೂ ಟ್ರೇನ್ ಹಿಡಿಯಬೇಕು. ಇಲ್ಲವಾದರೆ ಜನರೇ ಮರೆತುಬಿಡುತ್ತಾರೆ. ಇದು ನಾನು ಹೇಳುವುದಲ್ಲ, ಜನರು ಹೇಳುವ ಮಾತು. ಮೈಸೂರಿನಲ್ಲಿ ಕುಳಿತುಕೊಂಡೇ ರಾಜಕಾರಣ ಮಾಡಬಹುದು. ಆದರೆ ಜನರ ಸಂಪರ್ಕ ಇರುವವರೆಗೂ ಮಾತ್ರ ನಾಯಕತ್ವ ಉಳಿಯುತ್ತದೆ ಎಂದು ಹೇಳಿದರು.

ಸಿದ್ದರಾಮಯ್ಯ ಅವರು 'ಜನರ ಹೃದಯ ಸಿಂಹಾಸನವೇ ಶಾಶ್ವತ' ಎಂದು ಹೇಳಿರುವುದನ್ನು ಸಮರ್ಥಿಸಿದ ಜಾರಕಿಹೊಳಿ, "ಅದು ಸರಿಯಾದ ಮಾತು. ಅಧಿಕಾರ ಶಾಶ್ವತವಲ್ಲ. ಮುಖ್ಯಮಂತ್ರಿ ಸ್ಥಾನವೂ ಶಾಶ್ವತವಲ್ಲ. ಜನರ ಸಂಪರ್ಕ ಮತ್ತು ಜನರ ಬೆಂಬಲ ಇರುವವರೆಗೂ ನಾಯಕತ್ವ ಇರುತ್ತದೆ" ಎಂದು ಹೇಳಿದರು.

### ರಾಜಕೀಯ ಕಾರಣವಾದರೆ ಕಾನೂನು ಹೋರಾಟ

**ಇ.ಡಿ. ದಾಳಿ ಬಗ್ಗೆ ಮಾತನಾಡಿದ ಸತೀಶ್ ಜಾರಕಿಹೊಳಿ, "ನಮ್ಮನ್ನೇ ಗುರಿಯಾಗಿಸಿಕೊಂಡು ದಾಳಿ ಮಾಡಿದ್ದಾರೋ ಗೊತ್ತಿಲ್ಲ. ರಾಜಕೀಯ ಉದ್ದೇಶದಿಂದ ನಡೆದಿದೆಯೇ ಅಥವಾ ಸಹಜ ಪ್ರಕ್ರಿಯೆಯ ಭಾಗವೇ ಎಂಬುದು ತಿಳಿಯಲು ಸಮಯ ಬೇಕು" ಎಂದರು. ರಾಜಕೀಯ ಕಾರಣದಿಂದ ದಾಳಿ ನಡೆಸಿರುವುದು ಸಾಬೀತಾದರೆ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ಸತೀಶ್ ಜಾರಕಿಹೊಳಿ ಹೇಳಿದರು.**

# ಕೆಪಿಸಿಸಿ ಅಧ್ಯಕ್ಷರ ಹೇಳಿಕೆಗೆ ಬಿಜೆಪಿ ಮುಖಂಡ ರವಿಕುಮಾರ್ ತಿರುಗೇಟು

ಬೆಂಗಳೂರು, ಜೂ.29: ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಕೆಪಿಸಿಸಿ ಮುಖಂಡ ಬಿ.ಕೆ. ಹರಿಪ್ರಸಾದ್ ಅವರು, "ಆಕಳನ್ನು (ಹಸುವನ್ನು) ಕೊಂದವನು ಜೈಲಿಗೆ ಹೋಗುತ್ತಾನೆ, ಆದರೆ ಮನುಷ್ಯರನ್ನು ಕೊಂದವನು ಮುಖ್ಯಮಂತ್ರಿ ಮತ್ತು ಪ್ರಧಾನಮಂತ್ರಿ ಆಗುತ್ತಾನೆ. ನೈಜ ಕಾಂಗ್ರೆಸ್ ಕಾರ್ಯಕರ್ತರು ಇದಕ್ಕೆ ಅವಕಾಶ ನೀಡಬಾರದು" ಎಂದು ನೀಡಿರುವ ಅತ್ಯಂತ ನಿಂದನೀಯ, ಪ್ರಜಾಪ್ರಭುತ್ವ ವಿರೋಧಿ ಹಾಗೂ ಪ್ರಚೋದನಾಕಾರಿ ಹೇಳಿಕೆಯನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಖಂಡಿಸಿದ್ದಾರೆ.

ಈ ಕುರಿತು ಜಂಟಿ ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, "ದೇಶದ ಮತದಾರ ಪ್ರಭು ತನಗಿರುವ ಸಾಂವಿಧಾನಿಕ ಹಕ್ಕನ್ನು ಬಳಸಿ, ಸಂಪೂರ್ಣ ವಿವೇಚನೆಯಿಂದ ಬಹುಮತ ನೀಡಿ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳನ್ನು ಆಯ್ಕೆ ಮಾಡಿದ್ದಾರೆ. ಹರಿಪ್ರಸಾದ್ ಅವರ ಮಾತುಗಳು ಕೇವಲ ವ್ಯಕ್ತಿಗಳ ಮೇಲಿನ ದ್ವೇಷವಲ್ಲ, ಇಡೀ ದೇಶದ ಮತದಾರರಿಗೆ ಹಾಗೂ ಭಾರತದ ಸಂವಿಧಾನಕ್ಕೆ ಮಾಡಿದ ಘೋರ ಅಪಮಾನ ಎಂದಿದ್ದಾರೆ.

**ರಕ್ತಸಿಕ್ತ ಇತಿಹಾಸ ಯಾರದ್ದು?**

ಕೊಲೆಗಡುಕರ ಮತ್ತು ಹಿಂಸೆಯ ಇತಿಹಾಸ ಯಾರದ್ದು ಎಂಬುದು ಇಡೀ ಜಗತ್ತಿಗೆ ತಿಳಿದಿದೆ. 1984ರ ಸಿಖ್ಖರ ಮಾರಣಹೋಮ ಯಾರ ಆಡಳಿತದಲ್ಲಿ ನಡೆಯಿತು. ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಸಾಕ್ಷಾತ್ ಸಂವಿಧಾನವನ್ನೇ ಕಟುಕನಂತೆ ಹೊಸಕಿ ಹಾಕಿದ್ದು ಇದೇ ಕಾಂಗ್ರೆಸ್ ಅಲ್ಲವೇ. ಇಂತಹ ಇತಿಹಾಸವಿಟ್ಟುಕೊಂಡು ಕಾಂಗ್ರೆಸ್ ನಾಯಕರು ಇಂದು ದೇಶಪ್ರೇಮಿಗಳ ಬಗ್ಗೆ ನೀತಿಪಾಠ ಮಾಡಲು ಹೊರಟಿರುವುದು ಹಾಸ್ಯಾಸ್ಪದ.

ಗೋಹತ್ಯೆ ತಡೆ ಕಾನೂನನ್ನು ವಿರೋಧಿಸುವ ಮೂಲಕ ಭಾರತೀಯರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಭಾವನೆಗಳೊಂದಿಗೆ ಸದಾ ಚೆಲ್ಲಾಟವಾಡುವ ಕಾಂಗ್ರೆಸ್‌ನ ತುಷ್ಟೀಕರಣದ ರಾಜಕಾರಣವನ್ನು ದೇಶದ ಜನ ಈಗಾಗಲೇ ತಿರಸ್ಕರಿಸಿದ್ದಾರೆ. ಗೋಮಾತೆಯನ್ನು ಪೂಜಿಸುವ ಕೋಟ್ಯಂತರ ಜನರ ಭಾವನೆಗಳಿಗೆ ಕಾಂಗ್ರೆಸ್ ನಿರಂತರವಾಗಿ ಧಕ್ಕೆ ತರುತ್ತಿದೆ ಎಂದು ಹೇಳಿದ್ದಾರೆ.

ಹರಿಪ್ರಸಾದ್ ಅವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪನ್ನು ಗೌರವಿಸುವುದನ್ನು ಕಲಿಯಿರಿ. ಮೊದಲು ನಿಮ್ಮ ನಾಲಿಗೆಯ ಮೇಲೆ ಹಿಡಿತವಿರಲಿ. ಇಂತಹ ಹಗುರ ಹಾಗೂ ಸಮಾಜದ ಶಾಂತಿ ಕದಡುವ ಹೇಳಿಕೆಗಳನ್ನು ರಾಜ್ಯದ ಪ್ರಜ್ಞಾವಂತ ಜನತೆ ಎಂದಿಗೂ ಸಹಿಸುವುದಿಲ್ಲ. ಇಂತಹ ಪ್ರಜಾಪ್ರಭುತ್ವ ವಿರೋಧಿ ಮತ್ತು ದ್ವೇಷದ ಹೇಳಿಕೆಗಳನ್ನು ಒಪ್ಪಬಾರದು ಹಾಗೂ ದೇಶವನ್ನು ಒಡೆಯುವ ಇಂತಹ ನಾಯಕರ ವಿರುದ್ಧ ಧ್ವನಿ ಎತ್ತಬೇಕು ಎಂದು ಎನ್. ರವಿಕುಮಾರ್ ಕರೆ ನೀಡಿದ್ದಾರೆ.

# ಯಲಹಂಕದ ಜನರ ಬೇಡಿಕೆ ಈಡೇರಿಸಿದ ಸಂಸದ ಡಾ.ಕೆ.ಸುಧಾಕರ್

**ಬೆಂಗಳೂರು ಜೂ.29:** ಲೋಕಮಾನ್ಯ ತಿಲಕ್ ಟರ್ಮಿನಸ್ ಮುಂಬೈ – ಕೊಯಮತ್ತೂರು ರೈಲಿಗೆ ಯಲಹಂಕ ರೈಲು ನಿಲ್ದಾಣದಲ್ಲಿ ನಿಲುಗಡೆ ಕಲ್ಪಿಸುವ ಮೂಲಕ ಸಂಸದ ಡಾ.ಕೆ.ಸುಧಾಕರ್, ಯಲಹಂಕ ಭಾಗದ ಜನರ ಬಹುವರ್ಷಗಳ ಬೇಡಿಕೆಯನ್ನು ಈಡೇರಿಸಿದ್ದಾರೆ. ಯಲಹಂಕದ ಪ್ರಯಾಣಿಕರು ಮೆಜೆಸ್ಟಿಕ್‌ವರೆಗೆ ಪ್ರಯಾಣ ಮಾಡಿ ರೈಲು ಹತ್ತುವ ಸಂಕಷ್ಟ ಇದರಿಂದ ನಿವಾರಣೆಯಾಗಿದೆ.

ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರೊಂದಿಗೆ, ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ರೈಲು ನಿಲುಗಡೆ ಸೌಲಭ್ಯಕ್ಕೆ ಚಾಲನೆ ನೀಡಿದರು.

ನಂತರ ಸಂತಸ ಹಂಚಿಕೊಂಡ ಸಂಸದ ಡಾ.ಕೆ.ಸುಧಾಕರ್, ಚಿಕ್ಕಬಳ್ಳಾಪುರದ ಸಂಸದನಾದ ಬಳಿಕ ರೈಲ್ವೆ ಕಾಮಗಾರಿಗಳಿಗೆ ಆದ್ಯತೆ ನೀಡಿದ್ದೇನೆ. ಹೊಸ ರೈಲು ಸಂಪರ್ಕಗಳಿಗೆ ಒತ್ತು ನೀಡಿದ್ದೇನೆ. ಈಗ ಯಲಹಂಕದ ರೈಲು ಸಂಪರ್ಕಕ್ಕೆ ಮತ್ತೊಂದು ದೊಡ್ಡ ಬಲ ಬಂದಿದೆ. ಮುಂಬೈ–ಕೊಯಮತ್ತೂರು ಎಕ್ಸ್‌ಪ್ರೆಸ್ ರೈಲು ಇನ್ನು ಮುಂದೆ ಯಲಹಂಕ ರೈಲು ನಿಲ್ದಾಣದಲ್ಲೂ ನಿಲುಗಡೆ ನೀಡಲಿದೆ. ಈ ಮೂಲಕ ಯಲಹಂಕ ಮತ್ತು ಬೆಂಗಳೂರಿನ ಉತ್ತರ ಭಾಗದ ಸಾರ್ವಜನಿಕರ ಬಹುದಿನಗಳ ಪ್ರಮುಖ ಬೇಡಿಕೆಯೊಂದು ಇಂದು ನನಸಾಗಿದೆ. ಯಲಹಂಕ ಪ್ರದೇಶ ನಾಡಪ್ರಭು ಶ್ರೀ ಕೆಂಪೇಗೌಡರ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ಮೂಲಸೌಕರ್ಯ ಅಭಿವೃದ್ಧಿ ಮಾಡುವುದು ಎಂದರೆ ಅದು ಕೆಂಪೇಗೌಡರಿಗೆ ನಾವು ನೀಡುವ ಗೌರವ ಎಂದರು. ಯಲಹಂಕ ಬೆಂಗಳೂರಿನ ವೇಗವಾಗಿ ಬೆಳೆಯುತ್ತಿರುವ ಪ್ರದೇಶಗಳಲ್ಲಿ ಒಂದು. ಇಲ್ಲಿನ ಸಾವಿರಾರು ಪ್ರಯಾಣಿಕರು, ಉದ್ಯೋಗಿಗಳು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಹಾಗೂ ಕುಟುಂಬಗಳು ಮುಂಬೈ ಮತ್ತು ಕೊಯಮತ್ತೂರು ಭಾಗಗಳಿಗೆ ಸಂಚರಿಸಲು ಅನುಕೂಲವಾಗುವಂತೆ ಲೋಕಮಾನ್ಯ ತಿಲಕ್ ಟರ್ಮಿನಸ್ ಕೊಯಮತ್ತೂರು ಎಕ್ಸ್‌ಪ್ರೆಸ್ ರೈಲು ಇದೆ. ಈ ರೈಲು ಯಲಹಂಕ ರೈಲು ನಿಲ್ದಾಣದಲ್ಲಿ ಅಧಿಕೃತ ನಿಲುಗಡೆ ಕಲ್ಪಿಸುವಂತೆ ನಾನು ಕೇಂದ್ರ ರೈಲ್ವೆ ಸಚಿವಾಲಯಕ್ಕೆ ಮನವಿ ಸಲ್ಲಿಸಿದ್ದೆ. ಯಲಹಂಕದ ಜನರು, ರೈಲ್ವೆ ಪ್ರಯಾಣಿಕರು, ಕೆಲವು ಸಂಘಟನೆಗಳು ಈ ಸಮಸ್ಯೆಯನ್ನು ನನ್ನ ಗಮನಕ್ಕೆ ತಂದಿದ್ದರು ಎಂದು ವಿವರಿಸಿದರು.

2025 ರ ಸೆಪ್ಟೆಂಬರ್15 ರಂದು ನೈಋತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದೆ. ಈ ರೈಲು ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ನಿಲುಗಡೆ ನೀಡಿ, ನಂತರ ನೇರವಾಗಿ ಗೌರಿಬಿದನೂರಿನಲ್ಲಿ ನಿಲುಗಡೆ ನೀಡುತ್ತದೆ. ಗೌರಿಬಿದನೂರು 80 ಕಿ.ಮೀ. ದೂರದಲ್ಲಿದೆ. ಉತ್ತರ ಬೆಂಗಳೂರಿನ ಜನರಿಗೆ ಇದು ದೊಡ್ಡ ತಲೆನೋವಾಗಿತ್ತು. ಪ್ರಯಾಣಿಕರು ಟ್ರಾಫಿಕ್‌ನಲ್ಲಿ ಸಿಲುಕಿ ದೂರದ ಮೆಜೆಸ್ಟಿಕ್‌ಗೆ ಪ್ರಯಾಣ ಮಾಡಬೇಕಾಗಿತ್ತು. ಈ ಪತ್ರ ಬರೆದ ಬಳಿಕ, ಪ್ರಧಾನ ವ್ಯವಸ್ಥಾಪಕರು 2025 ರ ಅಕ್ಟೋಬರ್16 ರಂದು ಉತ್ತರವಾಗಿ ನನಗೆ ಪತ್ರ ಬರೆದರು. ಯಲಹಂಕದಲ್ಲಿ ಈ ರೈಲಿಗೆ ನಿಲುಗಡೆ ನೀಡಲು ರೈಲ್ವೆ ಮಂಡಳಿಗೆ ಒಂದು ಪ್ರಸ್ತಾವವನ್ನು ಕಳುಹಿಸಲಾಯಿತು. ಬಳಿಕ ನಾನು ಈ ಬಗ್ಗೆ ಪದೇಪದೇ ಅಧಿಕಾರಿಗಳೊಂದಿಗೆ ಚರ್ಚೆ ಮಾಡುತ್ತಿದ್ದೆ. ಆದಷ್ಟು ಬೇಗ ಈ ಪ್ರಸ್ತಾವಕ್ಕೆ ಅನುಮೋದನೆ ದೊರೆಯುವಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಿದ್ದೆ. ನನ್ನ ನಿರಂತರ ಪ್ರಯತ್ನ ಮತ್ತು ಸತತ ಫಾಲೋ–ಅಪ್ನ ಫಲವಾಗಿ, ನೈಋತ್ಯ ರೈಲ್ವೆಯು ಪ್ರಸ್ತಾವನೆಯನ್ನು ರೈಲ್ವೆ ಮಂಡಳಿಗೆ ಶಿಫಾರಸು ಮಾಡಿದ್ದು, ಇದೀಗ ರೈಲ್ವೆ ಮಂಡಳಿಯು ಈ ಹೆಚ್ಚುವರಿ ನಿಲುಗಡೆಗೆ ಅಧಿಕೃತ ಅನುಮೋದನೆ ನೀಡಿದೆ ಎಂದು ತಿಳಿಸಿದರು. ನಂತರ ಈ ಕುರಿತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು 2026 ರ ಜೂನ್ 26 ರಂದು ನನಗೆ ಪತ್ರ ಬರೆದು ಮಾಹಿತಿ ನೀಡಿದರು. ರೈಲು ಸಂಖ್ಯೆ 11013/11014 ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬೈ) ಕೊಯಮತ್ತೂರು – ಲೋಕಮಾನ್ಯ ತಿಲಕ್ ಟರ್ಮಿನಸ್ (ಮುಂಬೈ) ಎಕ್ಸ್‌ಪ್ರೆಸ್ ಇನ್ನು ಮುಂದೆ ಯಲಹಂಕ ರೈಲು ನಿಲ್ದಾಣದಲ್ಲಿ ಅಧಿಕೃತವಾಗಿ ನಿಲುಗಡೆಯಾಗಲಿದೆ. ಇದು ಸಾರ್ವಜನಿಕರ ಬಹಳ ವರ್ಷಗಳ ಬೇಡಿಕೆ. ಇದಕ್ಕೆ ನಾನು ತ್ವರಿತವಾಗಿ ಸ್ಪಂದಿಸಿದ್ದೆ. ಹಾಗೆಯೇ ಕೇಂದ್ರ ಸರ್ಕಾರ ಕೂಡ ನನ್ನ ಮನವಿಗೆ ಮನ್ನಣೆ ನೀಡಿದೆ. ಇದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹಾಗೂ ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು. ಈ ಹೊಸ ನಿಲುಗಡೆಯಿಂದ ಉತ್ತರ ಬೆಂಗಳೂರಿನ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಾವಿರಾರು ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದ್ದು, ಮೆಜೆಸ್ಟಿಕ್ (KSR ಬೆಂಗಳೂರು) ನಿಲ್ದಾಣದವರೆಗೆ ತೆರಳುವ ಅಗತ್ಯ ಕಡಿಮೆಯಾಗುತ್ತದೆ. ಜೊತೆಗೆ ನಗರದ ಸಂಚಾರ ದಟ್ಟಣೆಯನ್ನೂ ತಗ್ಗಿಸಲು ಇದು ಸಹಕಾರಿಯಾಗಲಿದೆ. ಈವರೆಗೆ ಯಲಹಂಕ ಭಾಗದ ಜನರು ಮುಂಬೈ ಅಥವಾ ಕೊಯಮತ್ತೂರಿಗೆ ಹೋಗಬೇಕೆಂದರೆ ಅತಿ ಹತ್ತಿರದ ಎಂದರೆ ಮೆಜೆಸ್ಟಿಕ್‌ಗೆ ಬಸ್ಸಿನಲ್ಲಿ ಹೋಗಿ ಅಲ್ಲಿಂದ ಪ್ರಯಾಣ ಮಾಡುತ್ತಿದ್ದರು. ಅಥವಾ ಕ್ಯಾಬ್ ಆಟೋರಿಕ್ಷಾ ಮಾಡಿಕೊಂಡು ಹೋಗುತ್ತಿದ್ದರು. ಈಗ ಆ ಸಮಸ್ಯೆ ಇಲ್ಲದೆ ಯಲಹಂಕದಿಂದಲೇ ನೇರವಾಗಿ ಹೋಗಬಹುದು. ಉತ್ತಮ ಸಂಪರ್ಕ ವ್ಯವಸ್ಥೆ, ಉತ್ತಮ ಮೂಲಸೌಕರ್ಯ ಮತ್ತು ಜನಸ್ನೇಹಿ ಅಭಿವೃದ್ಧಿಯ ಮೂಲಕ ವಿಕಸಿತ ಯಲಹಂಕ, ವಿಕಸಿತ ಬೆಂಗಳೂರು ಹಾಗೂ ವಿಕಸಿತ ಚಿಕ್ಕಬಳ್ಳಾಪುರ ನಿರ್ಮಾಣಕ್ಕೆ ನನ್ನ ಬದ್ಧತೆ ನಿರಂತರವಾಗಿರುತ್ತದೆ ಎಂದರು.



#### ಬಿಲಾಸ್ಪುರ–ಯಲಹಂಕ ರೈಲು ಸೇವೆ

ರೈಲ್ವೆ ಇಲಾಖೆಯಿಂದ ಛತ್ತೀಸ್‌ಗಢ ರಾಜ್ಯದ ಬಿಲಾಸ್ಪುರದಿಂದ ಯಲಹಂಕಕ್ಕೆ ವಿಶೇಷ ರೈಲು (08261/08262) ಸೇವೆ ಇದೆ. ಈ ರೈಲು ವಿಶೇಷ ಸಂದರ್ಭದಲ್ಲಿ ಕಾರ್ಯಾಚರಣೆ ಮಾಡುತ್ತಿದೆ. ಈ ರೈಲನ್ನು ಸಾಮಾನ್ಯ ರೈಲಾಗಿಸಿ ರೆಗ್ಯುಲರ್ ಸೇವೆ ನೀಡಬೇಕೆಂದು ಸಂಸದ ಡಾ.ಕೆ.ಸುಧಾಕರ್, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಮನವಿ ಮಾಡಿದ್ದರು.

ಸಚಿವರು ಈ ಮನವಿಗೆ ಮನ್ನಣೆ ನೀಡಿದ್ದು, ವಿಶೇಷ ರೈಲನ್ನು ಸಾಮಾನ್ಯ ರೈಲಾಗಿ ಪರಿವರ್ತಿಸಲು ಅನುಮೋದನೆ ನೀಡಿದ್ದಾರೆ. ಬಿಲಾಸ್ಪುರ–ಯಲಹಂಕ ರೈಲು 18261/18262 ಎಂಬ ಹೊಸ ಸಂಖ್ಯೆಯೊಂದಿಗೆ ರೆಗ್ಯುಲರ್ ರೈಲು ಆಗಿ ಕಾರ್ಯಾಚರಣೆ ಮಾಡಲಿದೆ. ಇದಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಸಂಸದ ಡಾ.ಕೆ.ಸುಧಾಕರ್ ಹೇಳಿದ್ದಾರೆ.

#### ಎರಡು ರೈಲ್ವೆ ಮೇಲ್ಸೇತುವೆಗಳು

ಬೆಂಗಳೂರು–ತುಮಕೂರು ರೈಲು ಮಾರ್ಗದ ಚಿಕ್ಕಬಾಣಾವರ–ಗೊಲ್ಲಹಳ್ಳಿ ನಡುವಿನ ಲೆವೆಲ್ ಕ್ರಾಸಿಂಗ್ ಸಂಖ್ಯೆ 10 ಮತ್ತು 11ರ ಬದಲಿಗೆ ನಿರ್ಮಾಣವಾಗಲಿರುವ ಎರಡು ರೈಲ್ವೆ ಮೇಲ್ಸೇತುವೆ ಹಾಗೂ ಸಬ್ವೇ ಯೋಜನೆಗಳಿಗೆ ಕೇಂದ್ರ ರೈಲ್ವೆ ಇಲಾಖೆ ಈಗಾಗಲೇ 'ವಿಶೇಷ ರೈಲ್ವೆ ಯೋಜನೆ' ಎಂದು ಅಧಿಸೂಚನೆ ಹೊರಡಿಸಿದ್ದು, ಕಾಮಗಾರಿ ಹಾಗೂ ಅಂದಾಜಿಗೂ ಅಧಿಕೃತ ಮಂಜೂರಾತಿ ನೀಡಿದೆ.

ಈ ಯೋಜನೆಗಳಿಗೆ ಭೂಸ್ವಾಧೀನ ಸೇರಿದಂತೆ ಅಗತ್ಯ ಪ್ರಕ್ರಿಯೆಗಳು ಪ್ರಗತಿಯಲ್ಲಿದ್ದು, ರಾಜ್ಯ ಸರ್ಕಾರದ ಹಂತದ ಬಾಕಿ ಪ್ರಕ್ರಿಯೆಗಳು ಪೂರ್ಣಗೊಂಡ ತಕ್ಷಣ ಕಾಮಗಾರಿಗೆ ಮತ್ತಷ್ಟು ವೇಗ ದೊರೆಯಲಿದೆ ಎಂದು ಅವರು ತಿಳಿಸಿದರು.

ROB - LC No. 10 (ಚಿಕ್ಕಬಾಣಾವರ–ಗೊಲ್ಲಹಳ್ಳಿ –125.12 ಕೋಟಿ ವೆಚ್ಚ ಹಾಗೂ ROB - LC No. 11 (ಚಿಕ್ಕಬಾಣಾವರ–ಗೊಲ್ಲಹಳ್ಳಿ) 99.61 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿದೆ. ಒಟ್ಟು 224.73 ಕೋಟಿ ವೆಚ್ಚವಾಗಲಿದೆ. ಈ ಎರಡು ಯೋಜನೆಗಳು ಪೂರ್ಣಗೊಂಡ ಬಳಿಕ ರೈಲ್ವೆ ಗೇಟ್‌ಗಳಿಂದ ಉಂಟಾಗುವ ಸಂಚಾರ ದಟ್ಟಣೆ ಗಣನೀಯವಾಗಿ ಕಡಿಮೆಯಾಗಲಿದ್ದು, ಸಾವಿರಾರು ವಾಹನ ಸವಾರರಿಗೆ, ಶಾಲಾ ಕಾಲೇಜು ಬಸ್ಸುಗಳಿಗೆ, ಆಂಬ್ಯುಲೆನ್ಸ್‌ಗಳಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರಕ್ಕೆ ನೆರವಾಗಲಿದೆ ಎಂದು ಮಾಹಿತಿ ನೀಡಿದರು.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ವಿದ್ಯುತ್ ನಿಗಮಗಳ ಖಾಸಗೀಕರಣ: ಸಂಪುಟ ಸಭೆಯಲ್ಲಿ ತೀರ್ಮಾನ

## ಕೆಪಿಟಿಸಿಎಲ್ ನೌಕರರ ಸಂಘ ಹಾಗೂ ಅಸೋಸಿಯೇಷನ್ ಅಭಿನಂದನಾ ಸಮಾರಂಭದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಭರವಸೆ



**ಬೆಂಗಳೂರು, ಜೂ.29:** ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡುವ ವಿಚಾರವಾಗಿ ನಾನೊಬ್ಬನೇ ತೀರ್ಮಾನ ಮಾಡಲು ಸಾಧ್ಯವಿಲ್ಲ. ಈ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ, ನಿಮ್ಮ ಅಭಿಪ್ರಾಯದ ಮೇರೆಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ ಹಾಗೂ ಅಸೋಸಿಯೇಷನ್ ಒಕ್ಕೂಟದವರು ಬೆಂಗಳೂರು ಅರಮನೆ ಮೈದಾನದಲ್ಲಿ ಸೋಮವಾರ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ವಿದ್ಯುತ್ ನಿಗಮಗಳನ್ನು ಖಾಸಗೀಕರಣ ಮಾಡಬಾರದು ಎಂದು ನೀವು ಹೋರಾಟ ಮಾಡುತ್ತಿದ್ದೀರಿ. ಇದು ಪ್ರಸ್ತಾಪವಾಗಿದ್ದು 2003ರಲ್ಲಿ, ಈ ಕುರಿತ ಕಾನೂನು ತಂದಿದ್ದು ಬಿಜೆಪಿ ಸರ್ಕಾರ. ಯಾರೂ ಅದರ ವಿರುದ್ಧ ಧ್ವನಿ ಎತ್ತಲಿಲ್ಲ. ಬದಲಾಗಿ ನನ್ನ ಹಾಗೂ ಜಾರ್ಜ್ ಬಳಿ ಬಂದು ಖಾಸಗೀಕರಣಕ್ಕೆ ಅವಕಾಶ ನೀಡಬೇಡಿ ಎನ್ನುತ್ತಿದ್ದೀರಿ. ನೀವು ಸದಾ ನನ್ನ ಜೊತೆ ಇರುತ್ತೀರಿ ಎನ್ನುತ್ತಿದ್ದೀರಿ, ತಪ್ಪು ಮಾಡಿದವರ ವಿರುದ್ಧ ಧಿಕ್ಕಾರ ಹೇಳಿದಾಗ, ಒಳ್ಳೆಯ ಕೆಲಸ ಮಾಡಿದವರಿಗೆ ಜೈಕಾರ ಹೇಳಿದಾಗ ಮಾತ್ರ ಅದಕ್ಕೆ ಗೌರವ ಬರುತ್ತದೆ ಎಂದರು.

ವಿರೋಧ ಪಕ್ಷದವರು ಎಲ್ಲಾ ವಿಚಾರದಲ್ಲೂ ಟೀಕೆಗಳನ್ನು ಮಾಡಿಕೊಂಡು ಇದ್ದಾರೆ. ಅವರ ಟೀಕೆಗಳೆಲ್ಲಾ ಸಾಯುತ್ತವೆ, ನಮ್ಮ ಕೆಲಸಗಳು ಮಾತ್ರ ಉಳಿಯುತ್ತವೆ. ನೀವೆಲ್ಲರೂ ನಮ್ಮ ಸರ್ಕಾರದ ಹೆಬ್ಬೆಟ್ಟು. ಮುಂಬೈ, ದೆಹಲಿ ಸೇರಿದಂತೆ ಅನೇಕ ನಗರಗಳಲ್ಲಿ ಖಾಸಗೀಕರಣ ಮಾಡಲಾಗಿದೆ. ನೂರಾರು ವರ್ಷಗಳಿಂದ ವಿದ್ಯುತ್ ಲೈನ್ ಎಳೆದವರು ನೀವು, ಬೆಂಬಲ ಕೊಟ್ಟಿದ್ದು ಸರ್ಕಾರ. ಈಗ ಖಾಸಗಿ ಕಂಪನಿಯವರು ದುಡ್ಡು ಮಾಡಲು, ಸಂಪರ್ಕ ನೀಡುವ ಅಧಿಕಾರ ಅವರಿಗೆ ನೀಡಬೇಕೇ ಎಂದರು. ಡಿ.ಕೆ. ಶಿವಕುಮಾರ್ ಕಾಲದಲ್ಲಿ ಖಾಸಗೀಕರಣ ಆಗಬಾರದು ಎಂದು ಎಲ್ಲಾ ಎಸ್ಕಾಂ ಅಧ್ಯಕ್ಷರು ಹೇಳಿದ್ದನ್ನು ಸಚಿವ ಜಾರ್ಜ್ ಗಮನಕ್ಕೆ ತಂದಿದ್ದಾರೆ. ಈ ವಿಚಾರದಲ್ಲಿ ನಾನೊಬ್ಬನೇ ತೀರ್ಮಾನ ಮಾಡುವುದಿಲ್ಲ. ನಿಮ್ಮ ಅಭಿಪ್ರಾಯವೇ ನನ್ನ ಅಭಿಪ್ರಾಯ. ನೀವು ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇನೆ ಎಂದು ವಾಗ್ದಾನ ನೀಡಿದರು. ಬೇರೆಯವರಂತೆ ಇಂಜಿನಿಯರ್‌ಗಳಿಂದ ಪೆನ್ಸಿಲ್‌ನಲ್ಲಿ ಬರೆಸಿ, ತಿದ್ದುವ ಕೆಲಸ ಮಾಡಿಲ್ಲ ಇಂಧನ ಇಲಾಖೆಯಲ್ಲಿ ಈ ಹಿಂದೆಯೂ ಕ್ರಾಂತಿಕಾರಿ ಬದಲಾವಣೆ ತಂದಿದ್ದೇವೆ, ಈಗಲೂ ಜಾರ್ಜ್ ನೇತೃತ್ವದಲ್ಲಿ ಅನೇಕ ಯೋಜನೆ ತೀರ್ಮಾನ ಮಾಡಿದ್ದಾರೆ. ರೇಸ್‌ಕೋರ್ಸ್ ರಸ್ತೆ ಬಳಿ ಖಾಲಿ ಜಾಗದಲ್ಲಿ ಇಂಧನ ಭವನ ನಿರ್ಮಿಸಿ ಸಾಕ್ಷಿಗುಡ್ಡೆ ನಿರ್ಮಿಸಿದ್ದೇವೆ. ಅವಕಾಶ ಸಿಕ್ಕಾಗೆಲ್ಲಾ ಸಾಕ್ಷಿ ನೀಡಿದ್ದೇವೆ ಎಂದು ಹೇಳಿದರು.

### ಇಂಧನ ಇಲಾಖೆ ಸಿಬ್ಬಂದಿ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು

ದೀಪ ಉರಿಯುವಾಗ ಅದರ ಬೆಳಕು ಕಾಣುತ್ತದೆ. ಅದರ ಹಿಂದೆ ಇರುವ ಬತ್ತಿ ಹಾಗೂ ಎಣ್ಣೆ ಯಾರಿಗೂ ಕಾಣುವುದಿಲ್ಲ. ನೀವೆಲ್ಲರೂ ಕತ್ತಲನ್ನು ದೂರ ಮಾಡುವ ಕಾಯಕ ಜೀವಿಗಳು. ಹಗಲು ರಾತ್ರಿ ಎನ್ನದೇ ನೀವು ಶ್ರಮಿಸುತ್ತಿದ್ದೀರಿ. ಜನರು ತಮ್ಮ ಶಾಸಕರ ದೂರವಾಣಿ ಸಂಪರ್ಕ ಹೊಂದಿರುತ್ತಾರೋ ಇಲ್ಲವೋ ಆದರೆ ಪವರ್ ಮ್ಯಾನ್ ಹಾಗೂ ಇಂಜಿನಿಯರ್‌ಗಳ ದೂರವಾಣಿ ಸಂಪರ್ಕ ಇಟ್ಟುಕೊಂಡೇ ಇರುತ್ತಾರೆ. ನಿಮಗೆ ಸರ್ಕಾರವನ್ನು ಅಧಿಕಾರಕ್ಕೆ ತರುವ ಹಾಗೂ ಸರ್ಕಾರವನ್ನು ಅಧಿಕಾರದಿಂದ ತೆಗೆಯುವ ಸಾಮರ್ಥ್ಯವಿದೆ ಎಂದು ನನಗೆ ಅರಿವಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು. ಇಂದು ಕರ್ನಾಟಕದಲ್ಲಿ ನಾನು ಕೈಗೊಂಡಿರುವ ತೀರ್ಮಾನ ದೇಶಕ್ಕೆ ಮಾದರಿಯಾಗಿದೆ. ನಾನು ಇಲಾಖೆ ಜವಾಬ್ದಾರಿ ಪಡೆದಾಗ 19%ನಷ್ಟು ಇಂಧನ ಸೋರಿಕೆ ವರ್ಗಾವಣೆ ವೇಳೆ ಆಗುತ್ತಿತ್ತು. ಈಗ ಅದು ಶೇ.10ಕ್ಕೆ ಇಳಿದಿದೆ ಎಂದರು.

# ವಿದ್ಯುತ್ ಪೂರೈಸಲು ಇಂಧನ ಇಲಾಖೆ ಶಕ್ತವಾಗಿದೆ

ರಾಜ್ಯದ ಜನರಿಗೆ ವಿದ್ಯುತ್ ಪೂರೈಸಲು ಇಂಧನ ಇಲಾಖೆ ಬಲಿಷ್ಠವಾಗಿದ್ದು, ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ. ಟಾಟಾ ಪವರ್ ಕಂಪನಿಯು ಕರ್ನಾಟಕದಲ್ಲಿ ವಿದ್ಯುತ್ ಸರಬರಾಜು (ವಿತರಣೆ) ಮಾಡಲು ಪರವಾನಗಿ ಕೋರಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್ ಸಿ) ಕ್ಕೆ ಅರ್ಜಿ ಸಲ್ಲಿಸಿರುವ



■ ಖಾಸಗೀಕರಣಗೊಳಿಸುವ ಪ್ರಶ್ನೆಯೇ ಇಲ್ಲ: ಇಂಧನ ಸಚಿವ ಕೆ.ಜೆ. ಜಾರ್ಜ್

ಕುರಿತು ಪ್ರತಿಕ್ರಿಯಿಸಿದ ಸಚಿವರು, "ಇಂಧನ ಇಲಾಖೆ ಬಲಿಷ್ಠವಾಗಿದೆ. ನಮ್ಮ ಸರ್ಕಾರ ನಿಮ್ಮ (ನೌಕರರ) ಪರವಾಗಿದೆ. ಖಾಸಗೀಕರಣ ವಿಚಾರಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಲಾಗಿದ್ದು, ಅದರಂತೆ ಎಸ್ಕಾಂಗಳು ಕೆಇಆರ್ ಸಿ ಮುಂದೆ ಆಕ್ಷೇಪಣೆ ಸಲ್ಲಿಸಿವೆ. ನಾವು ಯಾವುದೇ ಖಾಸಗಿ ಕಂಪನಿಗೆ ಕಡಿಮೆ ಇಲ್ಲ. ನೌಕರರು ಮತ್ತು ಅಧಿಕಾರಿಗಳ ಬೇಡಿಕೆಗಳಿಗೆ ಸ್ಪಂದಿಸಲಿದ್ದೇವೆ. ಮುಂದಿನ ದಿನಗಳಲ್ಲಿ ಸಚಿವ ಸಂಪುಟದಲ್ಲಿ ಚರ್ಚಿಸಿ ಸೂಕ್ತ ಕ್ರಮ ಜರುಗಿಸಲಾಗುವುದು. ನಾವು ರಾಜ್ಯದ ಸೇವೆ ಮಾಡಲು ಬಂದವರು. ಇಲ್ಲಿ ಖಾಸಗೀಕರಣ ವಿಚಾರ ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು.

"ಇಂಧನ ಇಲಾಖೆ ಈಗಾಗಲೇ ದೂರದೃಷ್ಟಿಯ ಯೋಜನೆಗಳನ್ನು ಸಿದ್ಧಪಡಿಸಿದೆ, ಮುಂದಿನ 25 ವರ್ಷಗಳ ಅವಧಿಗೆ ವಿದ್ಯುತ್ ಭ್ರದತೆ ಒದಗಿಸಲು ಯೋಜನೆ ಸಿದ್ಧವಾಗಿದೆ. ರೈತರ ಜತೆಗೆ 10,000 ಎಕರೆಯಲ್ಲಿ ಸೌರಪಾರ್ಕ್ ಮಾಡಿದ್ದೇವೆ. ರೈತರು ಇನ್ನೂ 10,000 ಎಕರೆ ಕೊಡಲು ಮುಂದೆ ಬಂದಿದ್ದಾರೆ. ವಿದ್ಯುತ್ ಉತ್ಪಾದನೆ ಅತ್ಯುತ್ತಮವಾಗಿದೆ. ಪೀಕ್ ಅವರ್ ವಿದ್ಯುತ್ ಮಾರಾಟವನ್ನು ಹೆಚ್ಚಿಸಿರುವುದರಿಂದ ಇಲಾಖೆಗೆ ಲಾಭವಾಗಿದೆ. ವಿನಿಮಯ ಆಧಾರದ ಮೇಲೆ ವಿದ್ಯುತ್ ಪಡೆಯುವುದು ಮತ್ತು ದೀರ್ಘಾವಧಿ ಒಪ್ಪಂದಗಳ ಮೂಲಕ ವಿದ್ಯುತ್ ಖರೀದಿ ಮೂಲಕ ಇಂಧನ ಭದ್ರತೆಗೆ ಕ್ರಮ ವಹಿಸಲಾಗಿದೆ ಎಂದರು.

### ಗೃಹಜ್ಯೋತಿ ಮೂಲಕ 1.67 ಕೋಟಿ ಜನರಿಗೆ ಉಚಿತ ವಿದ್ಯುತ್

ಗೃಹಜ್ಯೋತಿ ಮೂಲಕ 1.67 ಕೋಟಿ ಗ್ರಾಹಕರಿಗೆ ಉಚಿತ ವಿದ್ಯುತ್ ಕೊಟ್ಟಿದ್ದೇವೆ. ಇದಕ್ಕಾಗಿ ಬಜೆಟ್ ನಲ್ಲೇ ಅನುದಾನ ನೀಡಲಾಗಿದೆ. ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸಲು 21,000 ಕೋಟಿ ರೂ. ಅನುದಾನ ಕೊಡುತ್ತಿದ್ದೇವೆ. ನಮ್ಮ ಅಧಿಕಾರಿಗಳು, ಇಂಜಿನಿಯರ್ ಮತ್ತು ನೌಕರರು ತಂಡವಾಗಿ ಕೆಲಸ ಮಾಡುತ್ತಿದ್ದಾರೆ. ಯಾವುದೇ ಸಮಸ್ಯೆ ಎದುರಾದರೆ ಶೀಘ್ರವೇ ಪರಿಹಾರ ನೀಡಲಿದ್ದಾರೆ," ಎಂದು ಕೆ.ಜೆ. ಜಾರ್ಜ್ ಹೇಳಿದರು. "ಇಂಧನ ಇಲಾಖೆಯಲ್ಲಿ ಮೂಲ ಸೌಕರ್ಯ ಹೆಚ್ಚಿಸುವ ಕಾರ್ಯ ವೇಗವಾಗಿ ನಡೆಯುತ್ತಿದೆ. 120 ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಯೋಜನೆಗಳು ಜಾರಿಯಾಗಲಿವೆ. ಆ ಮೂಲಕ ವಿದ್ಯುತ್ ಪೂರೈಕೆಯನ್ನು ಸಮರ್ಪಕಗೊಳಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

# ನೈತಿಕತೆ ಪಾಠಕ್ಕೂ ಮುನ್ನ ಸಾಂವಿಧಾನಿಕ ಹುದ್ದೆಗೆ ಗೌರವ ತೋರಿ

**ನವದೆಹಲಿ, ಜೂ.29:** ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ 'ಗಾಂಧಿ– ಗೋಡ್ಸೆ– ಗೋವು' ಎಂದೆಲ್ಲಾ ಸಮಾಜದಲ್ಲಿ ಶಾಂತಿ ಕದಡುವ ದುಸ್ಸಾಹಸಕ್ಕೆ ಕೈ ಹಾಕಿದ್ದು, ಬೇರೆಯವರಿಗೆ ನೈತಿಕತೆ ಪಾಠ ಮಾಡುವ ಮೊದಲು ಸಾಂವಿಧಾನಿಕ ಹುದ್ದೆಗಳಿಗೆ ಘನತೆ–ಗೌರವ ತೋರುವುದನ್ನು ಕಲಿಯಲಿ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ್ ಜೋಶಿ ತಿರುಗೇಟು ನೀಡಿದ್ದಾರೆ. ಸಮಾಜದ ಶಾಂತಿ–ಸೌಹಾರ್ದತೆ ಬಲಿ ಕೊಟ್ಟು ರಾಜಕೀಯ ಲಾಭ ಪಡೆಯಲು



■ ಕೆಪಿಸಿಸಿ ಅಧ್ಯಕ್ಷರಿಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಖಡಕ್ ತಿರುಗೇಟ

ಯತ್ನಿಸುತ್ತಿರುವವರು ಬಿ.ಕೆ. ಹರಿಪ್ರಸಾದ್. ಕರ್ನಾಟಕದಲ್ಲಿ ಒಂದೆಡೆ ಕಾನೂನು ಸುವ್ಯವಸ್ಥೆ ಹದಗೆಡುತ್ತಿದ್ದರೆ, ಮತ್ತೊಂದೆಡೆ ಪಕ್ಷದ ಹೊಸ ಅಧ್ಯಕ್ಷರು ಅಧಿಕಾರದ ಮದದಲ್ಲಿ ಸಮಾಜದ ಸ್ವಾಸ್ಥ್ಯ ಕೆಡಿಸಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.


ಪ್ರಧಾನಿ ಆಗಲಿ, ಮುಖ್ಯಮಂತ್ರಿ ಆಗಲಿ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೋಟ್ಯಂತರ ಜನರಿಂದ ಮತ ಪಡೆದೇ ಆಯ್ಕೆಯಾದವರು. ರಾಜಕೀಯ ಪಕ್ಷಗಳ ಮಧ್ಯೆ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇರಬಹುದು. ಆದರೆ, ಸಾಂವಿಧಾನಿಕ ಹುದ್ದೆಗಳಿಗೆ ಹೋಲಿಕೆ ಮಾಡುವುದು ಸರಿಯಲ್ಲ ಎಂದು ಖಂಡಿಸಿದ್ದಾರೆ.ಕೆಪಿಸಿಸಿ ಅಧ್ಯಕ್ಷರು ಹೈಕಮಾಂಡ್ ಓಲೈಸಿಕೊಳ್ಳಲು ಗಾಂಧಿ–ಗೋಡ್ಸೆ–ಗೋವು' ಎನ್ನುತ್ತ ಸಮಾಜದಲ್ಲಿ ಶಾಂತಿ ಕದಡುವ ಪ್ರಚೋದನಕಾರಿ ಮಾತನಾಡುತ್ತಿದ್ದಾರೆ. ಇದು ಅತ್ಯಂತ ಕೀಳುಮಟ್ಟದ ರಾಜಕೀಯ, ಸಂಸ್ಕೃತಿಹೀನತೆಯ ಪ್ರತೀಕ ಎಂದು ಸಚಿವರು ಟೀಕಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಜನಕಲ್ಯಾಣ ಮರೆತು ಕೇವಲ ತುಷ್ಟೀಕರಣ, ಓಲೈಕೆ ರಾಜಕಾರಣ ಹಾಗೂ ಸಮಾಜ ಒಡೆಯುವ ಕೆಲಸ ಮಾಡುತ್ತಲೇ ಬಂದಿದೆ. ಇಂಥ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ರಾಜ್ಯದ ಜನ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಕೆ ನೀಡಿದರು.

ಮಹಾತ್ಮಾ ಗಾಂಧೀಜಿ ಅವರ ಅಹಿಂಸೆ ಮಾರ್ಗ ಅನ್ನೋದು ಇಂದಿನ ಕಾಂಗ್ರೆಸ್ಸಿಗರಿಗೆ ಕೇವಲ ಬಾಯಿ ಮಾತಾಗಿದೆ. ವಾಸ್ತವದಲ್ಲಿ ಇವರು ನಕಲಿ ಗಾಂಧಿಗಳ ಜತೆಗೂಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಏನೆಲ್ಲಾ ಮಾಡುತ್ತಿರುತ್ತಾರೆ. ಇದು ರಾಜಕೀಯ ದ್ವೇಷದ ಪರಮಾವಧಿ ಎಂದು ವಾಗ್ದಾಳಿ ನಡೆಸಿದ್ದಾರೆ. ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ, ಸಿಖ್ ಹತ್ಯಾಕಾಂಡ ಸೇರಿದಂತೆ ಹಲವು ಕಹಿ ಘಟನೆಗಳನ್ನು, ತಮ್ಮ ಆಡಳಿತ ವೈಫಲ್ಯಗಳನ್ನು ಮರೆತ ಕಾಂಗ್ರೆಸ್ ನಾಯಕರು, ಸದಾ ಇಂತಹ ಪ್ರಚೋದನಾತ್ಮಕ ಮತ್ತು ವಿಭಜಕ ಹೇಳಿಕೆಗಳ ಮೊರೆ ಹೋಗುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಆರೋಪಿಸಿದ್ದಾರೆ.



ನವದೆಹಲಿಯ ರಾಜಾಜಿ ಮಾರ್ಗದಲ್ಲಿರುವ ಖರ್ಗೆ ನಿವಾಸಕ್ಕೆ ಸೋಮವಾರ ಭೇಟಿ ನೀಡಿದ್ದ ರಾಜ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಭಿನಂದನೆ ಸಲ್ಲಿಸಿದರು.




ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷ ಬೇಳೂರು ಗೋಪಾಲಕೃಷ್ಣ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 1.05 ಲಕ್ಷ ರೂ.ಗಳ ಚೆಕ್ ಅನ್ನು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಹಸ್ತಾಂತರಿಸಿದರು. ನಿಗಮ ವ್ಯವಸ್ಥಾಪಕ ನಿರ್ದೇಶಕ ಡಾ. ವಿ. ವೆಂಕಟೇಶ್ ಐಎಫ್‌ಎಸ್ ಈ ಸಂದರ್ಭದಲ್ಲಿ ಇದ್ದರು.

# ಆರೋಪಿಗಳಿಗೆ ನ್ಯಾಯಾಂಗ ಬಂಧನ

**ಅಯೋಧ್ಯಾ, ಜೂ.29:** ರಾಮಮಂದಿರದ ದೇಣಿಗೆ ಹಣದ ದುರ್ಬಳಕೆ ಆರೋಪದಲ್ಲಿ ಬಂಧಿತರಾದ ಎಲ್ಲಾ ಎಂಟು ಆರೋಪಿಗಳನ್ನು ಸ್ಥಳೀಯ ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಕಸ್ಟಡಿಗೆ ಕಳುಹಿಸಿದೆ. ಆರೋಪಿಗಳು

■ ಅಯೋಧ್ಯಾ ರಾಮ ಮಂದಿರ ದೇಣಿಗೆ ದುರ್ಬಳಕೆ ಪ್ರಕರಣ

ಜುಲೈ 13 ರವರೆಗೆ ನ್ಯಾಯಾಂಗ ಬಂಧನದಲ್ಲಿರಲಿದ್ದಾರೆ. ವಿಶೇಷ ನ್ಯಾಯಾಧೀಶ ರಜತ್ ವರ್ಮಾ ಅವರು ಈ ಆದೇಶ ಹೊರಡಿಸಿದ್ದಾರೆ. ಪೊಲೀಸರು ತನಿಖೆ ಪೂರ್ಣಗೊಳ್ಳುವವರೆಗೂ ಆರೋಪಿಗಳನ್ನು ನ್ಯಾಯಾಂಗ ಕಸ್ಟಡಿಯಲ್ಲಿಡಬೇಕು ಎಂದು ನ್ಯಾಯಾಲಯಕ್ಕೆ ತಿಳಿಸಿದ್ದರು. ಆರೋಪಿಗಳಲ್ಲಿ ಟಿನ್ನು ಯಾದವ್ (ರಾಮಶಂಕರ್) ಸೇರಿದಂತೆ ಅವಿನಾಶ್ ಶುಕ್ಲಾ, ಅನುಕಲ್ಪ ಮಿಶ್ರಾ, ಲವ್ ಕುಶ್ ಮಿಶ್ರಾ, ಮನೀಶ್ ಕುಮಾರ್ ಯಾದವ್, ಕರುಣೇಶ್ ಪಾಂಡೇ, ರಾಮ್‌ಶಂಕರ್ ಮಿಶ್ರಾ ಮತ್ತು ಸುಭಾಷ್ ಶ್ರೀವಾಸ್ತವ ಇದ್ದಾರೆ. ಈ ಎಲ್ಲಾ ಆರೋಪಿಗಳು ರಾಮಮಂದಿರಕ್ಕೆ ಬಂದ ನಗದು ಹಾಗೂ ಬೆಲೆಬಾಳುವ ವಸ್ತುಗಳ ಎಣಿಕೆಯಲ್ಲಿ ಕಾರ್ಯದಲ್ಲಿದ್ದರು. ವಿಶೇಷ ತನಿಖಾ ತಂಡ ಈ ಪ್ರಕರಣದ ತನಿಖೆ ನಡೆಸುತ್ತಿದೆ.

# ಸಿಸ್ಟರ್–ಸಿಟಿ ಒಪ್ಪಂದಕ್ಕೆ ಕರ್ನಾಟಕ ಉತ್ಸುಕ: ಡಾ.ಜಿ.ಪರಮೇಶ್ವರ್



■ ಪೆರು ದೇಶದ ಜತೆಗಿನ ಬಾಂಧವ್ಯ ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪೂರಕ ಕ್ರಮ

**ಬೆಂಗಳೂರು, ಜೂ.29:** ಪೆರು ಗಣರಾಜ್ಯದೊಂದಿಗಿನ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪೆರು ದೇಶದ ರಾಜಧಾನಿ ಲಿಮಾದಂತಹ ಪ್ರಮುಖ ನಗರ ಹಾಗೂ ಬೆಂಗಳೂರು ನಗರದ ನಡುವೆ ಐತಿಹಾಸಿಕ 'ಸಿಸ್ಟರ್–ಸಿಟಿ' ಒಪ್ಪಂದ ಮಾಡಿಕೊಳ್ಳಲು ಕರ್ನಾಟಕ ಸರ್ಕಾರ ಉತ್ಸುಕವಾಗಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದರು. ಭಾರತ ಮತ್ತು ಪೆರು ನಡುವಿನ 63 ವರ್ಷಗಳ ನಿರಂತರ ರಾಜತಾಂತ್ರಿಕ ಬಾಂಧವ್ಯ ಹಾಗೂ ಪೆರು ಗಣರಾಜ್ಯದ 205ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ಉನ್ನತ ಮಟ್ಟದ ರಾಜತಾಂತ್ರಿಕ ಸಮಾರಂಭದಲ್ಲಿ ಮಾತನಾಡಿ, ಪೆರುವಿನ ಲ್ಯಾಟಿನ್ ಅಮೆರಿಕನ್ ವಿಮೋಚನಾ ಚಳವಳಿ ಮತ್ತು ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆದ ಭಾರತದ ಸ್ವಾತಂತ್ರ್ಯ ಹೋರಾಟದ ನಡುವಿನ ಸಾಮ್ಯತೆಗಳನ್ನು ಸ್ಮರಿಸಿದರು.

ಭಾರತದ ಐಟಿ ಸಾಫ್ಟ್‌ವೇರ್ ಅಭಿವೃದ್ಧಿ ಮತ್ತು ಜೈವಿಕ ತಂತ್ರಜ್ಞಾನ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಶೇ.40ಕ್ಕಿಂತ ಹೆಚ್ಚಿನ ಪಾಲನ್ನು ಹೊಂದುವ ಮೂಲಕ ಪ್ರಥಮ ಸ್ಥಾನದಲ್ಲಿದ್ದು, ಈ ಕ್ಷೇತ್ರದಲ್ಲಿ ಇಡೀ ದೇಶವನ್ನೇ ಮುನ್ನಡೆಸುತ್ತಿದೆ. ಇತ್ತೀಚೆಗೆ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಅಭೂತಪೂರ್ವ ಯಶಸ್ಸು ಮತ್ತು ಅಲ್ಲಿ ಹರಿದುಬಂದ ಬೃಹತ್ ಹೂಡಿಕೆಗಳು ರಾಜ್ಯದ ಪ್ರಗತಿಯನ್ನು ಮತ್ತಷ್ಟು ಸಾಬೀತುಪಡಿಸಿವೆ ಎಂದು ಡಾ.ಜಿ. ಪರಮೇಶ್ವರ್ ತಿಳಿಸಿದರು. ಬೆಂಗಳೂರು ಮತ್ತು ಪೆರು ದೇಶದ ಪ್ರಮುಖ ನಗರದ ನಡುವೆ ವ್ಯಾಪಾರ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ನೇರ ಸಾಂಸ್ಥಿಕ ಸಹಯೋಗವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಈ ಸಿಸ್ಟರ್–ಸಿಟಿ ಒಪ್ಪಂದವು ಅತ್ಯಂತ ಮಹತ್ವದ್ದಾಗಿದೆ. ಇದು ಭವಿಷ್ಯದಲ್ಲಿ ಉಭಯ ದೇಶಗಳ ನಡುವಿನ 10 ಶತ ಕೋಟಿಡಾಲರ್ ದ್ವಿಪಕ್ಷೀಯ ವ್ಯಾಪಾರ ವೃದ್ಧಿಗೆ ದೊಡ್ಡ ಮುನ್ನುಡಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಉನ್ನತ ಸರ್ಕಾರಿ ಅಧಿಕಾರಿಗಳು, ವಿವಿಧ ದೇಶಗಳ ರಾಜತಾಂತ್ರಿಕರು ಮತ್ತು ಬೆಂಗಳೂರಿನ ಪ್ರಮುಖ ವಾಣಿಜ್ಯೋದ್ಯಮಿಗಳು ಭಾಗವಹಿಸಿದ್ದರು.

### ಬೆಂಗಳೂರು ನಾವೀನ್ಯತೆಯ ಜಾಗತಿಕ ಕೇಂದ್ರ

ಭಾರತದಲ್ಲಿನ ಪೆರು ರಾಯಭಾರಿ ಜೇವಿಯರ್ ಮ್ಯಾನುಯೆಲ್ ಪೌಲಿನಿಚ್ ವೆಲಾರ್ಡ್ ಮಾತನಾಡಿ, ಬೆಂಗಳೂರು ನಗರವು ನಾವೀನ್ಯತೆಯ ಪ್ರಮುಖ ಜಾಗತಿಕ ಕೇಂದ್ರವಾಗಿದೆ. ಇಲ್ಲಿನ ಹೂಡಿಕೆದಾರರು ಹಾಗೂ ಉದ್ಯಮಿಗಳು ತಮ್ಮ ಸಾಂಪ್ರದಾಯಿಕ ವ್ಯಾಪಾರದ ಜೊತೆಗೆ ಪೆರು ದೇಶದಲ್ಲಿ ವ್ಯವಹಾರ ವಿಸ್ತರಣೆಗೆ ಮುಂದಾಗಬೇಕು ಹಾಗೂ ಹೂಡಿಕೆ ಮಾಡಬೇಕು," ಎಂದು ಮುಕ್ತ ಆಹ್ವಾನ ನೀಡಿದರು. ಕೃತಕ ಬುದ್ಧಿಮತ್ತೆ, ಡಿಜಿಟಲ್ ರೂಪಾಂತರ, ಫಿನ್‌ಟೆಕ್ ಸೈಬರ್ ಭದ್ರತೆ ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳಂತಹ ಅತ್ಯಾಧುನಿಕ ಕ್ಷೇತ್ರಗಳಲ್ಲಿ ಭಾರತೀಯ ಟೆಕ್ ಕಂಪನಿಗಳೊಂದಿಗೆ ಸಹಯೋಗ ಸಾಧಿಸಲು ಪೆರು ದೇಶವು ಎದುರು ನೋಡುತ್ತಿದೆ ಎಂದು ಪ್ರಸ್ತಾಪಿಸಿದರು.

# ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು: ಅಶೋಕ್ ಕಿಡಿ

**ಬೆಂಗಳೂರು, ಜೂ.29:** ಕಾಂಗ್ರೆಸ್ ಸರ್ಕಾರದಿಂದ ಕನ್ನಡಿಗರಿಗೆ ಮತ್ತೊಮ್ಮೆ ಮಹಾದ್ರೋಹವಾಗಿದೆ. ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಹರಿಸಲಾಗುತ್ತಿದೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆರೋಪಿಸಿದ್ದಾರೆ.



■ ಕಾಂಗ್ರೆಸ್‌ನಿಂದ ಕನ್ನಡಿಗರಿಗೆ ಮತ್ತೊಮ್ಮೆ ಮಹಾದ್ರೋಹ: ಪ್ರತಿಪಕ್ಷ ನಾಯಕ ಅಶೋಕ್ ಕಿಡಿ

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸೋಮವಾರ ಮಾಹಿತಿ ಹಂಚಿಕೊಂಡಿರುವ ಅವರು, ರಾಜ್ಯದಲ್ಲಿ ಮುಂಗಾರು ಕ್ಷೀಣಿಸಿ, ಬರದ ಭೀತಿ ಆವರಿಸಿದೆ. ಸಿಲಿಕಾನ್ ಸಿಟಿ ಬೆಂಗಳೂರಿನಲ್ಲಿ ಹನಿ ನೀರಿಗೂ ಜನ ಪರದಾಡುವ ಪರಿಸ್ಥಿತಿ ಎದುರಾಗಿದೆ. ಆದರೆ ಈ ಕಳ್ಳ ಕಾಂಗ್ರೆಸ್ ಸರ್ಕಾರ ಕದ್ದುಮುಚ್ಚಿ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿದೆ ಎಂದು ಕಿಡಿಕಾರಿದ್ದಾರೆ.

ಕುಡಿಯುವ ನೀರಿನ ನೆಪವೊಡ್ಡಿ ಕಾವೇರಿ ಕೊಳ್ಳದ ಜೀವನಾಡಿ ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿಗೆ ನೀರನ್ನು ಹರಿಸಲಾಗುತ್ತಿದೆ. ಕಳೆದ ಮೂರು ದಿನಗಳಿಂದ ಪ್ರತಿದಿನ 2,000 ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವುದು ಕನ್ನಡಿಗರ ಬೆನ್ನಿಗೆ ಚುಚ್ಚುತ್ತಿರುವ ಚೂರಿಯಲ್ಲದೆ ಮತ್ತಿನ್ನೇನು ಎಂದು ಮುಖ್ಯಮಂತ್ರಿಗಳನ್ನು ಪ್ರಶ್ನಿಸಿದ್ದಾರೆ. ಈ ನಾಡದ್ರೋಹಿ ಕಾಂಗ್ರೆಸ್ ಪಕ್ಷದ ಇತಿಹಾಸವೇ ಇಷ್ಟು, ಅಧಿಕಾರ ಇಲ್ಲದಿದ್ದಾಗ: ನಮ್ಮ ನೀರು ನಮ್ಮ ಹಕ್ಕು ಎಂದು ನಾಟಕದ ಬೊಬ್ಬೆ! ಅಧಿಕಾರ ಸಿಕ್ಕಾಗ: "ನಮ್ಮ ನೀರು ತಮಿಳುನಾಡಿನ ಹಕ್ಕು" ಎಂದು ಅಧಿಕಾರಕ್ಕಾಗಿ ತಮಿಳುನಾಡಿನ ಎದುರು ಸಂಪೂರ್ಣ ಶರಣಾಗತಿ ಆಗುವುದು. ನಾಡಿನ ಜನತೆಯ ಹಿತ ಕಾಯದೆ ಹೈಕಮಾಂಡ್ ಅಣತಿಯಂತೆ ತಮಿಳುನಾಡಿನ ಜೊತೆ ರಾಜಿ ಮಾಡಿಕೊಳ್ಳುವುದು. ಕೇವಲ ರಾಜಕೀಯ ಮೈತ್ರಿಗಾಗಿ, ಅಧಿಕಾರದ ಆಸೆಗಾಗಿ ಅಂದು ಡಿಎಂಕೆ, ಇಂದು ಟಿವಿಕೆ ಜೊತೆ ಮೈತ್ರಿ ಮಾಡಿಕೊಂಡು ಕನ್ನಡಿಗರಿಗೆ ಪದೇ ಪದೇ ಅನ್ಯಾಯ ಮಾಡುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ ಕನ್ನಡಿಗರ ಹಿತಕ್ಕಿಂತ ಅಧಿಕಾರದ ಸ್ವಾರ್ಥವೇ ಹೆಚ್ಚು ಎಂದು ವಾಗ್ದಾಳಿ ನಡೆಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಹಿಂದೆ ಚುನಾವಣೆಗೆ ಮುನ್ನ ರಾಜಕೀಯ ಲಾಭಕ್ಕಾಗಿ ಮೇಕೆದಾಟು ಹೆಸರಿನಲ್ಲಿ ಪಾದಯಾತ್ರೆ ಹೆಸರಲ್ಲಿ ಬೀದಿನಾಟಕ ಮಾಡಿದರು. ಈಗ ಯಾವ ಯಾತ್ರೆ ಮಾಡುತ್ತೀರಿ. ನೀರಿಲ್ಲದೆ, ಬೆಳೆಯಿಲ್ಲದೆ ಕಾವೇರಿ ಕೊಳ್ಳದ ರಾಜ್ಯದ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವರ ಶವಯಾತ್ರೆ ಮಾಡ್ತೀರಾ, ಬೆಂಗಳೂರಿನ ಜನ ಟ್ಯಾಂಕರ್ ಮಾಫಿಯಾ ಸುಲಿಗೆಗೆ ಸಿಕ್ಕಿ ಪರದಾಡಿದರೆ ಟ್ಯಾಂಕರ್ ಯಾತ್ರೆ ಮಾಡುತ್ತೀರಾ, ಕನ್ನಡ ನಾಡಿನ ಜನತೆಗೆ ಕನಿಷ್ಠ ನೀರಿನ ಭದ್ರತೆ, ನೀರಿನ ಹಕ್ಕು ನೀಡಲಾಗದ ಈ ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ರಾಜ್ಯದ ಜನತೆ ತಕ್ಕಪಾಠ ಕಲಿಸುವುದು ನಿಶ್ಚಿತ ಎಂದು ಅಶೋಕ್ ಎಚ್ಚರಿಕೆ ನೀಡಿದ್ದಾರೆ.

# ಎಸ್‌ಐಆರ್: ಪಾರದರ್ಶಕತೆಗೆ ಆದ್ಯತೆ ನೀಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆಗ್ರಹ

**ಬೆಂಗಳೂರು, ಜೂ.29:** ಇಂದಿ(ಜೂ.30)ನಿಂದ ಆರಂಭವಾಗಲಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಸಚಿವ ಸಂಪುಟದಲ್ಲಿ ಹಲವು ಆಕ್ಷೇಪಗಳನ್ನು ವ್ಯಕ್ತಪಡಿಸಿದ್ದೇವೆ. ಈ ಕುರಿತು ಮುಖ್ಯ ಚುನಾವಣಾಧಿಕಾರಿಗೂ ಆಕ್ಷೇಪ ಸಲ್ಲಿಸಲಾಗಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಸೋಮವಾರ ಮಾತನಾಡಿದ ಅವರು, ಯಾವ ಆಧಾರದ ಮೇಲೆ ಮತದಾರರ ಪಟ್ಟಿಯಿಂದ ಜನರ ಹೆಸರನ್ನು ಕೈಬಿಡಲಾಗುತ್ತಿದೆ, ಅದರ ಹಿಂದಿನ ತರ್ಕವೇನು, ಎಂಬ ಪ್ರಶ್ನೆಗಳನ್ನು ಆಯೋಗದ ಮುಂದಿಟ್ಟಿದ್ದೇವೆ. ಗೊಂದಲಗಳಿದ್ದರೆ ಟ್ರಿಬ್ಯೂನಲ್‌ನಲ್ಲಿ ಪ್ರಶ್ನಿಸಲು ಅವಕಾಶ ನೀಡಬೇಕು. ಕೇವಲ ಸ್ಪೆಲ್ಲಿಂಗ್ ತಪ್ಪಾಗಿದೆ ಎಂಬ ಕಾರಣಕ್ಕೆ ಮತದಾನದ ಹಕ್ಕನ್ನು ಕಸಿದುಕೊಳ್ಳಬಾರದು. ನಮ್ಮ ಆಕ್ಷೇಪಗಳಿಗೆ ಚುನಾವಣಾ ಆಯೋಗದಿಂದ ಇನ್ನೂ ಉತ್ತರ ಬಂದಿಲ್ಲ. ನಾವು ಎಸ್‌ಐಆರ್ ಮಾಡಬೇಡಿ ಎಂದು ಹೇಳುತ್ತಿಲ್ಲ. ಆದರೆ ಉತ್ತಮ ಮತ್ತು ಪಾರದರ್ಶಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸಬೇಕು ಎಂಬುದು ನಮ್ಮ ಆಗ್ರಹ ಎಂದು ತಿಳಿಸಿದರು.

### ಯಾವ ಆಧಾರದಲ್ಲಿ ಮತದಾರ ಪಟ್ಟಿಯಿಂದ ಹೆಸರು ಕೈಬಿಡಲಾಗುತ್ತಿದೆ, ತರ್ಕದ ಬಗ್ಗೆ ಚುನಾವಣಾ ಆಯೋಗಕ್ಕೆ ಪ್ರಶ್ನೆ

ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದಲ್ಲಿ ಬಡವರ ಹಕ್ಕು ಕಸಿದುಕೊಳ್ಳಲಾಗಿದೆ ಎಂಬ



ಆರೋಪ ಕೇಳಿಬಂದಿದೆ. ಪಶ್ಚಿಮ ಬಂಗಾಳದಲ್ಲಿ 89 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗುತ್ತಿದೆ. ಟ್ರಿಬ್ಯೂನಲ್‌ನಲ್ಲೂ ವಿಚಾರಣೆ ನಡೆಸಲು ಅವಕಾಶ ಇಲ್ಲದಿರುವುದು ಆತಂಕದ ವಿಷಯ. ಈ ವಿಚಾರದಲ್ಲಿ ಜಾಗೃತಿ ಅಭಿಯಾನ ನಡೆಸುತ್ತಿದ್ದೇವೆ. ಅಗತ್ಯವಿದ್ದರೆ ಕಾನೂನು ಹೋರಾಟವನ್ನೂ ಮಾಡಬೇಕಾಗುತ್ತದೆ ಎಂದರು.

**ಎಚ್‌ಡಿಕೆ ಹೇಳಿಕೆಗೆ ವ್ಯಂಗ್ಯ:** ಬಿಡದಿ ಟೌನ್‌ಶಿಪ್ ಭೂಸ್ವಾಧೀನ ಜುಲೈ 1ರಿಂದ ಜಾರಿಗೆ ಬರಲಿರುವ ಹೊಸ ಯೋಜನೆಯ ಆರ್ಥಿಕ ಹೊರೆ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಸೇರಿ ಹಲವು ವಿಷಯಗಳ ಬಗ್ಗೆ ಪ್ರತಿಕ್ರಿಯೆ ನೀಡಿದ ಪ್ರಿಯಾಂಕ್ ಖರ್ಗೆ, ಮಾಜಿ ಮುಖ್ಯಮಂತ್ರಿ ಹಾಗೂ ಈಗಿನ ಕೇಂದ್ರ ಸಚಿವರಾಗಿರುವವರು ಹಿಂದೆ ಆರ್‌ಎಸ್‌ಎಸ್ ವಿರುದ್ಧ ದೊಡ್ಡ ಲೇಖನವನ್ನೂ ಬರೆದಿದ್ದರು ಎಂದು ನೆನಪಿಸಿದರು.

ಈಗ ಎಲ್ಲವೂ ಬದಲಾಗಿದೆ. ಯಾರ ಮನೆಗೆ ಯಾರು ಹೋಗಿದ್ದರು ಎಂಬ ಸೂಕ್ಷ್ಮ ವಿಚಾರಗಳನ್ನು ಈಗ ಚರ್ಚೆ ಮಾಡುವ ಅಗತ್ಯವಿಲ್ಲ. "ಅವರು ಆತ್ಮಕತೆ ಬರೆಯಬೇಕಾದರೆ ಬರೆಯಲಿ, ನಾವು ನಮ್ಮ ಆತ್ಮಕತೆ ಬರೆಯುತ್ತೇವೆ" ಎಂದು ವ್ಯಂಗ್ಯವಾಡಿದರು.

### ಬಿಡದಿ ಟೌನ್‌ಶಿಪ್: ಸ್ವಪ್ರೇರಣೆಯಿಂದ ಭೂಮಿ ನೀಡಿದರೆ ಪರಿಗಣನೆ

ಬಿಡದಿ ಟೌನ್‌ಶಿಪ್‌ಗಾಗಿ ಭೂಸ್ವಾಧೀನ ಮಾಡುವುದರಿಂದ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಆರೋಪಕ್ಕೆ ಪ್ರತಿಕ್ರಿಯಿಸಿದ ಖರ್ಗೆ, ಭೂಸ್ವಾಧೀನ ಕಾಯ್ದೆ ಬಹಳ ಸ್ಪಷ್ಟವಾಗಿದೆ. ಯಾರನ್ನೂ ಬಲವಂತವಾಗಿ ಭೂಮಿ ನೀಡುವಂತೆ ಒತ್ತಾಯಿಸಲು ಸಾಧ್ಯವಿಲ್ಲ. ರೈತರು ಸ್ವಯಂಪ್ರೇರಿತವಾಗಿ ಭೂಮಿ ನೀಡಿದರೆ ಮಾತ್ರ ಅದನ್ನು ಪರಿಗಣಿಸಲಾಗುತ್ತದೆ. ಯಾರೂ ಸ್ವಯಂಪ್ರೇರಿತವಾಗಿ ಭೂಮಿ ನೀಡದಿದ್ದರೆ ಸ್ವಾಧೀನ ಮಾಡುವ ಪ್ರಶ್ನೆಯೇ ಇಲ್ಲ. ಆದರೆ 90ರಿಂದ 95 ಶೇಕಡಾ ಭೂಮಿ ಒಪ್ಪಿಗೆ ಬಂದರೆ ಕಾನೂನಿನ ಪ್ರಕಾರ ಮುಂದಿನ ಕ್ರಮ ಕೈಗೊಳ್ಳಬಹುದು ಎಂದು ಪ್ರಿಯಾಂಕ್ ಖರ್ಗೆ ವಿವರಿಸಿದರು. ದೇವನಹಳ್ಳಿ ಹಾಗೂ ಚನ್ನರಾಯಪಟ್ಟಣ ಭಾಗದಲ್ಲಿ ಕೃಷಿ ವಲಯ ಘೋಷಿಸಿರುವುದನ್ನು ಉದಾಹರಣೆಯಾಗಿ ಉಲ್ಲೇಖಿಸಿದ ಅವರು, ಕೆಲವರು ಕೈಗಾರಿಕೆ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಅದನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದರು. "ರೈತರನ್ನು ಭೂಮಿ ಮಾರುವಂತೆ ಯಾರೂ ಬಲವಂತ ಮಾಡಲಾಗುವುದಿಲ್ಲ. ನಾವು ಅಂತಹ ಕೆಲಸ ಮಾಡಿಲ್ಲ, ಮುಂದೆಯೂ ಮಾಡುವುದಿಲ್ಲ" ಎಂದು ಸ್ಪಷ್ಟಪಡಿಸಿದರು.

# ಶ್ರೀರಾಮ ಮಂದಿರದಲ್ಲಿ ದೇಣಿಗೆ ದುರ್ಬಳಕೆ ಆರೋಪ ತುರ್ತು ವಿಚಾರಣೆಗೆ ಸುಪ್ರೀಂಕೋರ್ಟ್ ನಕಾರ

**ನವದೆಹಲಿ,ಜೂ.29:** ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ನಡೆದ ಆರ್ಥಿಕ ಅಕ್ರಮಗಳು ಮತ್ತು ಹಣ ನಾಪತ್ತೆಯಾದ ಬಗ್ಗೆ ಕೇಂದ್ರ ತನಿಖಾ ದಳ (ಸಿಬಿಐ) ತನಿಖೆ ನಡೆಸಬೇಕೆಂದು ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ತುರ್ತು ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಂ.ಎಂ.ಸುಂದ್ರೇಶ್ ಮತ್ತು ಶೀಲ್ ನಾಗು ಅವರ ರಜಾಕಾಲದ ಪೀಠದ ಮುಂದೆ ವಕೀಲ ಎನ್.ಕೆ.ಗೋಸ್ವಾಮಿ ಈ ವಿಷಯವನ್ನು ಪ್ರಸ್ತಾಪಿಸಿದರು. ಪ್ರಕರಣದಲ್ಲಿ ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ತಿರುಚುವ ಸಾಧ್ಯತೆ ಇದೆ ಎಂದು ಗೋಸ್ವಾಮಿ ವಾದಿಸಿದರು ಮತ್ತು ಸಾಕ್ಷ್ಯಗಳ ಸಂರಕ್ಷಣೆಗಾಗಿ ನಿರ್ದೇಶನಗಳನ್ನು ರವಾನಿಸಲು ಸಾಧ್ಯವಾದಷ್ಟು ಬೇಗ ವಿಚಾರಣೆ ನಡೆಸಬೇಕೆಂದು ನ್ಯಾಯಾಲಯವನ್ನು ಒತ್ತಾಯಿಸಿದರು.

ಆದಾಗ್ಯೂ, ತುರ್ತುಪಟ್ಟಿಯನ್ನು ನೀಡಲು ನ್ಯಾಯಾಲಯ ನಿರಾಕರಿಸಿತು ಮತ್ತು ಅರ್ಜಿದಾರರು ಅರ್ಜಿಯ ಪ್ರತಿಯನ್ನು ನ್ಯಾಯಾಲಯದ ರಿಜಿಸ್ಟ್ರಿಗೆ ಸಲ್ಲಿಸುವಂತೆ ಕೇಳಿತು. ಈ ವಿಷಯವನ್ನು ಸರಿಯಾದ ಸಮಯದಲ್ಲಿ ಪರಿಶೀಲಿಸಲಾಗುವುದು ಎಂದು ಪೀಠ ಹೇಳಿದೆ.

ವಕೀಲರಾದ ಅಜಯ್ ಕುಮಾರ್ ರಾಯ್ ಮತ್ತು ದಿನೇಶ್ ಕುಮಾರ್ ಯಾದವ್ ಸಲ್ಲಿಸಿದ



ಅರ್ಜಿಯಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್, ಉತ್ತರಪ್ರದೇಶ ರಾಜ್ಯ ಮತ್ತು ಭಾರತ ಒಕ್ಕೂಟವನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯ ಪ್ರಕಾರ, ರಾಮ ಮಂದಿರ ನಿರ್ಮಾಣಕ್ಕೆ ಉದ್ದೇಶಿಸಲಾದ ಸಾರ್ವಜನಿಕ ದೇಣಿಗೆಯ ಅಪ್ರಾಮಾಣಿಕ ದುರುಪಯೋಗ, ತಿರುವು ಮತ್ತು ದುರುಪಯೋಗದ ಆರೋಪಗಳು ನಿಯಮಿತ ಪ್ರಕರಣವನ್ನು ದಾಖಲಿಸಲು ಮತ್ತು ಸ್ವತಂತ್ರ, ಕಾಲಮಿತಿಯ ತನಿಖೆಗೆ ಅರ್ಹವಾಗಿವೆ.

ಉತ್ತರ ಪ್ರದೇಶದಿಂದ ರಚಿಸಲಾದ ವಿಶೇಷ ತನಿಖಾ ತಂಡ ಈಗಾಗಲೇ ಆರೋಪಗಳ ತನಿಖೆ ನಡೆಸುತ್ತಿದೆ. ಆದಾಗ್ಯೂ, ಅರ್ಜಿಯ ಪ್ರಕಾರ, ಸಂಕೀರ್ಣ ಆರ್ಥಿಕ ತನಿಖೆಗೆ ಅಗತ್ಯವಾದ ವಿಧಿವಿಜ್ಞಾನ ಮತ್ತು ತನಿಖಾ ಮೂಲಸೌಕರ್ಯಗಳ ಕೊರತೆಯನ್ನು SIT ಹೊಂದಿದೆ ಮತ್ತು ಅದು ಪ್ರಥಮ ಮಾಹಿತಿ ವರದಿ ನೋಂದಾಯಿಸದೆಯೇ ವಿಚಾರಣೆಯನ್ನು ಪ್ರಾರಂಭಿಸಿದೆ, ಇದರಿಂದಾಗಿ ಅದರ ಸಂಶೋಧನೆಗಳ ಸಾಕ್ಷ್ಯ ಮೌಲ್ಯವು ಸವಾಲಿಗೆ ಗುರಿಯಾಗುವ ಸಾಧ್ಯತೆ ಇದೆ.

ತಿರುಮಲ ತಿರುಪತಿ ದೇವಸ್ಥಾನದ ಕಲಬೆರಕೆ ತುಪ್ಪ ಪ್ರಕರಣಕ್ಕೆ ಸಮಾನಾಂತರವಾಗಿ, ಸುಬ್ರಮಣಿಯನ್ ಸ್ವಾಮಿ ವರ್ಸಸ್ ಸ್ಟೇಟ್ ಆಫ್ ಆಂಧ್ರಪ್ರದೇಶ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಅಕ್ಟೋಬರ್ 2024 ರ ಆದೇಶವನ್ನು ಅರ್ಜಿಯು ಉಲ್ಲೇಖಿಸಿದೆ , ಅಲ್ಲಿ ರಾಜ್ಯ ಎಸ್‌ಐಟಿಯನ್ನು ಸಿಬಿಐ ನೇತೃತ್ವದ ಸ್ವತಂತ್ರ ಬಹುಶಿಸ್ತೀಯ ಎಸ್‌ಐಟಿಯಿಂದ ಬದಲಾಯಿಸಲಾಯಿತು.

ಆದ್ದರಿಂದ, ದೇಣಿಗೆ ರಿಜಿಸ್ಟರ್, ಲೆಡ್ಜರ್, ಸಿಸಿಟಿವಿ ದೃಶ್ಯಾವಳಿ, ಬ್ಯಾಂಕ್ ದಾಖಲೆ ಮತ್ತು ಸಾಫ್ಟ್‌ವೇರ್ ಅಂಕಿ-ಅಂಶ ಸೇರಿದಂತೆ ಎಲ್ಲಾ ಭೌತಿಕ, ಎಲೆಕ್ಟ್ರಾನಿಕ್ ಮತ್ತು ಹಣಕಾಸು ದಾಖಲೆಗಳನ್ನು ಸಂರಕ್ಷಿಸಲು ಟ್ರಸ್ಟ್ ಮತ್ತು ರಾಜ್ಯಕ್ಕೆ ಮಧ್ಯಂತರ ನಿರ್ದೇಶನಗಳನ್ನು ನೀಡಬೇಕು ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿಯ ವಿಲೇವಾರಿಗೆ ಬಾಕಿ ಇರುವವರೆಗೆ ಯಾವುದೇ ಪಕ್ಷವು ಅಂತಹ ವಸ್ತುಗಳನ್ನು ಹಾಳು ಮಾಡದಂತೆ ತಡೆಯುವಂತೆಯೂ ಪ್ರಾರ್ಥನೆ ಸಲ್ಲಿಸಲಾಯಿತು. ಬೇಸಿಗೆ ರಜೆಯ ನಂತರ ಈ ವಿಷಯವನ್ನು ವಿಚಾರಣೆಗೆ ಪಟ್ಟಿ ಮಾಡುವ ನಿರೀಕ್ಷೆಯಿದೆ.

# ದೆಹಲಿ ಇ.ವಿ ನೀತಿಗೆ ಸಚಿವ ಸಂಪುಟ ಅನುಮೋದನೆ: 30 ಲಕ್ಷದೊಳಗಿನ ವಿದ್ಯುತ್ ಕಾರ್‌ಗೆ ರಸ್ತೆ ತೆರಿಗೆ, ನೋಂದಣಿ ಶುಲ್ಕ ಸಂಪೂರ್ಣ ಮನ್ನಾ

**ನವದೆಹಲಿ,ಜೂ.29:** ರಾಷ್ಟ್ರ ರಾಜಧಾನಿಯಲ್ಲಿ ವಾಯು ಮಾಲಿನ್ಯ ನಿಯಂತ್ರಿಸಲು ವಿದ್ಯುತ್ ವಾಹನಗಳ (ಇ.ವಿ) ಬಳಕೆಯನ್ನು ಉತ್ತೇಜಿಸುವ ಉದ್ದೇಶದಿಂದ ದೆಹಲಿ ಸರ್ಕಾರ ಹೊಸ ದೆಹಲಿ ಇವಿ ನೀತಿ-2026ಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದೆ. ಈ ನೀತಿಯಡಿ 30 ಲಕ್ಷದವರೆಗಿನ ಶೋರೂಂ ಪೂರ್ವ ಬೆಲೆಯ ಎಲೆಕ್ಟ್ರಿಕ್ ಕಾರುಗಳಿಗೆ 100% ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕ ವಿನಾಯಿತಿ ನೀಡಲಾಗುತ್ತದೆ.

ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಈ ನೀತಿಯನ್ನು ಪ್ರಕಟಿಸಿದ್ದು, ಲೆಫ್ಟಿನೆಂಟ್ ಗವರ್ನರ್ ಅವರ ಅಂತಿಮ ಅನುಮೋದನೆಯ ನಂತರ ಜುಲೈ 1, 2026ರಿಂದ ಜಾರಿಗೆ ಬರಲಿದ್ದು, ಮಾರ್ಚ್ 31, 2030ರವರೆಗೆ ಜಾರಿಯಲ್ಲಿರಲಿದೆ.

30 ಲಕ್ಷದೊಳಗಿನ ಎಲೆಕ್ಟ್ರಿಕ್ ಕಾರುಗಳಿಗೆ 100% ರಸ್ತೆ ತೆರಿಗೆ ಹಾಗೂ ನೋಂದಣಿ ಶುಲ್ಕ ವಿನಾಯಿತಿ. ಎಲೆಕ್ಟ್ರಿಕ್ ದ್ವಿಚಕ್ರ ವಾಹನ ಖರೀದಿದಾರರಿಗೆ ಮೊದಲ ವರ್ಷ 30,000, ಎರಡನೇ ವರ್ಷ 20,000 ಮತ್ತು ಮೂರನೇ ವರ್ಷ 10,000 ಸಹಾಯಧನ. ಹಳೆಯ ಮಾಲಿನ್ಯಕಾರಿ ವಾಹನಗಳನ್ನು ಗುಜರಿಗೆ ಹಾಕಿ ಹೊಸ ಇವಿ ಖರೀದಿಸುವವರಿಗೆ ವಿಶೇಷ ಪ್ರೋತ್ಸಾಹಧನ. ರಾಜ್ಯಾದ್ಯಂತ ಚಾರ್ಜಿಂಗ್




ಸ್ಟೇಷನ್ ಮತ್ತು ಬ್ಯಾಟರಿ ಸ್ವಾಪಿಂಗ್ ಕೇಂದ್ರಗಳ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಲು ಯೋಜಿಸಿದೆ.

ಹೊಸನೀತಿಯ ಪ್ರಕಾರ ಜನವರಿ 1, 2027ರಿಂದ ಹೊಸ ಆಟೋ ರಿಕ್ಷಾಗಳ ನೋಂದಣಿ ಎಲೆಕ್ಟ್ರಿಕ್ ವಾಹನಗಳಿಗೆ ಮಾತ್ರ ಸೀಮಿತವಾಗಲಿದೆ. ಏಪ್ರಿಲ್ 1, 2028ರಿಂದ ಹೊಸ ಪೆಟ್ರೋಲ್ ಮತ್ತು ಸಿಎನ್‌ಜಿ ದ್ವಿಚಕ್ರ ವಾಹನಗಳ ನೋಂದಣಿ ಸ್ಥಗಿತಗೊಳ್ಳಲಿದೆ.

ಇವಿ ಬಳಕೆಯನ್ನು ವೇಗವಾಗಿ ಹೆಚ್ಚಿಸಲು ಮುಂದಿನ ನಾಲ್ಕು ವರ್ಷಗಳಲ್ಲಿ ಸುಮಾರು 15,000 ಕೋಟಿ ಹೂಡಿಕೆ ಮಾಡುವ ಯೋಜನೆಯನ್ನು ಸರ್ಕಾರ ಘೋಷಿಸಿದೆ. ಈ ಹಣವನ್ನು ಖರೀದಿ ಪ್ರೋತ್ಸಾಹಧನ, ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿ ಹಾಗೂ ಹಸಿರು ಸಾರಿಗೆ ವ್ಯವಸ್ಥೆ ವಿಸ್ತರಣೆಗೆ ಬಳಸಲಾಗುತ್ತದೆ.

# ಮೋದಿ ಸರ್ಕಾರದ ವೆಚ್ಚಸೂತ್ರಕ್ಕೆ ಬಿಜೆಪಿಯಲ್ಲೇ ವಿರೋಧ

**ನವದೆಹಲಿ, ಜೂ. 29:** ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ಬದಲಿಯಾಗಿ ಜುಲೈ 1ರಿಂದ ಜಾರಿಗೆ ಬರಲಿರುವ ವಿಕಸಿತ ಭಾರತ?ಉದ್ಯೋಗ ಮತ್ತು ಜೀವನೋಪಾಯ ಖಾತರಿ ಮಿಷನ್ (ಗ್ರಾಮೀಣ) (ವಿಬಿ ಜಿ ರಾಮ್ ಜಿ) ಯೋಜನೆಗೆ ಬಿಜೆಪಿ ಆಡಳಿತವಿರುವ ರಾಜ್ಯ ಸರ್ಕಾರಗಳೂ ಆಕ್ಷೇಪ ವ್ಯಕ್ತಪಡಿಸಿವೆ. ಯೋಜನೆಯಡಿ ಮೋದಿ ಸರ್ಕಾರ ರೂಪಿಸಿರುವ ವೆಚ್ಚ ಹಂಚಿಕೆ ಮಾದರಿಯನ್ನು ಖಂಡಿಸಿವೆ.

ಮನರೇಗಾದಲ್ಲಿ ಕೂಲಿ ವೆಚ್ಚವನ್ನು ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಭರಿಸುತ್ತಿತ್ತು, ರಾಜ್ಯಗಳ ಹೊಣೆ ಸಾಮಗ್ರಿ ವೆಚ್ಚಕ್ಕೆ ಸಮೀತವಾಗಿತ್ತು. ಇದು 90:10 ಅನುಪಾತದ ವೆಚ್ಚ ಹಂಚಿಕೆಯನ್ನು ಹೊಂದಿತ್ತು. ಆದರೆ, ಹೊಸ ಯೋಜನೆಯಡಿ ಕೇಂದ್ರ ಮತ್ತು ರಾಜ್ಯಗಳ ನಡುವೆ 60:40 ಅನುಪಾತದಲ್ಲಿ ವೆಚ್ಚ ಹಂಚಿಕೆಯಾಗಲಿದೆ. ಪರಿಣಾಮ, ಬಹುತೇಕ ರಾಜ್ಯಗಳು ಒಟ್ಟು ವೆಚ್ಚದ 40%ರಷ್ಟು ವೆಚ್ಚವನ್ನು ಭರಿಸಬೇಕಾಗುತ್ತದೆ. ಇದು ರಾಜ್ಯಗಳ ಮೇಲೆ ಭಾರೀ ಆರ್ಥಿಕ ಹೊರೆ ಹೇರುತ್ತದೆ. ಆದ್ದರಿಂದ, ದೇಶದ ಹಲವು ರಾಜ್ಯಗಳು ಆರಂಭದಿಂದಲೇ ಹೊಸ ಯೋಜನೆಯನ್ನು ವಿರೋಧಿಸಿದ್ದರು. ಇದೀಗ, ಬಿಜೆಪಿ ಆಡಳಿತದ ರಾಜ್ಯಗಳೂ ಆಕ್ಷೇಪ ವ್ಯಕ್ತಪಡಿಸಿವೆ.

ಮಾಹಿತಿ ಹಕ್ಕು ಕಾಯ್ದೆಯಡಿ ಲಭಿಸಿದ ದಾಖಲೆಗಳ ಪ್ರಕಾರ, ಬಿಜೆಪಿಯ ನೇರ ಮತ್ತು ಪಾಲುದಾರಿಕೆಯ ಆಡಳಿತವಿರುವ ಬಿಹಾರ, ಮಧ್ಯಪ್ರದೇಶ ಹಾಗೂ ಜಾರ್ಖಂಡ್ ರಾಜ್ಯಗಳು ಈ ಹಣಕಾಸು ಹಂಚಿಕೆ ಮಾದರಿಯನ್ನು ಮರುಪರಿಶೀಲಿಸಬೇಕೆಂದು ಆಗ್ರಹಿಸಿವೆ. ಕೇಂದ್ರಕ್ಕೆ ಮನವಿ ಸಲ್ಲಿಸಿವೆ. ಹೊಸ ಯೋಜನೆಯ ಅನುಷ್ಠಾನಕ್ಕೆ ಬಿಹಾರಕ್ಕೆ 15,939 ಕೋಟಿ ರೂ., ಮಧ್ಯಪ್ರದೇಶಕ್ಕೆ 20,037 ಕೋಟಿ ರೂ., ಹಾಗೂ ಜಾರ್ಖಂಡ್ಗೆ 9,293 ಕೋಟಿ ರೂ. ಖರ್ಚು ಮಾಡಬೇಕಾಗುತ್ತದೆ. ಈ ಪೈಕಿ ರಾಜ್ಯ ಸರ್ಕಾರಗಳೇ 40%ರಷ್ಟು ವೆಚ್ಚ ಭರಿಸಬೇಕಾಗುತ್ತದೆ. ಇದು ತಮ್ಮ ಪಾಲಿಗೆ ಕಷ್ಟಕರ ಎಂದು ಮೂರೂ ರಾಜ್ಯಗಳು ಹೇಳಿಕೊಂಡಿವೆ.ಈ ಮೂರು ರಾಜ್ಯಗಳಲ್ಲದೆ, ಪ್ರತಿಪಕ್ಷಗಳು ಅಧಿಕಾರದಲ್ಲಿರುವ ಕರ್ನಾಟಕವು 13 ರಾಜ್ಯಗಳು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ತಮ್ಮ ಆಕ್ಷೇಪಗಳನ್ನು ಸಲ್ಲಿಸುವೆ. ಕೂಲಿ ದರ ಪರಿಷ್ಕರಣೆ ಮಾಡಬೇಕು, ಕೃಷಿ ಚಟುವಟಿಕೆಗಳು ಗರಿಷ್ಠ ಮಟ್ಟದಲ್ಲಿರುವ ಅವಧಿಯಲ್ಲಿ 60 ದಿನಗಳ ಕಾಲ ಕೆಲಸ ಸ್ಥಗಿತಗೊಳಿಸುವ ನಿಯಮವನ್ನು ರದ್ದುಗೊಳಿಸಿ, ವರ್ಷವಿಡೀ ಕೆಲಸ ಕೊಡಬೇಕು, ಕೂಲಿ ಮತ್ತು ಸಾಮಗ್ರಿ ಪಾವತಿಗಳಲ್ಲಿ ಆಗುತ್ತಿರುವ ವಿಳಂಬದ ನಿವಾರಿಸಿ ಸಕಾಲಕ್ಕೆ ಹಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿವೆ.

# ಅಸ್ಸಾಂನಲ್ಲಿ ಭೀಕರ ಪ್ರವಾಹ: 22 ಸಾವಿರ ಜನರು ಸಂತ್ರಸ್ತ

**ದಿಸ್ಪುರ್,ಜೂ.29:** ನೆರೆಯ ರಾಜ್ಯ ಅರುಣಾಚಲ ಪ್ರದೇಶದಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಅಸ್ಸಾಂನ ಆರು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಎದುರಾಗಿದೆ. ಪರಿಣಾಮ 22,000ಕ್ಕೂ ಅಧಿಕ ಮಂದಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇನ್ನೊಂದೆಡೆ ರೈಲು ಸಂಚಾರಕ್ಕೂ ತೊಂದರೆಯುಂಟಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ವರದಿಯ ಪ್ರಕಾರ, ಧೇಮಾಜಿ, ನಲ್ಬಾರಿ, ದಿಬ್ರುಗಢ್, ಚಿರಂಗ್, ಲಖಿಂಪುರ್ ಮತ್ತು ಕೊಕ್ರಾಜಾರ್ ಜಿಲ್ಲೆಗಳು ಪ್ರವಾಹದಿಂದ ತತ್ತರಿಸಿ ಹೋಗಿದ್ದು, ಸುಮಾರು 22,124 ಜನರು ಪರದಾಡುವಂತಾಗಿದೆ. ಇದರಲ್ಲಿ ಧೇಮಾಜಿ ಜಿಲ್ಲೆ ಹೆಚ್ಚು ಹಾನಿಗೊಳಗಾಗಿದ್ದು, 15,483 ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ.ಪ್ರವಾಹದ ನೀರು ಹಳ್ಳಿಗಳು ಮತ್ತು ಕೃಷಿಭೂಮಿಯನ್ನು ಜಲಾವೃತಗೊಳಿಸಿದೆ. ಅಷ್ಟೇ ಅಲ್ಲದೇ ಪ್ರಮುಖ ರೈಲ್ವೆ ಸೇತುವೆಯೊಂದರ ಪಿಲ್ಲರ್‌ಗೆ ಹಾನಿಯಾಗಿದ್ದು, ಮುಂದಿನ ಸೂಚನೆವರೆಗೂ ಈ ಮಾರ್ಗದಲ್ಲಿ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಭೀಕರ ಪ್ರವಾಹ ಮತ್ತು ನದಿದಂಡೆಯ ಸವೆತದಿಂದಾಗಿ ಅರ್ಚಿಪಥರ್ ಮತ್ತು ಸಿಮೆನ್ ಚಾಪರಿ ನಿಲ್ದಾಣಗಳ ನಡುವಿನ ರೈಲ್ವೆ ಸೇತುವೆಯ ಪಿಲ್ಲರ್‌ವೊಂದು ದುರ್ಬಲಗೊಂಡಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಈ ಮಾರ್ಗದಲ್ಲಿ ರೈಲು ಸಂಚಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಈಶಾನ್ಯ ಗಡಿ ರೈಲ್ವೆ ವಕ್ತಾರರು ತಿಳಿಸಿದ್ದಾರೆ. ಈ ರೈಲ್ವೆ ಸೇತುವೆಯನ್ನು 1965ರಲ್ಲಿ ಕಟ್ಟಲಾಗಿತ್ತು. ಆನಂತರ ಇದನ್ನು ಬ್ರಾಡ್ ಗೇಜ್ ಆಗಿ ಬದಲಾಯಿಸಲಾಗಿತ್ತು. ಆ ತನಕ ಸೇತುವೆ ಉತ್ತಮ ಸ್ಥಿತಿಯಲ್ಲಿತ್ತು. ಆದರೆ ಇದೀಗ ಭಾರಿ ಮಳೆಯಿಂದಾಗಿ ನದಿಯ ದಂಡೆ ಕೊಚ್ಚಿ ಹೋಗಿರುವುದರಿಂದ ಸೇತುವೆಯ ಒಂದು ಪಿಲ್ಲರ್ ದುರ್ಬಲಗೊಂಡು ಅಲುಗಾಡುವಂತಾಗಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಅದೃಷ್ಟವಶಾತ್ ಯಾವುದೇ ರೈಲಿಗೆ ಹಾನಿಯಾಗಿಲ್ಲ ಮತ್ತು ಯಾರಿಗೂ ಗಾಯಗಳಾಗಿಲ್ಲ. ಸದ್ಯಕ್ಕೆ ಮುರ್ಕೋಂಗ್ಸೆಲೆಕ್ ಮತ್ತು ಸಿಲಾಪಥರ್ ನಡುವಿನ ರೈಲು ಸಂಚಾರ ಸ್ಥಗಿತಗೊಳಿಸಿದ್ದು, ರೈಲುಗಳು ಸಿಲಾಪಥರ್ ನಿಲ್ದಾಣದವರೆಗಷ್ಟೇ ಸಂಚರಿಸಲಿವೆ. ಪ್ರಯಾಣಿಕರ ಅನುಕೂಲಕ್ಕಾಗಿ ರೈಲ್ವೆ ಇಲಾಖೆಯು ಬಸ್ಸುಗಳ ವ್ಯವಸ್ಥೆ ಮಾಡಿದ್ದು, ಧೇಮಾಜಿ, ಸಿಲಾಪಥರ್ ಮತ್ತು ಮುರ್ಕೋಂಗ್ಸೆಲೆಕ್ ನಿಲ್ದಾಣಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ತೆರೆದಿದೆ. ಪ್ರವಾಹದ ಅಬ್ಬರಕ್ಕೆ ಒಟ್ಟು 96 ಹಳ್ಳಿಗಳು ಮುಳುಗಡೆಯಾಗಿದ್ದು, ಸುಮಾರು 1,690 ಹೆಕ್ಟೇರ್ ಕೃಷಿ ಭೂಮಿ ನಾಶವಾಗಿದೆ. ರೈತರ ಜೀವನಾಧಾರವಾಗಿದ್ದ 48,199 ಜಾನುವಾರುಗಳು ಕೂಡ ಪ್ರವಾಹದಿಂದ ಸಂಕಷ್ಟಕ್ಕೆ ಈಡಾಗಿವೆ. ಬ್ರಹ್ಮಪುತ್ರ ಮತ್ತು ಅದರ ಉಪನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಶಿವಸಾಗರ್ ಜಿಲ್ಲೆಯ ನಾಂಗ್ಲಾಮುರ 'ಘಾಟ್‌ನಲ್ಲಿ ಡಿಸಾಂಗ್ ನದಿಯ ಅಬ್ಬರ ಜೋರಾಗಿದೆ. ಮಳೆ ಹೀಗೆಯೇ ಮುಂದುವರಿದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಆತಂಕ ಎದುರಾಗಿದೆ.

**ನೆರವು:** ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಪ್ರವಾಹ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತೊಂದರೆಗೊಳಗಾದ ಕುಟುಂಬಗಳಿಗೆ ತಕ್ಷಣದ ನೆರವು ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ಧೇಮಾಜಿ ಸೇರಿದಂತೆ ರಾಜ್ಯದ ಪ್ರವಾಹ ಪರಿಸ್ಥಿತಿಯನ್ನು ನಾನು ಖುದ್ದಾಗಿ ನಿಗಾವಹಿಸುತ್ತಿದ್ದೇನೆ. ಸಂತ್ರಸ್ತರ ಸುರಕ್ಷತೆ ಮತ್ತು ದೀರ್ಘಕಾಲೀನ ಪುನರ್ವಸತಿಗಾಗಿ ಸರ್ಕಾರ ತನ್ನೆಲ್ಲಾ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತಿದೆ ಎಂದು ಭರವಸೆ ನೀಡಿದ್ದಾರೆ.

# ಶಿವಾ ಸರ್ವಸಂಪನ್ನ ಸದ್ಗುಣವಂತ ಹೃದಯಶೀಲರು: ಮಧುರ್ ಭಂಡಾರ್ಕರ್

**ಮುಂಬಯಿ, ಜು.29:** ಶಿವಾ ನನ್ನ ಸಹೋದರನೂ ಹೌದು, ಪರಮಮಿತ್ರರೂ ಸರಿ. ಕಳೆದ ಮೂರು ದಶಕಗಳ ಮಿತ್ರತ್ವ ನಮ್ಮ ಸಂಬಂಧವನ್ನು ಪುಷ್ಟೀಕರಿಸಿದೆ. ನಮ್ಮಿಬ್ಬರ ಜೀವನಶೈಲಿ ಸಮಾನತೆಯಿಂದ ಕೂಡಿದ್ದು ನಮ್ಮ ಬಾಂಧವ್ಯತ್ವಕ್ಕೆ ಇದೇ ಕಾರಣೀಭೂತವಾಗಿದೆ. ಸರ್ವ ಸಂಪನ್ನ ಸದ್ಗುಣವಂತ ಹೃದಯಶೀಲರಾಗಿದ್ದು, ಕಠಿಣ ಪರಿಶ್ರಮಿ ಆಗಿರುವ ಸರಳ ಸಜ್ಜನಿಕಾ ವ್ಯಕ್ತಿತ್ವದ ಶ್ರೇಷ್ಠರು. ತೀರಾ ತಳಮಟ್ಟದಿಂದ ಬೆಳೆದುಬಂದಿರುವ ಶಿವಾ ಓರ್ವ ಅನುದಿನದ ಪರಿಶ್ರಮಿಯಾಗಿ ವೃತ್ತಿನಿಷ್ಠೆಯುಳ್ಳವರಾಗಿದ್ದಾರೆ. ಅವುಗಳೆಲ್ಲವುದರ ಫಲಿತಾಂಶವೇ ಈ ಸಂಭ್ರಮವಾಗಿದೆ ಎಂದು ಬಾಲಿವುಡ್ ಚಿತ್ರರಂಗದ ಪ್ರಸಿದ್ಧ ಚಲನಚಿತ್ರ ನಿರ್ಮಾಪಕ ಹಾಗೂ ನಿರ್ದೇಶಕ ಪದ್ಮಶ್ರೀ ಮಧುರ್ ಭಂಡಾರ್ಕರ್ ತಿಳಿಸಿದರು.

ಬೃಹನ್ಮುಯಿಯಲ್ಲಿ ಹೇರ್ ಸ್ಟೈಲೋ ಮೂಲಕ ಸೆಲೆಬ್ರಟಿ ವ್ಯಕ್ತಿಯಾಗಿ ಪ್ರತಿಷ್ಠೆಗೆ ಪಾತರರಾದ ತುಳು-ಕನ್ನಡಿಗ ಡಾ। ಶಿವರಾಮ ಕೆ.ಭಂಡಾರಿ ಆಡಳಿತ್ವದ ಪ್ರಸಿದ್ಧ ಕೇಶ ವಿನ್ಯಾಸ ಸಂಸ್ಥೆ ಶಿವಾ'ಸ್ ಹೇರ್ ಡಿಝೈನರ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಇಂದಿಲ್ಲಿ ಸೋಮವಾರ ಸಂಜೆ ಅಂಧೇರಿ ಪೂರ್ವದ ಪೆನಿನ್ಸೂಲಾ ಗ್ರಾಂಡ್ ಹೊಟೇಲ್ ಸಭಾಗೃಹದಲ್ಲಿ ಆಚರಿಸಿದ 38ನೇ ಸಂಭ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದು ಶಿವಾ'ಸ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾರಿತೋಷಕಗಳನ್ನು ಪ್ರದಾನಿಸಿ, ನೂತನ್ ವೆಬ್‌ಸೈಟ್ ಅನಾವರಣಗೊಳಿಸಿ, ಸಫೈರ್ ಸದಸ್ಯತ್ವ ಕಾರ್ಡ್ ಬಿಡುಗಡೆಗೊಳಿಸಿ




ಭಂಡಾರ್ಕರ್ ನುಡಿದರು.

ಕಾರ್ಯಕ್ರಮದದಲ್ಲಿ ಗೌರವ ಅತಿಥಿಯಾಗಿ ಮಿಸ್ ಇಂಡಿಯಾ ಇಂಟರ್‌ನ್ಯಾಶನಲ್ ಪುರಸ್ಕೃತೆ ಆಯೀಷಾ ಎಸ್.ಐಮಾನ್, ಗೌರವ್ವಾನಿತ ಆಹ್ವಾನಿತರಾಗಿ ಮನಿಫೋಲ್ಡ್ ಕ್ರೆಡಿಟ್ ಸೊಸೈಟಿ ಲಿಮಿಟೆಡ್‌ನ ಕಾರ್ಯಾಧ್ಯಕ್ಷ, ಮಹಾ ಮಂಡಲ ಸ್ಥಾಪಕಾಧ್ಯಕ್ಷ ಕಡಂದಲೆ ಸುರೇಶ್ ಎಸ್.ಭಂಡಾರಿ, ಮಾಜಿ ಸಂಸದ ರಾಹುಲ್ ಶೆವಾಲೆ, ಉದ್ಯಮಿಗಳಾದ ಜಿತೇಂದ್ರ ಕೋಂಗೆ, ಅಶೋಕ್ ಧಮಣ್ಕರ್, ಅರವಿಂದ್ ಜೈನ್, ನರೇಂದ್ರ ಗುಪ್ತಾ, ರಾಜೀವ್ ಚೌಧುರಿ, ಅಶೋಕ್ ಮುನ್ನಿ, ಅನಘ ತೊಂಡಳ್ಕಾರ್, ಡಾ। ಗಿರಿರಾಜ್ ಪರಶರ್, ಗೋಪಾಲ್ ಶೆಟ್ಟಿ, ಭರತ್ ಶ್ಹಾ ಮತ್ತಿತರರು ಉಪಸ್ಥಿತರಿದ್ದು ಶುಭ ಕೋರಿದರು.

ಶಿವಾ'ಸ್ ಆಡಳಿತ ನಿರ್ದೇಶಕ ಡಾ। ಶಿವರಾಮ ಕೆ.ಭಂಡಾರಿ ಪ್ರಸ್ತಾವನೆಗೈದು ಶಿವಾ'ಸ್ ಸಂಸ್ಥೆಯ 38ನೇ ಸಂಭ್ರಮ ನಮ್ಮ ಕುಲವೃತ್ತಿಯ ಶ್ರೇಷ್ಠತೆಯ ಪರಂಪರೆ ಎಂದೆಣಿಸಿದ್ದೇನೆ. ಅವಿರತ ಶ್ರಮದ ನಮ್ಮ ಸೇವಾ ಪ್ರಯಾಣದ ಸಂಭ್ರಮ ಸಂಸ್ಥೆಯ ಮುನ್ನಡೆಗೆ ಪೂರಕವಾಗಿದೆ. ಸೇವಾವೃಂದದ ಗುರುತಿಸುವಿಕೆ ಮತ್ತು ನೀಡಲ್ಪಡುವ ಪ್ರತಿಫಲ ನಮ್ಮ ಭವಿಷ್ಯಕ್ಕೆ ಸ್ಫೂರ್ತಿಯಾಗಿದೆ. ಈ ಸ್ಮರಣೀಯ ಸಂಜೆ ಕೇವಲ ಸಂಭ್ರಮಾಚರಣೆ ಅಷ್ಟೇ ಅಲ್ಲದೆ, ಸಂಸ್ಥೆಯ ಈ ಅಭೂತಪೂರ್ವ ಯಶಸ್ಸು ಎಲ್ಲರಿಗೂ ಸಲ್ಲುವ ಅಭ್ಯುದಯವಾಗಿದೆ. "ನಮ್ಮ ಹಳೇ ನೆನಪುಗಳಿಗೆ ಗೌರವ, ಪ್ರಸ್ತುತ ಸಾಧನೆಗೆ ಪುರಸ್ಕಾರ ಹಾಗೂ ಭವಿಷ್ಯತ್ತಿಗೆ ಭರವಸೆಯ ಮುನ್ನುಡಿ" ಎಂಬ ಆಶಯದೊಂದಿಗೆ ಈ ಭವ್ಯ ಸಮಾರಂಭವನ್ನು ಆಯೋಜಿಸಲಾಗಿದೆ. ಕಳೆದ 38 ಗಮನಾರ್ಹ ವರ್ಷಗಳಿಂದ ಸಂಸ್ಥೆಯು ತನ್ನದೇ ಆದ ಸಮರ್ಪಣಾ ಮನೋಭಾವ, ನಾವೀನ್ಯತೆ ಹಾಗೂ ಅಪ್ರತಿಮ ಯಶಸ್ಸಿನ ಇತಿಹಾಸವನ್ನು ನಿರ್ಮಿಸಿದೆ. ಈ ಸುದೀರ್ಘ ಯಾತರೆಯಲ್ಲಿ ಸಂಸ್ಥೆಯ ಬೆಳವಣಿಗೆಗೆ ಶ್ರಮಿಸಿದ ಹಾಗೂ ಯಶಸ್ಸಿಗೆ ಕಾರಣರಾದ ಸಂಸ್ಥೆಯ ನಕ್ಷತ್ರಗಳಂತಿರುವ ಸಾಧಕರನ್ನು ಗುರುತಿಸಿ, ಗೌರವಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದರು.

ಕುಲದೇವರಾದ ಶ್ರೀ ಕಚ್ಚೂರು ನಾಗೇಶ್ವರ ದೇವರಿಗೆ ಸ್ತುತಿಸಿ ಶಿವಾ'ಸ್ ಪ್ರೇರಕರಾದ ಸ್ವರ್ಗೀಯ ಗುಲಾಬಿ ಕೆ.ಭಂಡಾರಿ ಅವರನ್ನು ಸ್ಮರಿಸಿ ಸಾಂಕೇತಿಕವಾಗಿ ಕಾರ್ಯಕ್ರಮಕ್ಕೆ ಚಾಲನೆಯನ್ನೀಡಲಾಯಿತು. ತನ್ನ ಸೇವಾ ಮುನ್ನಡೆಗೆ ಸ್ಪಂದಿಸಿ ಸಹಕರಿಸಿದ ಎಲ್ಲಾ ಗ್ರಾಹಕರು, ಹಿತೈಷಿಗಳನ್ನು ಡಾ। ಶಿವರಾಮ ಕೆ.ಭಂಡಾರಿ ದಂಪತಿ ಗೌರವಿಸಿ ಅಭಿವಂದಿಸಿದರು.

ಶಿವಾ'ಸ್ ಪರಿವಾರದ ಅನುಶ್ರೀ ಶಿವರಾಮ್ ಭಂಡಾರಿ (ಪತ್ನಿ), ಮಾ। ರೋಹಿಲ್ ಭಂಡಾರಿ (ಪುತ್ರ), ಕು। ಆರಾಧ್ಯ ಭಂಡಾರಿ (ಪುತ್ರಿ), ರಾಘವ ವಿ.ಭಂಡಾರಿ, ಶ್ವೇತಾ ಆರ್.ಭಂಡಾರಿ, ರವಿ ಭಂಡಾರಿ, ಮೆಲಿಸ್ಸಾ ಡಿಕೋಸ್ತಾ, ರಾಕೇಶ್ ಭಂಡಾರಿ, ಸೋಮಶೇಖರ್ ಎಸ್.ಭಂಡಾರಿ, ನಿರಂಜನ ಭಂಡಾರಿ ಮತ್ತಿತರರು ಉಪಸ್ಥಿತರಿದ್ದು ಶಿವಾ'ಸ್ ವಿವಿಧ ಶಾಖೆಗಳ ಕರ್ಮಚಾರಿಗಳು ಮನಾಕರ್ಷಕ ನೃತ್ಯಗಳನ್ನು ಪ್ರಸ್ತುತ ಪಡಿಸಿದರು. ಸಂಸ್ಥೆಯ ಸಿಇಓ ಡಾ। ವಿನೋದ್ ಚೋಪ್ರಾ ಸ್ವಾಗತಿಸಿ, ಪ್ರಸ್ತಾವನೆಗೈದರು. ಆಫಿ ಕಾರ್ಯಕ್ರಮ ನಿರ್ವಾಹಿಸಿ ಧನ್ಯವದಿಸಿದರು.

# ಖಮೇನಿ ಅಂತ್ಯಕ್ರಿಯೆ: ಭಾರತ ಭಾಗಿ

**ಟ್ರೆಹಾನ್:** ಇರಾನ್‌ನ ಸುಪ್ರೀಂ ಲೀಡರ್ ಖಮೇನಿಯ ಅಂತ್ಯಕ್ರಿಯೆಯಲ್ಲಿ ಭಾರತದ ಪರವಾಗಿ ಬಿಹಾರ ರಾಜ್ಯಪಾಲ ನಿವೃತ್ತ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಕೇಂದ್ರ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಭಾಗಿಯಾಗಲಿದ್ದಾರೆ ಎಂದು ಇರಾನ್ ಮೂಲಗಳು ತಿಳಿಸಿವೆ.

ವರದಿಗಳ ಪ್ರಕಾರ, ಈ ಇಬ್ಬರು ಗಣ್ಯರು ಮುಂದಿನ ತಿಂಗಳು ನಡೆಯಲಿರುವ ಇರಾನ್ನ ಸುಪ್ರೀಂ ಲೀಡರ್ ಅಯತೊಲ್ಲಾ ಅಲಿ ಖಮೇನಿಯ ಸರ್ಕಾರಿ ಅಂತ್ಯಕ್ರಿಯೆಯಲ್ಲಿ ಭಾರತದ ಅಧಿಕೃತ ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ. ಇನ್ನೂ ಪೂರ್ವ ನಿಗದಿಯಾಗಿರುವ ವಿದೇಶಿ ಪ್ರವಾಸಗಳ ಹಿನ್ನೆಲೆ ಪ್ರಧಾನಿ ಮೋದಿ ಅವರು ಖಮೇನಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಲು ಸಾಧ್ಯವಿಲ್ಲ ಎಂದು ತಿಳಿದುಬಂದಿದೆ.

ಇತ್ತೀಚಿಗೆ ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಖಮೇನಿಯ ಸರ್ಕಾರಿ ಅಂತ್ಯಕ್ರಿಯೆಯಲ್ಲಿ ಭಾಗಿಯಾಗುವಂತೆ ಭಾರತದ ಪ್ರಧಾನಿ ನರೇಂದ್ರ ಮೋದಿಯವರನ್ನು ಆಹ್ವಾನಿಸಿದ್ದರು.

ಫೆಬ್ರವರಿ 28ರಂದು ಟೆಹ್ರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಖಮೇನಿ ಸಾವನ್ನಪ್ಪಿದ್ದರು. ಅದಾದ ಬಳಿಕ ಸಂಘರ್ಷದಿಂದಾಗಿ ಮಾರ್ಚ್ ತಿಂಗಳಲ್ಲಿ ನಡೆಯಬೇಕಿದ್ದ ಅಂತ್ಯಕ್ರಿಯೆಯನ್ನು ಮುಂದೂಡಲಾಗಿತ್ತು. ಇದೀಗ ಜುಲೈ 4ರಿಂದ ಅಂತ್ಯಕ್ರಿಯೆಯ ವಿಧಿ-ವಿಧಾನಗಳು ನಡೆಯಲಿದ್ದು, ಇರಾನ್ ಸೇರಿದಂತೆ ವಿವಿಧ ನಗರಗಳಲ್ಲಿ ಬೃಹತ್ ಮೆರವಣಿಗೆ ನಡೆಯಲಿದೆ. ಈ ವೇಳೆ 1 ಕೋಟಿಗೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ.

ವರದಿಗಳ ಪ್ರಕಾರ, ಅಯತೊಲ್ಲಾ ಖಮೇನಿಯ



ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕಾಗಿ ತೆಹ್ರಾನ್ನ ಗ್ರಾಂಡ್ ಮೊಸಲ್ಲಾ ಸಂಕೀರ್ಣದಲ್ಲಿ ಇರಿಸಲಾಗುವುದು.

ಅಲ್ಲದೇ ತೆಹ್ರಾನ್ ಮತ್ತು ಕೋಮ್ ನಗರಗಳಲ್ಲಿ ಬೃಹತ್ ಮೆರವಣಿಗೆ ನಡೆಯಲಿದ್ದು, ಇದರೊಂದಿಗೆ ಇರಾಕ್ ನಗರಗಳಾದ ನಜಾಫ್ ಮತ್ತು ಕರ್ಬಲಾದಲ್ಲೂ ವಿಶೇಷ ಪ್ರಾರ್ಥನೆ ನಡೆಯಲಿದೆ.

ಜುಲೈ 9ರಂದು ಖಮೇನಿಯ ತವರು ಮಶ್ಹದ್ನಲ್ಲಿರುವ ಪ್ರಸಿದ್ಧ ಇಮಾಮ್ ರೆಜಾ ಮಸೀದಿಯಲ್ಲಿ ಅಂತಿಮ ಪ್ರಕ್ರಿಯೆ ನೆರವೇರಲಿದೆ. ಸುಮಾರು ನಾಲ್ಕು ದಶಕಗಳ ಕಾಲ ಇರಾನ್ನ ರಾಜಕೀಯ ವ್ಯವಸ್ಥೆಯನ್ನು ಮುನ್ನಡೆಸಿದ್ದ ನಾಯಕನಿಗೆ ಅಂತಿಮ ವಿದಾಯ ಹೇಳಲು ಕೋಟ್ಯಂತರ ಜನರು ಆಗಮಿಸುವ ನಿರೀಕ್ಷೆಯಿದೆ. ಇದು 1989ರಲ್ಲಿ ಇರಾನ್ನ ಸಂಸ್ಥಾಪಕ ಅಯತೋಲ್ಲಾ ರುಹೊಲ್ಲಾ ಖೊಮೆನಿ ಅವರ ಅಂತ್ಯಕ್ರಿಯೆಯಲ್ಲಿ ಭಾಗಿಯಾದ 1 ಕೋಟಿ ಜನರ ದಾಖಲೆಯನ್ನು ಮುರಿಯುವ ಸಾಧ್ಯತೆಯಿದೆ. ಮುಂಜಾಗ್ರತಾ ಕ್ರಮವಾಗಿ ಇರಾನ್ ಸರ್ಕಾರ ವ್ಯಾಪಕ ಭದ್ರತಾ ವ್ಯವಸ್ಥೆ ಕೈಗೊಂಡಿದೆ.

# ಅಹಮದಾಬಾದ್-ಮಂಗಳೂರು ಜಂಕ್ಷನ್-ಅಹಮದಾಬಾದ್ ರೈಲುಯಾನ ಅವಧಿ ವಿಸ್ತಾರ

**ಮುಂಬಯಿ, ಜು.29:** ಮಂಗಳೂರು (ಕರ್ನಾಟಕ) ಮತ್ತು ಅಹಮದಾಬಾದ್ (ಗುಜರಾತ್) ರೈಲು ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಪಶ್ಚಿಮ ರೈಲ್ವೇ ಇಲಾಖೆಯು ತನ್ನ ಒಡೆತನದ ರೈಲು ಸಂಖ್ಯೆ 09424 ಮತ್ತು 09423 ಯಾನಗಳನ್ನು ಅಹಮದಾಬಾದ್-ಮಂಗಳೂರು ಜಂಕ್ಷನ್-ಅಹಮದಾಬಾದ್ (ಎಡಿಐ-ಎಂಎಜೆಎನ್-ಎಡಿಐ) ವೀಕ್ಲಿ ಟ್ರೈನ್ ಆನ್ ಡಿಮ್ಯಾಂಡ್ ವಿಶೇಷ ರೈಲು ಸಂಚಾರ ಅವಧಿಯನ್ನು ವಿಸ್ತರಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ.

ಚಾಲ್ತಿಯಲ್ಲಿರುವ ಸಂಯೋಜನೆ ಮತ್ತು ವೇಳಾಪಟ್ಟಿಯಂತೆಯೇ ಈ ರೈಲುಗಳು ಸಂಚರಿಸಲಿವೆ. ಈ ಹಿಂದೆ ಓಡುತ್ತಿದ್ದ ರೈಲು ಸಂಖ್ಯೆ 09424 ಇದರ ಕೊನೆಯ ಸಂಚಾರ ಕಳೆದ ಮೇ.29ಕ್ಕೆ ನಿಗದಿಯಾಗಿತ್ತು. ಆದರೆ ಇದನ್ನು ಮತ್ತೆ ವಿಸ್ತರಿಸಲಾಗಿ ನವೀಕರಿಸಲಾದ ರೈಲು ಪ್ರಯಾಣದ ವಿವರಗಳನ್ನು ಇಲಾಖೆ ಪ್ರಕಟಿಸಿದೆ. ರೈಲು ಸಂಖ್ಯೆ 09424 (ಅಹಮದಾಬಾದ್ - ಮಂಗಳೂರು ಜಂಕ್ಷನ್) ಪ್ರತಿ ಶುಕ್ರವಾರದಂತೆ ಜುಲೈ.03 ರಿಂದ ಜುಲೈ.31ರ ವರೆಗೆ ಒಟ್ಟು 5 ಟ್ರಿಪ್‌ಗಳ ಅವಧಿಗೆ ವಿಸ್ತರಿಸಲಾಗಿದೆ. ಅಂತೆಯೇ ರೈಲು ಸಂಖ್ಯೆ 09423 (ಮಂಗಳೂರು ಜಂಕ್ಷನ್ - ಅಹಮದಾಬಾದ್) ಪ್ರತಿ ಶನಿವಾರದಂತೆ ಜುಲೈ.04 ರಿಂದ ಆಗಸ್ಟ್ 01ರ ವರೆಗೆ ಒಟ್ಟು 5 ಟ್ರಿಪ್‌ಗಳ ಅವಧಿಗೆ ವಿಸ್ತರಿಸಿದೆ.

ಕೊಂಕಣ ರೈಲ್ವೆ ಮತ್ತು ದಕ್ಷಿಣ ರೈಲ್ವೆ ವಲಯದಲ್ಲಿ ಪರಿಷ್ಕೃತ ವೇಳಾಪಟ್ಟಿ ನೀಡಿದ್ದು, ಅಹಮದಾಬಾದ್‌ನಿಂದ ರೋಹಾ ನಡುವೆ ರೈಲಿನ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ ರೋಹಾದಿಂದ ಮಂಗಳೂರು ಜಂಕ್ಷನ್ ನಡುವಿನ ಉಭಯ ದಿಕ್ಕುಗಳ ನಿಲ್ದಾಣಗಳಲ್ಲಿ ರೈಲಿನ ಸಮಯವನ್ನು ಪರಿಷ್ಕರಿಸಲಾಗಿದೆ ಎಂದು ತಿಳಿಸಿದೆ.

ರೈಲು ಸಂಖ್ಯೆ 09424 (ಅಹಮದಾಬಾದ್-ಮಂಗಳೂರು ಜಂಕ್ಷನ್) ಪ್ರತೀ ಶುಕ್ರವಾರ 04.00 ಗಂಟೆಗೆ ಅಹಮದಾಬಾದ್‌ನಿಂದ ಹೊರಟು ನಡಿಯಾದ್ (04:55), ಆನಂದ್ (05:12), ಬರೋಡ (05:45), ಬರೂಚ್ (06:47), ಸೂರತ್ (07:35), ವಾಪಿ (09:10) ಮಾರ್ಗವಾಗಿ ವಸಾಯಿ (11:10) ಮಹಾರಾಷ್ಟ್ರಕ್ಕೆ ಪ್ರವೇಶಿಸಲಿದೆ. ನಂತರ ಭಿವಂಡಿ (11:42), ಶನಿವಾರ ಮುಂಜಾನೆ ಪನ್ವೇಲ್ (12:55), ಪೆಣ್ (01:40), ರೋಹ (02:20), ಮಾನ್ಗಾಂವ್ (02:46), ಖೇಡ್ (04:10), ಚಿಪ್ಲೂಣ್ (04:50), ಸಾವರ್ಡಾ (05:18), ಸಂಗಮೇಶ್ವರ ರೋಡ್ (05:48), ರತ್ನಗಿರಿ (07:00), ರಾಜಾಪುರ ರೋಡ್ (08:20), ವೈಭವ್‌ವಾಡಿ ರೋಡ್ (08:38) , ಕಂಕಾವಲಿ (09:18), ಸಿಂಧುದುರ್ಗ




(09:40), ಕುಡಾಲ್ (09:54), ಸಾವಂತವಾಡಿ ರೋಡ್ (10:16) ಮೂಲಕ ಥಿವಿಮ್ (11:18) ಗೋವಾಕ್ಕೆ ಪ್ರವೇಶಿಸಲಿದೆ. ನಂತರ ಕರ್ಮಾಲಿ (11:48), ಮಡ್ಗಾಂವ್ ಜಂಕ್ಷನ್ -ಗೋವಾ (01:00), ಕಾಣಕೋಣ (01:50) ಮೂಲಕ ಕಾರವಾರ (02:28) ಕರ್ನಾಟಕಕ್ಕೆ ಪ್ರವೇಶಿಸಲಿದ್ದು, ಮುಂದೆ ಅಂಕೋಲಾ (02:54), ಗೋಕರ್ಣ ರೋಡ್ (03:06), ಕುಮಟಾ (03:40), ಮುರುಡೇಶ್ವರ (04:40), ಭಟ್ಕಳ (05:10), ಮೂಕಾಂಬಿಕಾ ರೋಡ್ ಬೈಂದೂರು(05:24), ಕುಂದಾಪುರ (06:00), ಉಡುಪಿ (06:38), ಮುಲ್ಕಿ (07:30), ಸುರತ್ಕಲ್ (07:46), ತೋಕೂರು (08:20) ಮಾರ್ಗವಾಗಿ ಶನಿವಾರ ರಾತ್ರಿ 09:00 ಗಂಟೆಗೆ ಮಂಗಳೂರು ಜಂಕ್ಷನ್ ತಲುಪುವುದು.

ರೈಲು ಸಂಖ್ಯೆ 09423 (ಮಂಗಳೂರು ಜಂಕ್ಷನ್-ಅಹಮದಾಬಾದ್) ಪ್ರತೀ ಶನಿವಾರ ರಾತ್ರಿ 10.30 ಗಂಟೆಗೆ ಮಂಗಳೂರು ಜಂಕ್ಷನ್‌ನಿಂದ ಹೊರಟು ತೋಕೂರು (11:15), ಸುರತ್ಕಲ್ (11:22), ಮುಲ್ಕಿ (11:32), ಉಡುಪಿ (12:10), ಕುಂದಾಪುರ (12:32), ಮೂಕಾಂಬಿಕಾ ರೋಡ್ ಬೈಂದೂರು (01:00), ಭಟ್ಕಳ (01:12), ಮುರುಡೇಶ್ವರ (01:34), ಕುಮಟಾ (02:18), ಗೋಕರ್ಣ ರೋಡ್ (02:44), ಅಂಕೋಲಾ (02:56), ಕಾರವಾರ (03:30), ಕಾಣಕೋಣ (04:10), ಮಡ್ಗಾಂವ್ ಜಂಕ್ಷನ್ - ಗೋವಾ (05:10), ಕರ್ಮಾಲಿ (05:50), ಥಿವಿಮ್ (06:12), ಸಾವಂತವಾಡಿ ರೋಡ್ (06:40), ಕುಡಾಲ್ (07:10), ಸಿಂಧುದುರ್ಗ (07:22), ಕಂಕಾವಲಿ (07:44), ವೈಭವ್‌ವಾಡಿ ರೋಡ್ (08:20), ರಾಜಾಪುರ ರೋಡ್ (08:40), ರತ್ನಗಿರಿ (10:30), ಸಂಗಮೇಶ್ವರ ರೋಡ್ (11:180), ಸಾವರ್ಡಾ (11:40), ಚಿಪ್ಲೂಣ್ (12:18), ಖೇಡ್ (12:50), ಮಾನ್ಗಾಂವ್ (02:48), ರೋಹ (03:40), ಪೆಣ್ (04:10), ಪನ್ವೇಲ್ (04:50), ಭಿವಂಡಿ (06:00), ವಸಾಯಿ (06:35), ವಾಪಿ (08:18), ಸೂರತ್ (09:55), ಬರೂಚ್ (10:46), ಬರೋಡ (11:45), ಆನಂದ್ (12:32), ನಡಿಯಾದ್ (12:49) ಮಾರ್ಗವಾಗಿ ಮಾರನೇ ದಿನ ಅಂದರೆ ಶನಿವಾರ ಮುಂಜಾನೆ 02:15 ಗಂಟೆಗೆ ಅಹಮದಾಬಾದ್‌ಗೆ ತಲುಪಲಿದೆ.

ರೈಲ್ವೇ ಯಾತ್ರಿ ಸೇವಾ ಸಂಘ (ರಿ.) ಬೊರಿವಲಿ-ಮುಂಬಯಿ ಸಂಸ್ಥೆಯ ಗೌರವಾಧ್ಯಕ್ಷ ಡಾ। ಶಂಕರ್ ಬಿ.ಶೆಟ್ಟಿ ವಿರಾರ್, ತುಳುಸಂಘ ಬರೋಡಾ ಇದರ ಅಧ್ಯಕ್ಷ ಶಶಿಧರ್ ಬಿ.ಶೆಟ್ಟಿ ಗುರುವಾಯನಕೆರೆ, ಗುಜರಾತ್ ಬಿಲ್ಲವ ಸಂಘದ ಸ್ಥಾಪಕ ಅಧ್ಯಕ್ಷ ದಯಾನಂದ ಬೋಂಟ್ರ, ಸ್ಥಾಪಕ ರೂವಾರಿ ಮೋಹನ್ ಸಿ. ಪೂಜಾರಿ ಅಹ್ಮದಾಬಾದ್,

ಅಧ್ಯಕ್ಷ ಹರೀಶ್ ವಿ.ಪೂಜಾರಿ ಮಡ್ಯಾರ್, ತುಳು ಐಸಿರಿ ವಾಪಿ ಗೌರವಾಧ್ಯಕ್ಷ ಬಾಲಕೃಷ್ಣ ಶೆಟ್ಟಿ, ಅಧ್ಯಕ್ಷ ನವೀನ್ ಶೆಟ್ಟಿ, ಕರ್ನಾಟಕ ಸಮಾಜ ಸೂರತ್ ಮಾಜಿ ಅಧ್ಯಕ್ಷ ಮನೋಜ್ ಸಿ.ಪೂಜಾರಿ, ಉದ್ಯಮಿ ವೆಂಕಟೇಶ್ ಎಸ್.ಪೂಜಾರಿ ಇರುವೈಲು (ಸಿಲ್ವಾಸ) ಸೇರಿದಂತೆ ಅನೇಕ ಗಣ್ಯರು ಈ ಸೇವೆಯನ್ನು ಸ್ವಾಗತಿಸಿದ್ದಾರೆ.

ಪಶ್ಚಿಮ ರೈಲ್ವೇ ಇಲಾಖೆಯು ಗುಜರಾತ್, ಮಹಾರಾಷ್ಟ್ರ, ಗೋವಾ ಕರ್ನಾಟಕದ ಪ್ರಯಾಣಿಕರಿಗೆ ಸಿಹಿಸುದ್ದಿ ನೀಡಿದ್ದು ಅಹಮದಾಬಾದ್ - ಮಂಗಳೂರು ಜಂಕ್ಷನ್ ರೈಲುಯಾನ ಮತ್ತೆ ವಿಸ್ತಾರಿಸಿದೆ. ಈ ಸೇವೆಯು ನಾಲ್ಕು ರಾಜ್ಯಗಳ ಪ್ರಯಾಣಿಕರಿಗೆ (ವಿಶೇಷವಾಗಿ ತುಳು-ಕನ್ನಡಿಗರಿಗೆ) ವರವಾಗಲಿದೆ. ತುಳು-ಕನ್ನಡಿಗರಿಗರು ಬರೇ ಒಂದೆರಡು ರೈಲುಗಳನ್ನೇ ಅವಲಂಬಿಸದೆ ಇಂತಹ ಸೇವೆಗಳ ಪ್ರಯೋಜವನ್ನು ಪಡೆಯಬೇಕು. ಆವಾಗಲೇ ರೈಲ್ವೇ ಇಲಾಖೆಯ ಪ್ರಯತ್ನಗಳು ಸಫಲಗೊಂಡು ಇಂತಹ ರೈಲುಯಾನಗಳನ್ನು ಕಾಯಂಗೊಳಿಸಲು ಸಾಧ್ಯವಾಗುವುದು ಎಂದು ತಿಳಿಸಿದ್ದಾರೆ.

## ಎಸ್‌ಐಆರ್: ದುರುಪಯೋಗಕ್ಕೆ ಆಸ್ಪದ ನೀಡದಂತೆ ಪಕ್ಷದ ಕಾರ್ಯಕರ್ತರು, ಬಿಎಲ್‌ಓಗಳಿಗೆ ಡಾ.ಪರಮೇಶ್ವರ್ ಸೂಚನೆ



**ಬೆಂಗಳೂರು, ಜೂ.29:** ಮಂಗಳವಾರದಿಂದ ರಾಜ್ಯಾದ್ಯಂತ ಬಹುನಿರೀಕ್ಷಿತ ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ನಡೆಯಲಿದ್ದು, ಈ ಬೆನ್ನಲ್ಲೇ ಆಡಳಿತ ಪಕ್ಷದ ನಾಯಕರು ತೀವ್ರ ಎಚ್ಚರಿಕೆ ವಹಿಸಿದ್ದಾರೆ.

ಈ ಕುರಿತು ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಡಿಸಿಎಂ ಜಿ.ಪರಮೇಶ್ವರ್, ಮತದಾರರ ಪಟ್ಟಿಯಲ್ಲಿ ಯಾವುದೇ ರೀತಿಯ ತಿರುಚುವಿಕೆ ಅಥವಾ ಅಕ್ರಮಗಳಿಗೆ ಆಸ್ಪದ ನೀಡದಂತೆ ಪಕ್ಷದ ಕಾರ್ಯಕರ್ತರು ಹಾಗೂ ಬಿಎಲ್‌ಓಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯ ಸಾಧಕ–ಬಾಧಕಗಳ ಬಗ್ಗೆ ಈಗಾಗಲೇ ಪಕ್ಷದ ಮಟ್ಟದಲ್ಲಿ ಸಾಕಷ್ಟು ಸುದೀರ್ಘ ಚರ್ಚೆಗಳನ್ನು ನಡೆಸಲಾಗಿದೆ ಎಂದಿದ್ದಾರೆ.

ಪಶ್ಚಿಮ ಬಂಗಾಳದ ಉದಾಹರಣೆಯನ್ನು ಪ್ರಸ್ತಾಪಿಸಿದ ಪರಮೇಶ್ವರ್, ಪಶ್ಚಿಮ ಬಂಗಾಳದಲ್ಲಿ ಚುನಾವಣೆಗೂ ಮುನ್ನ ನಡೆದ ಮತದಾರರ ಪಟ್ಟಿ ಪರಿಷ್ಕರಣೆಯ ಸಂದರ್ಭದಲ್ಲಿ ಭಾರಿ ಅನುಮಾನಗಳು ಮೂಡಿದ್ದವು. ಅಲ್ಲಿ ಪ್ರತಿ ಮತಕ್ಷೇತ್ರದಲ್ಲೂ ಅಂದಾಜು 5ರಿಂದ 10 ಸಾವಿರದಷ್ಟು ಮತದಾರರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಡಿಲೀಟ್ ಮಾಡಲಾಗಿದೆ ಎಂಬ ಗಂಭೀರ ಮಾತುಕತೆಗಳು ಕೇಳಿಬಂದಿದ್ದವು. ಕರ್ನಾಟಕದಲ್ಲಿ ಯಾವುದೇ ಕಾರಣಕ್ಕೂ ಆ ರೀತಿಯ ಅಕ್ರಮಗಳು ನಡೆಯಲು ಬಿಡಬಾರದು. ಇದಕ್ಕಾಗಿಯೇ ನಮ್ಮ ಪಕ್ಷದ ವತಿಯಿಂದ ವಿಶೇಷ ಕಾರ್ಯಾಗಾರ ನಡೆಸಿ, ಪ್ರತಿಯೊಂದು ತಾಲೂಕು ಮತ್ತು ಜಿಲ್ಲಾ ಕೇಂದ್ರದ ಮುಖಂಡರಿಗೆ ಜಾಗರೂಕರಾಗಿರಲು ಸೂಚಿಸಿದ್ದೇವೆ ಎಂದು ಹೇಳಿದರು.

ನಾಳೆಯಿಂದಲೇ ಮತದಾರರ ವಿವರಣೆ ಪಡೆಯುವ ಪ್ರಕ್ರಿಯೆ ಅಧಿಕೃತವಾಗಿ ಪ್ರಾರಂಭವಾಗುತ್ತಿದ್ದು, ನಾಗರಿಕರಿಗೆ ಎರಡು ಪ್ರಮುಖ ಅರ್ಜಿಗಳನ್ನು ನೀಡಲಾಗುತ್ತದೆ. ಅದರಲ್ಲಿ ಭರ್ತಿ ಮಾಡಿದ ಒಂದು ಫಾರ್ಮ್ ಅನ್ನು ವಾಪಸ್ ನೀಡ ಬೇಕಾಗುತ್ತದೆ ಮತ್ತು ಮತ್ತೊಂದನ್ನು ಸಾರ್ವಜನಿಕರೇ ತಮ್ಮ ಬಳಿ ಇಟ್ಟುಕೊಳ್ಳಬಹುದು. ಆದರೆ, ಈ ಫಾರ್ಮ್ ತುಂಬುವಾಗ ಸಾರ್ವಜನಿಕರು ಹಾಗೂ ಕಾರ್ಯಕರ್ತರು ಅತ್ಯಂತ ಜಾಗರೂಕರಾಗಿರಬೇಕು, ಯಾವುದೇ ತಪ್ಪು ಮಾಹಿತಿಗೆ ಅವಕಾಶ ನೀಡಬಾರದು ಎಂದು ಅವರು ಪರಮೇಶ್ವರ್ ಕಿವಿಮಾತು ಹೇಳಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಏನಾದರೂ ಮ್ಯಾನಿಪ್ಯುಲೇಷನ್ ನಡೆಯುತ್ತಿದೆ ಅಥವಾ ಸರ್ಕಾರದ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ ಎಂಬ ಗುಮಾನಿ ಬಂದರೆ, ಅದರ ವಿರುದ್ಧ ಯಾವ ರೀತಿ ಕಾನೂನಾತ್ಮಕ ಹೋರಾಟ ಮಾಡಬೇಕು ಮತ್ತು ಇದನ್ನು ಚುನಾವಣಾ ಆಯೋಗದ ಗಮನಕ್ಕೆ ಹೇಗೆ ತರಬೇಕು ಎಂಬುದನ್ನು ನಮ್ಮ ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ನಾಯಕರು ಸಮಾಲೋಚನೆ ನಡೆಸಿ ತೀರ್ಮಾನಿಸಲಿದ್ದಾರೆ ಎಂದು ಪ್ರತಿಪಕ್ಷಗಳಿಗೆ ಎಚ್ಚರಿಕೆ ನೀಡಿದರು.

## ಬೆಂಗಳೂರಿನಿಂದ 100 ಕಿ.ಮೀ. ದೂರದ ನಗರಗಳಿಗೆ ಚತುಷ್ಪಥ ರೈಲುಮಾರ್ಗ: ಕೇಂದ್ರ ಸಚಿವ ಸೋಮಣ್ಣ

**ಬೆಂಗಳೂರು, ಜೂ.29:** ಬೆಂಗಳೂರಿನಿಂದ 100 ಕಿ.ಮೀ. ಸುತ್ತಮುತ್ತ ಇರುವ ನಗರಗಳಿಗೆ ಚತುಷ್ಪಥ ರೈಲ್ವೆ ಮಾರ್ಗಗಳನ್ನು ಅಭಿವೃದ್ಧಿಪಡಿಸಲಾಗುವುದು. ಜತೆಗೆ ರಾಜಧಾನಿಯಿಂದ ಕರಾವಳಿ ಭಾಗದ ಮಂಗಳೂರಿಗೆ ಕೂಡ ಇದೇ ರೀತಿ ಚತುಷ್ಪಥ ಮಾರ್ಗ ಅಭಿವೃದ್ಧಿಯನ್ನೂ ಪರಿಗಣಿಸಲಾಗುವುದು ಎಂದು ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.



ಚನ್ನಪಟ್ಟಣ ತಾಲ್ಲೂಕಿನ ಎಲೆಕೇರಿ ಬಳಿ ನೂತನವಾಗಿ ನಿರ್ಮಿಸಿರುವ ರಸ್ತೆ ಮೇಲ್ಸೇತುವೆ ಉದ್ಘಾಟಿಸಿ ಸೋಮವಾರ ಮಾತನಾಡಿದರು. ಇದಕ್ಕೂ ಮೊದಲು ರಾಜ್ಯದ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ ಬಿ ಪಾಟೀಲ ಅವರು ಕರ್ನಾಟಕದ ರೈಲ್ವೇ ಬೇಡಿಕೆಗಳನ್ನು ಸಮಾರಂಭದಲ್ಲಿ ಪ್ರಸ್ತಾಪಿಸಿದ್ದರು. ಇದರಲ್ಲಿ ಅವರು ಬೆಂಗಳೂರಿನಿಂದ ತುಮಕೂರು, ಮೈಸೂರು, ಗೌರಿಬಿದನೂರು ಮಾರ್ಗವಾಗಿ ಹಿಂದೂಪುರ ಮತ್ತು ಕೋಲಾರಕ್ಕೆ ಚತುಷ್ಪಥ ಹಳಿ ನಿರ್ಮಿಸಬೇಕು ಎಂದು ಕೋರಿದ್ದರು.

ಈ ಬೇಡಿಕೆಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಸೋಮಣ್ಣ, ಬೆಂಗಳೂರು–ತುಮಕೂರು ಚತುಷ್ಪಥ ಮಾರ್ಗದ ಸರ್ವೆ ಮುಗಿದಿದ್ದು, ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆಗಳನ್ನು ಆರಂಭಿಸಲಾಗುವುದು. ಮುಂದಿನ ಒಂದೂವರೆ–ಎರಡು ವರ್ಷದಲ್ಲಿ ಕಾಮಗಾರಿ ಮುಗಿಸುವ ಉದ್ದೇಶ ಇದೆ. ಹಾಗೆಯೇ ಬೆಂಗಳೂರು–ಮೈಸೂರು ಚತುಷ್ಪಥ ನಿರ್ಮಾಣಕ್ಕೆ ಸಮೀಕ್ಷೆ ಮಾಡಲು ತೀರ್ಮಾನಿಸಲಾಗಿದೆ. ಎಂ.ಬಿ. ಪಾಟೀಲರು ಪ್ರಸ್ತಾಪಿಸಿರುವ ಬೇಡಿಕೆಗಳು ಸರಿಯಾಗಿವೆ. ಅವರ ಕೋರಿಕೆಯಂತೆ ಬೆಂಗಳೂರು–ಕೋಲಾರ ನಡುವೆ ನೇರ ರೈಲು ಸಂಪರ್ಕ ಕಲ್ಪಿಸಲಾಗುವುದು. ಸದ್ಯಕ್ಕೆ ವೈಟ್‌ಫೀಲ್ಡ್ ತನಕ ಇರುವ ನಾಲ್ಕು ಪಥದ ಮಾರ್ಗವನ್ನು ಮುಂದಕ್ಕೂ ಕೊಂಡೊಯ್ಯಲಾಗುವುದು. ಇದಕ್ಕೆ ಬೇಕಾದ ಭೂಸ್ವಾಧೀನವನ್ನು ಕೇಂದ್ರ ಸರ್ಕಾರವೇ ನಡೆಸುತ್ತದೆ ಎಂದು ಅವರು ಭರವಸೆ ನೀಡಿದ್ದಾರೆ.

ಸಂಸದ ಡಾ.ಸಿ.ಎನ್.ಮಂಜುನಾಥ, ಶಾಸಕ ಸಿ ಪಿ ಯೋಗೀಶ್ವರ್, ಬೆಂಗಳೂರು ದಕ್ಷಿಣ ಜಿಲ್ಲಾಧಿಕಾರಿ ಯಶವಂತ ಗುರಿಕಾರ್, ನೈರುತ್ಯ ರೈಲ್ವೆ ಮುಖ್ಯ ಆಡಳಿತಾಧಿಕಾರಿ ಎ.ಕೆ.ಗುಪ್ತ, ಹೆಚ್ಚುವರಿ ವಿಭಾಗೀಯ ವ್ಯವಸ್ಥಾಪಕ ಪ್ರವೀಣ್ ಕಾತರಕಿ, ಮೂಲಸೌಕರ್ಯ ಇಲಾಖೆ ಜಂಟಿ ಕಾರ್ಯದರ್ಶಿ ಚಂದ್ರಶೇಖರ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### 3-4 ತಿಂಗಳಲ್ಲಿ ವಿಜಯಪುರಕ್ಕೆ ವಂದೇಭಾರತ್ ಸ್ಲೀಪರ್ ರೈಲು

**ಕಿತ್ತೂರು ಕರ್ನಾಟಕ ಭಾಗದ ವಿಜಯಪುರಕ್ಕೆ ವಂದೇ ಭಾರತ್ ಸ್ಲೀಪರ್ ರೈಲು ಸೇವೆ ಆರಂಭಿಸಬೇಕು ಎನ್ನುವ ಸಚಿವ ಎಂ.ಬಿ.ಪಾಟೀಲ್ ಅವರ ಬೇಡಿಕೆಗೆ ಸ್ಪಂದಿಸಿದ ಸೋಮಣ್ಣ ಅವರು ಇನ್ನು 3–4 ತಿಂಗಳಲ್ಲಿ ಅದು ನನಸಾಗಲಿದೆ ಎಂದು ಘೋಷಿಸಿದರು. ವಂದೇ ಭಾರತ್ ರೈಲಿಗೆ ಬದಲಾಗಿ ಸ್ಲೀಪರ್ ರೈಲು ಓಡಿಸಲಾಗುವುದು. ಈ ಕುರಿತು ಸದ್ಯದಲ್ಲೇ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಅವರು ಹೇಳಿದರು. ಅಲ್ಲದೆ, ಬೆಂಗಳೂರು– ವಿಜಯಪುರ ನಡುವೆ ವಾರಕ್ಕೆ ಎರಡು ಸಲ ಸಂಚರಿಸುತ್ತಿರುವ ವಿಶೇಷ ರೈಲನ್ನು ಕಾಯಂ ಮಾಡಲಾಗುವುದು. ಜತೆಗೆ ಇಲ್ಲಿರುವ ಸಣ್ಣಪುಟ್ಟ ತೊಂದರೆಗಳನ್ನು ನಿವಾರಿಸಲಾಗುವುದು. ಅಲ್ಲದೆ ಐಟಿ ರಾಜಧಾನಿ ಬೆಂಗಳೂರು ಮತ್ತು ಆರ್ಥಿಕ ರಾಜಧಾನಿ ಮುಂಬಯಿಯನ್ನು ಬೆಸೆಯಲು ಬೆಂಗಳೂರು–ಪುಣೆ ಮಧ್ಯೆ ಹೈಸ್ಪೀಡ್ ರೈಲು ಆರಂಭಿಸಬೇಕು ಎನ್ನುವ ಬೇಡಿಕೆ ಸೂಕ್ತವಾಗಿದೆ. ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುವುದು ಎಂದು ಸೋಮಣ್ಣ ತಿಳಿಸಿದರು.**

## 4500 ವಿದ್ಯುತ್ ಬಸ್‌ಗಳ ಬಳಕೆಗೆ ರಾಜ್ಯ ಸರ್ಕಾರ ಆಸಕ್ತಿ ತೋರುತ್ತಿಲ್ಲ: ಸಂಸದ ತೇಜಸ್ವಿಸೂರ್ಯ ಆಕ್ರೋಶ

**ಬೆಂಗಳೂರು ಜೂ.29:** ಬೆಂಗಳೂರಿಗೆ ಕೇಂದ್ರ ಸರ್ಕಾರ ನೀಡುವ 4,500 ವಿದ್ಯುತ್ ಬಸ್‌ಗಳ ಬಳಕೆಗೆ ರಾಜ್ಯ ಸರ್ಕಾರ ಆಸಕ್ತಿ ತೋರುತ್ತಿಲ್ಲ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಬನಶಂಕರಿ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಬೆಂಗಳೂರಿನ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಕೇಂದ್ರ ಸರ್ಕಾರವು ಬಿಎಂಟಿಸಿಗೆ ಬರೋಬ್ಬರಿ 4,500 ಎಲೆಕ್ಟ್ರಿಕ್ ಬಸ್‌ಗಳನ್ನು ಮಂಜೂರು ಮಾಡಿದೆ. ಆದರೆ,ರಾಜ್ಯ ಸರ್ಕಾರವು ಈ ಬಸ್‌ಗಳ ನಿಯೋಜನೆಗೆ ಅಗತ್ಯವಿರುವ ಕ್ಯಾಬಿನೆಟ್ ಅನುಮೋದನೆಯನ್ನು ನೀಡದೆ ಉದಾಸೀನತೆ ತೋರುತ್ತಿದೆ ಎಂದು ಕಿಡಿಕಾರಿದರು.

ಇನ್ನು ರಾಜ್ಯ ಸರ್ಕಾರ ಈ ಬಸ್‌ಗಳನ್ನು ಪಡೆದುಕೊಳ್ಳಲು ತನ್ನ ಪಾಲಿನ ಅತ್ಯಲ್ಪ ಮೊತ್ತದ ಹಣವನ್ನು ಹೂಡಿಕೆ ಮಾಡಬೇಕಿದೆ. ಆದರೆ,ಸಾರ್ವಜನಿಕ ಹಿತಾಸಕ್ತಿಯ ಈ ಯೋಜನೆಗೆ ಒಪ್ಪಿಗೆ ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ ಎಂದು ಟೀಕಿಸಿದರು.

### ಪ್ರಯಾಣಿಕರ ದೂರು-ದುಮ್ಮಾನ ಆಲಿಸಿದ ಸಂಸದ

**ಬನಶಂಕರಿ ಬಿಎಂಟಿಸಿ ಬಸ್ ನಿಲ್ದಾಣಕ್ಕೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಭೇಟಿ ನೀಡಿದ್ದ ಪ್ರಯಾಣಿಕರು ತಮ್ಮ ದೂರು ದುಮ್ಮಾನ ತೋಡಿಕೊಂಡರು. ಸರಿಯಾದ ಸಮಯಕ್ಕೆ ಬಸ್‌ಗಳು ಬರುತ್ತಿಲ್ಲ, ಹೆಚ್ಚುವರಿ ಬಸ್ ಗಳನ್ನು ಕೂಡ ಬಿಎಂಟಿಸಿ ಬಿಡುತ್ತಿಲ್ಲ.ಹೀಗಾಗಿ ತಮ್ಮ ದಿನ ನಿತ್ಯದ ಕೆಲಸಗಳಿಗೆ ತೆರಳಲು ತೊಂದರೆಯಾಗುತ್ತಿದೆ ಎಂದು ಪ್ರಯಾಣಿಕರು ತಮ್ಮ ಅಳಲು ತೋಡಿಕೊಂಡರು. ಬಿಎಂಟಿಸಿ ಬಸ್ ಗಳು ನಿಗದಿತ ಸಮಯಕ್ಕೆ ಬರಬೇಕು, ಬಸ್ ನಿಲ್ದಾಣದ ಬಳಿ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡಿದರೇ ಸಾಕಷ್ಟು ಅನುಕೂಲವಾಗಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದೇ ವೇಳೆ ಪ್ರಯಾಣಿಕರ ಅಳಲು ಆಲಿಸಿದ ಸಂಸದ ತೇಜಸ್ವಿ ಸೂರ್ಯ ಎಲ್ಲಾ ವಿಷಯಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.**



ಇದಲ್ಲದೆ, ಬಸ್ಸುಗಳ ವಿಳಂಬ ಕುರಿತು ನಾನು ಈಗಾಗಲೇ ಸಂಸತ್ತಿನಲ್ಲಿ ಧ್ವನಿ ಎತ್ತಿದ್ದು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಹ ಇದಕ್ಕೆ ಪೂರಕವಾಗಿ ಉತ್ತರಿಸಿದ್ದಾರೆ.ಈ ಸರ್ಕಾರದ ಬಳಿ 1,300 ಕಿಲೋಮೀಟರ್ ಹಾಗೂ ಕೇವಲ ಐಷಾರಾಮಿ ಕಾರುಗಳ ಸಂಚಾರಕ್ಕಾಗಿ 2 ಕಿಲೋಮೀಟರ್ ಉದ್ದದ ಟನಲ್ ರಸ್ತೆಗಳಂತಹ ವಿಐಪಿ ಯೋಜನೆಗಳಿಗೆ ಸಾವಿರಾರು ಕೋಟಿ ರೂ.ಖರ್ಚು ಮಾಡಲು ಹಣವಿದೆ.ಆದರೆ,ದಿನನಿತ್ಯ ಬಿಎಂಟಿಸಿ ಬಸ್ ಹಾಗೂ ನಮ್ಮ ಮೆಟ್ರೋದಲ್ಲಿ ಪ್ರಯಾಣಿಸುವ ಸಾಮಾನ್ಯ ಜನರಿಗಾಗಿ ಖರ್ಚು ಮಾಡಲು ಹಣವಿಲ್ಲವೇ ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರದ ದೃಷ್ಟಿಯಲ್ಲಿ ಸಾಮಾನ್ಯ ನಾಗರಿಕರು ಎರಡನೇ ದರ್ಜೆಯ ಪ್ರಜೆಗಳಾಗಿದ್ದಾರೆ. ಇವರಿಗೆ ಪ್ರತಿ ದಿನ ಬಸ್‌ನಲ್ಲಿ ಓಡಾಡುವ ಮಹಿಳೆಯರಾಗಲಿ, ಪಾದಚಾರಿಗಳಾಗಲಿ ಆದ್ಯತೆಯಾಗಿ ಉಳಿದಿಲ್ಲ.ಕಮೀಷನ್ ದುಡ್ಡು ಹೊಡೆಯಬಹುದಾದ ಬಿಳಿ ಆನೆಯಂತಹ ದೊಡ್ಡ ಯೋಜನೆಗಳ ಬೆನ್ನತ್ತಿರುವ ವಿಐಪಿ ಸರ್ಕಾರ ಇದಾಗಿದೆ ಎಂದು ಆರೋಪಿಸಿದರು.

ಇದೇ ವೇಳೆ, ಬೆಂಗಳೂರಿನ ಸ್ಥಳೀಯ ಮೂಲಸೌಕರ್ಯಗಳ ಕುರಿತು ಮಾತನಾಡಿದ ತೇಜಸ್ವಿ ಸೂರ್ಯ, ಬನಶಂಕರಿ ಬಿಎಂಟಿಸಿ ಬಸ್ ನಿಲ್ದಾಣದ ಬಳಿ ಸಾರ್ವಜನಿಕರು ಮತ್ತು ಪಾದಚಾರಿಗಳ ಅನುಕೂಲಕ್ಕಾಗಿ ಪಾದಚಾರಿ ಮೇಲ್ಸೇತುವೆ ನಿರ್ಮಾಣ ಮಾಡಲು ಅಂದು ಉಪಮುಖ್ಯಮಂತ್ರಿಯಾಗಿದ್ದ ಡಿ.ಕೆ.ಶಿವಕುಮಾರ್ ಅವರೇ ಸ್ವತಃ ಗುದ್ದಲಿ ಪೂಜೆ ನೆರವೇರಿಸಿದ್ದರು. ಆದರೆ,ಈಗ ಆ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಲಾಗಿದೆ. ಯಾರೋ ಒಬ್ಬ ಗುತ್ತಿಗೆದಾರನ ಮಾತು ಕೇಳಿ, ಲಾಭದ ಉದ್ದೇಶದಿಂದ ಇಲ್ಲೊಂದು ಫ್ಲೈಓವರ್ ಮಾಡಲು ಸರ್ಕಾರ ಹೊರಟಿದೆ ಎಂದು ಕಿಡಿಕಾರಿದರು.

#### ಮಾಜಿ ಸಿಎಂ ಸದಾನಂದಗೌಡರದ್ದು ವಕ್ರಬುದ್ಧಿ: ಶಾಸಕ ಎಸ್.ಆರ್. ವಿಶ್ವನಾಥ್ ವಾಗ್ದಾಳಿ

## ಬಿಜೆಪಿ ನಾಯಕರಾಗಿದ್ದು ಕಾಂಗ್ರೆಸ್ ಕಾರ್ಯಕ್ರಮಕ್ಕೆ ಹೇಗೇ ಹೋಗುತ್ತೀರಿ?

**ಬೆಂಗಳೂರು, ಜೂ.29:** ರಾಜ್ಯ ಬಿಜೆಪಿಯಲ್ಲಿ ಆಂತರಿಕ ಭಿನ್ನಮತ ಮತ್ತೊಮ್ಮೆ ಸ್ಫೋಟಗೊಂಡಿದ್ದು, ಮಾಜಿ ಮುಖ್ಯಮಂತ್ರಿ ಡಿ. ವಿ. ಸದಾನಂದ ಗೌಡ ಹಾಗೂ ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ನಡುವಿನ ವಾಕ್ಸಮರ ತಾರಕಕ್ಕೇರಿದೆ.

ಕ್ರಾಸ್ ವೋಟಿಂಗ್ (ಅಡ್ಡ ಮತದಾನ) ಹಾಗೂ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ, ಶಾಸಕ ಎಸ್.ಆರ್. ವಿಶ್ವನಾಥ್ ಅವರು ಸದಾನಂದ ಗೌಡರ ವಿರುದ್ಧ ಕಿಡಿಕಾರಿದ್ದು, "ಅವರದ್ದು ವಕ್ರಬುದ್ಧಿ" ಎಂದು ವಾಗ್ದಾಳಿ ನಡೆಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸದಾನಂದ ಗೌಡರ ನಡೆ ಹಾಗೂ ಹೇಳಿಕೆಗಳ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಹಿರಿಯ ಬಿಜೆಪಿ ನಾಯಕರಾಗಿದ್ದುಕೊಂಡು ಕಾಂಗ್ರೆಸ್‌ನವರು ಆಯೋಜಿಸಿದ್ದ ಸಭೆ ಅಥವಾ ಕಾರ್ಯಕ್ರಮಕ್ಕೆ ಹೇಗೆ ಹೋಗುತ್ತೀರಿ, ನಾವು ಹೋಗಬೇಡಿ ಎಂದು ಮನವಿ ಮಾಡಿದರೂ ಕೇಳಲಿಲ್ಲ. ಕೇಂದ್ರ ಸಚಿವರಾಗಿ, ಮುಖ್ಯಮಂತ್ರಿಗಳಾಗಿದ್ದಾಗ ಅವರಿಗಾಗಿ ಗಂಟೆಗಟ್ಟಲೆ ಬಾಗಿಲು ಕಾಯ್ದು ನಿಲ್ಲುತ್ತಿದ್ದೆವು. ಆದರೆ, ಇಂದು ಅವರ ವರ್ತನೆ ಪಕ್ಷಕ್ಕೆ ಶೋಭೆ ತರುವಂಥದ್ದಲ್ಲ ಎಂದು ಆಕ್ರೋಶ ಹೊರಹಾಕಿದ್ದಾರೆ.

ಇವತ್ತು ಅವರಿಗೆ ದಿಢೀರನೆ ಜಾತಿ ಅಭಿಮಾನ ಬಂದುಬಿಟ್ಟಿದೆ. ಸದಾನಂದ ಗೌಡರು ಮಂಗಳೂರು ಕಡೆಯವರಾಗಿದ್ದು, ಸಾಮಾನ್ಯವಾಗಿ ಹಳೇ ಮೈಸೂರು ಭಾಗದವರನ್ನು ಮಾತ್ರ ಒಕ್ಕಲಿಗರು ಎನ್ನಲಾಗುತ್ತದೆ, ಅವರೇನೂ ದೊಡ್ಡ ಗೌಡರಲ್ಲ ಎಂದು ಲೇವಡಿ ಮಾಡಿದ್ದಾರೆ.



ಕೆಂಪೇಗೌಡ ಜಯಂತಿಗೆ ಸಂಬಂಧಿಸಿದಂತೆ ತಾವು ಆಹ್ವಾನ ನೀಡಿದ ತಕ್ಷಣ ಮುಖ್ಯಮಂತ್ರಿಗಳು ಬಂದು ಸನ್ಮಾನ ಸ್ವೀಕರಿಸಿದರು. ಆದರೆ, ಸದಾನಂದ ಗೌಡರು ಮಾತ್ರ ಬೇರೆಯದೇ ರೀತಿ ವರ್ತಿಸುತ್ತಿದ್ದಾರೆ ಎಂದು ದೂರಿದ್ದಾರೆ. ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಕೆಲವು ಶಾಸಕರು ಕ್ರಾಸ್ ವೋಟಿಂಗ್ ಮಾಡಿದ್ದರ ಕುರಿತು ನನಗೆ ಮೊದಲೇ ಮಾಹಿತಿ ಇತ್ತು ಮತ್ತು ಈ ಬಗ್ಗೆ ರಾಜ್ಯ ನಾಯಕತ್ವಕ್ಕೆ ಎಚ್ಚರಿಕೆ ನೀಡಿದ್ದೆ ಎಂದು ಸದಾನಂದ ಗೌಡರು ಬಹಿರಂಗ ಹೇಳಿಕೆ ನೀಡಿದ್ದರು. ಈ ಹೇಳಿಕೆಯು ಪಕ್ಷದ ಆಂತರಿಕ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

## ಎಸ್.ಎಂ. ಕೃಷ್ಣ ರಸ್ತೆಯಲ್ಲಿ ದಸರಾ ಮಾದರಿಯ ದೀಪಾಲಂಕಾರ ಬೆಂಗಳೂರಿನ ನಗರ ಸೌಂದರ್ಯಕ್ಕೆ ಹೊಸ ಮೆರುಗು

### ಹಗಲಿನಲ್ಲಿ ಅಭಿವೃದ್ಧಿಯ ಹೆಜ್ಜೆ, ರಾತ್ರಿ ಬೆಳಕಿನ ಹಬ್ಬ



**ಬೆಂಗಳೂರು, ಜೂ.29:** ಕೆಂಪೇಗೌಡರ 517ನೇ ಜಯಂತಿಯಂದು ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಲೋಕಾರ್ಪಣೆಗೊಂಡಿರುವ 10.7 ಕಿಲೋಮೀಟರ್ ಉದ್ದದ "ಎಸ್.ಎಂ. ಕೃಷ್ಣ ರಸ್ತೆ" ಕೇವಲ ಸಂಚಾರಕ್ಕೆ ಮಾತ್ರವಲ್ಲ, ರಾತ್ರಿ ವೇಳೆಯಲ್ಲಿ ತನ್ನ ಆಕರ್ಷಕ ದೀಪಾಲಂಕಾರದಿಂದಲೂ ಗಮನ ಸೆಳೆಯುತ್ತಿದೆ.

ಬೆಂಗಳೂರು ನಗರದ ಅಭಿವೃದ್ಧಿಯ ಹೊಸ ಹೆಗ್ಗುರುತಾಗಿರುವ "ಎಸ್.ಎಂ. ಕೃಷ್ಣ ರಸ್ತೆ" ಇದೀಗ ದಸರಾ ಮಾದರಿಯ ಭವ್ಯ ದೀಪಾಲಂಕಾರದಿಂದ ನಗರದ ಜನತೆಯನ್ನು ಆಕರ್ಷಿಸುತ್ತಿದೆ. ವಿಶ್ವವಿಖ್ಯಾತ ಮೈಸೂರು ದಸರಾ ಸಂದರ್ಭದಲ್ಲಿ ಅರಮನೆ ಹಾಗೂ ಪ್ರಮುಖ ರಸ್ತೆಗಳಲ್ಲಿ ಕಾಣಸಿಗುವ ಬೆಳಕಿನ ವೈಭವವನ್ನು ನೆನಪಿಸುವ ರೀತಿಯಲ್ಲಿ ಈ ರಸ್ತೆಯನ್ನು ಅಲಂಕರಿಸಲಾಗಿದೆ.

ಈ ರಸ್ತೆ ರಾತ್ರಿ ವೇಳೆ ದಸರಾ ಮಾದರಿಯ ದೀಪಾಲಂಕಾರದಂತೆ ಕಂಗೊಳಿಸುತ್ತಿದೆ. ವರ್ಣರಂಜಿತ ಅಲಂಕಾರಿಕ ದೀಪಗಳು, ವಿನ್ಯಾಸಬದ್ಧ ಬೆಳಕಿನ ಕಮಾನುಗಳು ಹಾಗೂ ಆಧುನಿಕ ಎಲ್‌ಇಡಿ ಲೈಟಿಂಗ್ ರಸ್ತೆಯ ಎರಡೂ ಬದಿಗಳನ್ನು ಬೆಳಗುವ ಮೂಲಕ ಬೆಂಗಳೂರು ನಗರದ ಸಾಂಸ್ಕೃತಿಕ ವೈಭವ ಮತ್ತು ಆಧುನಿಕ ನಗರಾಭಿವೃದ್ಧಿಯ ಸಮನ್ವಯವನ್ನು ಪ್ರತಿಬಿಂಬಿಸುತ್ತಿದೆ.

ಮಾಗಡಿ ರಸ್ತೆಯ ಕಡಬಗೆರೆ ಕ್ರಾಸ್ ನಿಂದ ಮೈಸೂರು ರಸ್ತೆ ಚಲ್ಲಘಟ್ಟ ಮೆಟ್ರೋ ನಿಲ್ದಾಣದವರೆಗಿನ 100.0ಮೀ ಅಗಲದ (330 ಅಡಿ), 10 ಲೇನ್‌ಗಳ ರಸ್ತೆ ಕಾಮಗಾರಿ ಹೊಣೆಯನ್ನು ಸ್ಟಾರ್ ಇನ್ಫೋಟೆಕ್ ಕಂಪನಿ ವಹಿಸಿಕೊಂಡಿತ್ತು. ದಕ್ಷಿಣ ಮತ್ತು ಪಶ್ಚಿಮ ಬೆಂಗಳೂರನ್ನು ಬೆಸೆಯುವ ಈ ರಸ್ತೆ 3 ಪ್ರಮುಖ ಅಂಡರ್ಪಾಸ್ಗಳು, 11 ಸೇತುವೆಗಳು, 270 ಮೀಟರ್ ಉದ್ದದ ಸುರಂಗ ಮಾರ್ಗ, ಆಧುನಿಕ ಸರ್ವಿಸ್ ರಸ್ತೆ, ಸೈಕಲ್ ಟ್ರಾಕ್ ವ್ಯವಸ್ಥೆ ಒಳಗೊಂಡಿದೆ. ರಸ್ತೆಯು ಬೆಂಗಳೂರು–ಮೈಸೂರು ಜೋಡಿ ಮಾರ್ಗದ ರೈಲ್ವೆ ಹಳಿಗಳಿಗೆ ಅಡ್ಡಲಾಗಿ ಹಾದುಹೋಗಿದ್ದು, ರೈಲು ಸಂಚಾರಕ್ಕೆ ಅಡ್ಡಿಯಾಗದಂತೆ ಕೇವಲ ಮೂರು ತಿಂಗಳಲ್ಲಿ ಕೆಳಸೇತುವೆಯನ್ನು ನಿರ್ಮಿಸಿದ ಸ್ಟಾರ್ ಇನ್ಫೋಟೆಕ್ ಕಂಪನಿಯ ಕಾರ್ಯವೈಖರಿಯನ್ನು ಕಂಡು ರೈಲ್ವೆ ಇಲಾಖೆಯೇ ಅಚ್ಚರಿ ವ್ಯಕ್ತಪಡಿಸಿತು.

ಈ ರಸ್ತೆ ಕಂಬೀಪುರ, ಕೊಮ್ಮಘಟ್ಟ ಹಾಗೂ ಕೆಂಚನಪುರ, ಸೂಲಿಕೆರೆ ಸೇರಿದಂತೆ 11 ಗ್ರಾಮಗಳ ಸಾರ್ವಜನಿಕರು ಸೇರಿದಂತೆ ಮೈಸೂರು, ಮಾಗಡಿ, ಹಾಸನ, ಕುಣಿಗಲ್, ಮಂಡ್ಯ ಹಾಗೂ ರಾಮನಗರ ಭಾಗಗಳಿಂದ ಬೆಂಗಳೂರಿಗೆ ಆಗಮಿಸುತ್ತಿರುವ ಸಾವಿರಾರು ಪ್ರಯಾಣಿಕರು ಬೆಳಕಿನ ವೈಭವಕ್ಕೆ ಮಾರುಹೋಗುತ್ತಿದ್ದಾರೆ.

ವಿಶಾಲ ರಸ್ತೆ, ಸುಸಜ್ಜಿತ ಪಾದಚಾರಿ ಮಾರ್ಗ, ಹಸಿರು ಪರಿಸರ ಮತ್ತು ದಸರಾ ಶೈಲಿಯ ಬೆಳಕಿನ ಅಲಂಕಾರ,

ಉತ್ತಮ ಮೂಲಸೌಕರ್ಯದಿಂದ ಎಸ್.ಎಂ.ಕೃಷ್ಣ ರಸ್ತೆ ಅಭಿವೃದ್ಧಿ ಮತ್ತು ಆಧುನಿಕ ನಗರ ಯೋಜನೆಯ ಪ್ರತೀಕವಾಗಿದೆ.

ನಗರದ ಅಭಿವೃದ್ಧಿ ಎಂದರೆ ಕೇವಲ ರಸ್ತೆ ನಿರ್ಮಾಣವಲ್ಲ; ನಾಗರಿಕರಿಗೆ ಸುರಕ್ಷಿತ, ಸುಂದರ ಮತ್ತು ಹೆಮ್ಮೆಯ ಸಾರ್ವಜನಿಕ ಸ್ಥಳಗಳನ್ನು ನಿರ್ಮಿಸುವುದು ಎಂಬುದಕ್ಕೆ ಎಸ್.ಎಂ.ಕೃಷ್ಣ ರಸ್ತೆ ಉದಾಹರಣೆಯಾಗಿದೆ. "ಹಗಲಿನಲ್ಲಿ ಅಭಿವೃದ್ಧಿಯ ಹೆಜ್ಜೆ, ರಾತ್ರಿ ಬೆಳಕಿನ ಹಬ್ಬ" ಎಂಬ ಪರಿಕಲ್ಪನೆಯನ್ನು ಸಾಕಾರಗೊಳಿಸುತ್ತಿರುವ ಎಸ್.ಎಂ. ಕೃಷ್ಣ ರಸ್ತೆಯ ದಸರಾ ಮಾದರಿಯ ದೀಪಾಲಂಕಾರ, ಬೆಂಗಳೂರಿನ ನಗರ ಸೌಂದರ್ಯಕ್ಕೆ ಹೊಸ ಮೆರುಗು ನೀಡುವ ಮಹತ್ವದ ಹೆಜ್ಜೆಯಾಗಿದೆ.

**ಪ್ರವಾಸಿ ತಾಣವಾಗುತ್ತಿರುವ ರಸ್ತೆ:** ದಸರಾ ಮಾದರಿಯ ದೀಪಾಲಂಕಾರದಿಂದ "ಎಸ್.ಎಂ. ಕೃಷ್ಣ ರಸ್ತೆ" ರಾತ್ರಿ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗುತ್ತಿದೆ. ಯುವಕರು, ಕುಟುಂಬಸ್ಥರು ವಿದ್ಯುತ್ ದೀಪಗಳ ದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳಲು ರಾತ್ರಿ ವೇಳೆ ಆಗಮಿಸುತ್ತಿದ್ದು ಯುವಕರ ನೆಚ್ಚಿನ ಹಾಟ್ ಸ್ಪಾಟ್ ರಸ್ತೆಯಾಗುವುದರ ಜೊತೆಗೆ ವಾಣಿಜ್ಯ ಮತ್ತು ಪ್ರವಾಸೋದ್ಯಮ ಚಟುವಟಿಕೆಗಳ ತಾಣವಾಗಿ ಮಾರ್ಪಾಡಾಗುತ್ತಿದೆ.

**ಬೆಂಗಳೂರು ನಗರದ ಸೌಂದರ್ಯಕ್ಕೆ ಹೊಸ ಆಯಾಮ**

ಇಷ್ಟು ದಿನ ಬೆಂಗಳೂರಿನ ಯಾವುದೇ ರಸ್ತೆ, ಸಂಚಾರಕ್ಕೆ ಮುಕ್ತವಾದರೂ ಸಾರ್ವಜನಿಕ ಓಡಾಟಕ್ಕೆ ಸೀಮಿತವಾಗಿ ಹೆಚ್ಚೇನು ಗಮನ ಸೆಳೆಯುತ್ತಿರಲಿಲ್ಲ. ಆದರೆ "ಎಸ್.ಎಂ.ಕೃಷ್ಣ ರಸ್ತೆ" ಸಾರ್ವಜನಿಕರಿಗೆ ವಿಶಿಷ್ಟ ಅನುಭವವನ್ನು ನೀಡುತ್ತಿದೆ.

ರಸ್ತೆ ವಿಭಜಕ (ಮೀಡಿಯನ್) ಹಾಗೂ ರಸ್ತೆ ಬದಿ, ಪ್ರಮುಖ ವೃತ್ತಗಳಲ್ಲಿ ಮತ್ತು ಪಾದಚಾರಿ ಮಾರ್ಗದಲ್ಲಿ ಅಳವಡಿಸಿ ರುವ ಎಲ್‌ಇಡಿ ದೀಪಗಳಿಂದ ರಾತ್ರಿ ವೇಳೆ ಸಂಪೂರ್ಣವಾಗಿ ಪ್ರಕಾಶಮಾನವಾಗಿ ಕಂಗೊಳಿಸಿ ನಗರಕ್ಕೆ ಸೌಂದರ್ಯದ ಹೊಸ ಆಯಾಮವನ್ನು ನೀಡುತ್ತಿದೆ.

## ಇಂದಿನಿಂದ ಎಸ್‌ಐಆರ್: ಸಹಕಾರ ನೀಡುವಂತೆ ಜನರಿಗೆ ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಅನ್ಬುಕುಮಾರ್ ಮನವಿ

**ಬೆಂಗಳೂರು, ಜೂ.29:** ಕರ್ನಾಟಕದಲ್ಲಿ ನಾಳೆಯಿಂದ ಜುಲೈ 29ರವರೆಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ನಡೆಯಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿ ಕಾರಿ ವಿ. ಅನ್ಬುಕುಮಾರ್ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ರಾಜ್ಯದ ಇತಿಹಾಸದಲ್ಲೇ ಅತ್ಯಂತ ವ್ಯವಸ್ಥಿತವಾಗಿ ಈ ಬೃಹತ್ ಮತದಾರರ ಗಣತಿ ಪ್ರಕ್ರಿಯೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಈ ವಿಶೇಷ ಪರಿಷ್ಕರಣೆಯ ಅಂಗವಾಗಿ ನಿಯೋಜನೆಗೊಂಡಿರುವ ಬೂತ್ ಮಟ್ಟದ ಅಧಿಕಾರಿಗಳು ನಾಳೆಯಿಂದ ಜುಲೈ 29ರವರೆಗೆ ಮನೆ–ಮನೆಗೆ ಖುದ್ದಾಗಿ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಭೇಟಿಯ ವೇಳೆ ಅಧಿಕಾರಿಗಳು ಸಾರ್ವಜನಿಕರಿಗೆ ವಿಶೇಷ ಗಣತಿ ನಮೂನೆಯನ್ನು ವಿತರಿಸಲಿದ್ದಾರೆ. ಮಾಹಿತಿ ಪಡೆದು ಭರ್ತಿ ಮಾಡಿದ ನಮೂನೆಗಳನ್ನು ಅಧಿಕಾರಿಗಳು ಡಿಜಿಟಲೀಕರಣ ಪ್ರಕ್ರಿಯೆಗೆ ಕಳುಹಿಸಿಕೊಡಲಿದ್ದಾರೆ. ಈಗಾಗಲೇ ಮನೆಗಳಿಗೆ ಅರ್ಜಿ ನೀಡಿದ ಬಳಿಕ, ಗುರುತಿನ ಸಂಕೇತವಾಗಿ ನೇರಳೆ ಬಣ್ಣದ ಸ್ಟಿಕ್ಕರ್ ನಮೂನೆಯನ್ನು ಮನೆಗಳ ಮುಂದೆ ಅಂಟಿಸಲಾಗುತ್ತದೆ ಎಂದರು.

ಮ್ಯಾಪಿಂಗ್ ಮತ್ತು ಪ್ರಸ್ತುತ ಮತದಾರರ ಅಂಕಿ–ಅಂಶರಾಜ್ಯದಲ್ಲಿ ಸದ್ಯ ಒಟ್ಟು 5,54,32,314 (5.54 ಕೋಟಿಗೂ ಹೆಚ್ಚು) ಮತದಾರರಿದ್ದಾರೆ. ಈ ಎಲ್ಲಾ ಮತದಾರರು ಈ ಬಾರಿ ವಿಶೇಷ ಸಮಗ್ರ ಪರಿಷ್ಕರಣೆಗೆ ಒಳಪಡಲಿದ್ದಾರೆ.




### ಆ.5ರಂದು ಕರಡುಪಟ್ಟಿ, ಅ.7ರಂದು ಅಂತಿಮಪಟ್ಟಿ ಪ್ರಕಟ

**ಜೂನ್ 30ರಿಂದ ಜುಲೈ 29ರವರೆಗೆ ಮನೆ–ಮನೆ ಸಮೀಕ್ಷೆ ನಡೆಯಲಿದೆ, ಆ.3ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ, ಆ.5ರಂದು ಆಕ್ಷೇಪಣೆ ಸಲ್ಲಿಸಲು ಅವಕಾಶವಿರಲಿದೆ. (ಆ.5ರಿಂದ ಸೆ.4ರವರೆಗೆ ಸಾರ್ವಜನಿಕರು ತಮ್ಮ ಹೆಸರು ಬಿಟ್ಟು ಹೋಗಿದ್ದರೆ ಅಥವಾ ತಿದ್ದುಪಡಿಗಳಿದ್ದರೆ ಈ ಅವಧಿಯಲ್ಲಿ ಆಕ್ಷೇಪಣೆ ಸಲ್ಲಿಸಬಹುದು), ಅ.7ರಂದು ಅಂತಿಮ ಮತದಾರರ ಪಟ್ಟಿ ಬಿಡುಗಡೆ: ಅಕ್ಟೋಬರ್ 7 (ಆಯೋಗದ ವೇಳಾಪಟ್ಟಿಯಂತೆ ಎಲ್ಲಾ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿ ಅಕ್ಟೋಬರ್ ಮೊದಲ ವಾರದಲ್ಲಿ ಅಂತಿಮ ಪಟ್ಟಿ ಪ್ರಕಟವಾಗಲಿದೆ). ಈ ವಿಶೇಷ ತೀವ್ರ ಪರಿಷ್ಕರಣೆಯು ಅತ್ಯಂತ ಪಾರದರ್ಶಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ನೆರವಾಗುವುದರಿಂದ, ಸಾರ್ವಜನಿಕರು ತಮ್ಮ ಮನೆಗೆ ಭೇಟಿ ನೀಡುವ ಬೂತ್‌ಮಟ್ಟದ ಅಧಿಕಾರಿಗಳಿಗೆ ನಿಖರ ಮಾಹಿತಿ ನೀಡಿ ಸಹಕರಿಸಬೇಕಾಗಿ ಮುಖ್ಯ ಚುನಾವಣಾಧಿಕಾರಿಗಳು ಮನವಿ ಮಾಡಿದ್ದಾರೆ.**

*ಮ್ಯಾಪಿಂಗ್‌ಗೆ ಒಳಪಟ್ಟವರು: ಈಗಾಗಲೇ ರಾಜ್ಯದಲ್ಲಿ ಒಟ್ಟು 5,07,79,810 ಮತದಾರರನ್ನು ಮ್ಯಾಪಿಂಗ್ ಪ್ರಕ್ರಿಯೆಗೆ ಒಳಪಡಿಸಲಾಗಿದೆ. ಅಂದರೆ ಶೇಕಡಾ 91.61ರಷ್ಟು ಮತದಾರರ ಮ್ಯಾಪಿಂಗ್ ಯಶಸ್ವಿಯಾಗಿ ಪೂರ್ಣಗೊಂಡಿದೆ.

*ಮ್ಯಾಪಿಂಗ್‌ನಿಂದ ಹೊರಗಿರುವವರು: ಇನ್ನುಳಿದ 46,52,504 (46.52 ಲಕ್ಷಕ್ಕೂ ಹೆಚ್ಚು) ಮತದಾರರು ಸದ್ಯಕ್ಕೆ ಮ್ಯಾಪಿಂಗ್ ವ್ಯಾಪ್ತಿಯಿಂದ ಹೊರಗುಳಿದಿದ್ದು, ಈ ಸಮೀಕ್ಷೆಯ ಮೂಲಕ ಅವರ ವಿವರಗಳನ್ನೂ ನವೀಕರಿಸಲಾ ಗುತ್ತದೆ. ರಾಜ್ಯಾದ್ಯಂತ ಈ ಬೃಹತ್ ಕಾರ್ಯಾ ಚರಣೆಯನ್ನು ಯಶಸ್ವಿಗೊಳಿಸಲು ಚುನಾವಣಾ ಆಯೋಗವು ದೊಡ್ಡ ಮಟ್ಟದ ತರಬೇತಿ ಪಡೆದ ಸಿಬ್ಬಂದಿ ವರ್ಗವನ್ನು ಮೈದಾನಕ್ಕಿಳಿಸಿದೆ.

**ಸಿಬ್ಬಂದಿ ನಿಯೋಜನೆ**

ಬೂತ್ ಮಟ್ಟದ ಅಧಿಕಾರಿಗಳು – 59,050

ಜಿಲ್ಲಾ ಚುನಾವಣಾಧಿಕಾರಿಗಳು– 31

ಅಪರ ಜಿಲ್ಲಾ ಚುನಾವಣಾಧಿಕಾರಿಗಳು– 4

ನೋಂದಣಾಧಿಕಾರಿಗಳು – 224

ಸಹಾಯಕ ನೋಂದಣಾಧಿಕಾರಿಗಳು– 336, ಬಿಎಲ್‌ಒಗಳು – 7556

ಬಿಎಲ್‌ಎಗಳು – 1,15,112

### ಶೇ.76ಕ್ಕೂ ಹೆಚ್ಚು ಮತದಾರರ ಮ್ಯಾಪಿಂಗ್ ಪೂರ್ಣ

**ಜಿಬಿಎ ವ್ಯಾಪ್ತಿಯಲ್ಲಿ ಜುಲೈ 29ರವರೆಗೆ ಎಸ್‌ಐಆರ್ ಪ್ರಕ್ರಿಯೆ ನಡೆಯಲಿದ್ದು, ಈಗಾಗಲೇ ಶೇಕಡಾ 76ಕ್ಕೂ ಹೆಚ್ಚು ಮತದಾರರ ಮ್ಯಾಪಿಂಗ್ ಮುಕ್ತಾಯಗೊಂಡಿದೆ. ಸುಗಮ ನಿರ್ವಹಣೆಗಾಗಿ ಸಾವಿರಾರು ಅಧಿಕಾರಿಗಳು, ಬಿಎಲ್‌ಓ ಮೇಲ್ವಿಚಾರಕರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಒಳಗೊಂಡ ಬೃಹತ್ ತಂಡವನ್ನು ನಿಯೋಜಿಸಲಾಗಿದ್ದು, ಸಿಬ್ಬಂದಿಗೆ ಸೂಕ್ತ ತರಬೇತಿಯನ್ನೂ ನೀಡಲಾಗಿದೆ.ಮನೆ ಸಮೀಕ್ಷೆ ವೇಳೆ ಸಾರ್ವಜನಿಕರು ಲಭ್ಯವಿಲ್ಲದಿದ್ದರೆ ಅಧಿಕಾರಿಗಳು ಇನ್ನೂ ಎರಡು ಬಾರಿ ಭೇಟಿ ನೀಡಲಿದ್ದಾರೆ.**

**ನಾಗರಿಕರು ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿದ್ದು, ಆನ್‌ಲೈನ್ ಮೂಲಕವೂ ಮಾಹಿತಿ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿದೆ. ಡಿಜಿಟಲ್ ರೂಪದಲ್ಲಿ ಸಲ್ಲಿಸಿದ ದಾಖಲೆಗಳನ್ನು ಅಧಿಕಾರಿಗಳು ಮನೆಗೆ ಬಂದು ಪರಿಶೀಲಿಸಲಿದ್ದು, ಮತದಾರರ ನೆರವಿಗಾಗಿ 2,855 ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ವಿವಿಧೆಡೆ ಮತಗಟ್ಟೆ ಮಟ್ಟದ ಅಧಿಕಾರಿಗಳು ಸಾರ್ವಜನಿಕರ ಮನೆ ಬಾಗಿಲಿಗೆ ಬಂದು ಮಾಹಿತಿ ಕಲೆಹಾಕಲಿದ್ದಾರೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದ್ದಾರೆ.**

## 9 ಅಬಕಾರಿ ಇಲಾಖೆ ಡಿಸಿ ಕಚೇರಿಗಳ ಮೇಲೆ ಲೋಕಾ ದಾಳಿ

**ಬೆಂಗಳೂರು, ಜೂ.29:** ರಾಜ್ಯ ರಾಜಧಾನಿ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಶಾಕ್ ನೀಡಿರುವ ಲೋಕಾಯುಕ್ತ ಪೊಲೀಸರು, ಅಬಕಾರಿ ಇಲಾಖೆ ಉಪ ಆಯುಕ್ತರ ಕಚೇರಿಗಳ ಮೇಲೆ ಬೃಹತ್ ದಾಳಿ ನಡೆಸಿದ್ದಾರೆ.




ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ವ್ಯಾಪಿಸಿರುವ ಒಟ್ಟು 9 ಅಬಕಾರಿ ಡಿಸಿ ಕಚೇರಿಗಳ ಮೇಲೆ ಅಧಿಕಾರಿಗಳು ಏಕಕಾಲಕ್ಕೆ ದಾಳಿ ನಡೆಸಿ ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ. ಲೋಕಾಯುಕ್ತ ಅಧಿಕಾರಿಗಳ ಪ್ರತ್ಯೇಕ ತಂಡಗಳು ಸೋಮವಾರ ಬೆಳ್ಳಂಬೆಳಗ್ಗೆ ಈ ಜಂಟಿ ಕಾರ್ಯಾಚರಣೆಯನ್ನು ಆರಂಭಿಸಿವೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ಅಬಕಾರಿ ಇಲಾಖೆಯ 8 ಡಿಸಿ ಕಚೇರಿಗಳು ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1 ಅಬಕಾರಿ ಡಿಸಿ ಕಚೇರಿ ಸೇರಿದಂತೆ ಒಟ್ಟು ಒಂಬತ್ತು ಕಡೆಗಳಲ್ಲಿ ಏಕಕಾಲಕ್ಕೆ ಶೋಧ ಕಾರ್ಯ ಕೈಗೊಳ್ಳಲಾಗಿದೆ. ಇಲಾಖೆಯಲ್ಲಿ ನಡೆಯುತ್ತಿರುವ ಅಕ್ರಮಗಳು, ಲಂಚದ ಬೇಡಿಕೆ ಹಾಗೂ ಪರವಾನಗಿ ವಿತರಣೆಯಲ್ಲಿನ ಭ್ರಷ್ಟಾಚಾರದ ದೂರುಗಳ ಹಿನ್ನೆಲೆಯಲ್ಲಿ ಈ ದಾಳಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಲೋಕಾಯುಕ್ತ ಸಂಸ್ಥೆಯ ಬೆಂಗಳೂರು ನಗರ ಘಟಕದ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜ್ ಅವರ ನೇರ ಮಾರ್ಗದರ್ಶನ ಹಾಗೂ ನೇತೃತ್ವದಲ್ಲಿ ಈ ಇಡೀ ಕಾರ್ಯಾಚರಣೆ ನಡೆದಿದೆ. ದಾಳಿಯ ನೇತೃತ್ವ ವಹಿಸಿರುವ ಅಧಿಕಾರಿಗಳ ತಂಡಗಳು ಕಚೇರಿಗಳ ಪ್ರಮುಖ ಕಡತಗಳು, ಕಂಪ್ಯೂಟರ್ ದತ್ತಾಂಶಗಳು ಹಾಗೂ ಆರ್ಥಿಕ ವಹಿವಾಟಿನ ದಾಖಲೆಗಳನ್ನು ವಶಕ್ಕೆ ಪಡೆದು ತೀವ್ರ ಪರಿಶೀಲನೆ ನಡೆಸುತ್ತಿದ್ದಾರೆ. ದಾಳಿಯ ಸಂಪೂರ್ಣ ವಿವರಗಳು ಮತ್ತು ಪತ್ತೆಯಾಗಿರುವ ಅಕ್ರಮಗಳ ಮಾಹಿತಿ ಸದ್ಯದಲ್ಲೇ ಅಧಿಕೃತವಾಗಿ ಹೊರಬೀಳಬೇಕಿದೆ.

#### ಮೂವರು ವಿದೇಶಿ ಪ್ರಜೆಗಳು ಸೇರಿ 4 ಡ್ರಗ್ ಪೆಡ್ಲರ್‌ಗಳ ಬಂಧನ

## ಮಾದಕದ್ರವ್ಯ ನಿಗ್ರಹ ದಳ ಕಾರ್ಯಾಚರಣೆಯಲ್ಲಿ 23 ಕೋಟಿ ರೂ. ಮೌಲ್ಯದ ಡ್ರಗ್ಸ್ ವಶ

**ಬೆಂಗಳೂರು, ಜೂ.29:** ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮೂವರು ವಿದೇಶಿ ಪ್ರಜೆಗಳು ಸೇರಿ ನಾಲ್ಕು ಮಂದಿ ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿ 23 ಕೋಟಿ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ನೈಜೀರಿಯಾ ಪ್ರಜೆಗಳಾದ ಅಮ್‌ಬೋಮೊ ಜಾನ್ ವಿಕ್ಟರ್ (37), ಚಿಮಿ ನುಬುಸಿ ಮೋಸೆಸ್(36), ಕರಿಕರಿ ಎಮೋಸ್(33) ಹಾಗೂ ಕೇರಳದ ಮೊಹಮದ್ ಉಮರುಲ್ ಫಾರುಖ್ (25) ಬಂಧಿತರು. ಈ ಮೂವರು ಮೆಡಿಕಲ್ ವೀಸಾ ಹಾಗೂ ಟೂರಿಸ್ಟ್ ವೀಸಾ ಪಡೆದು ಭಾರತಕ್ಕೆ ಬಂದಿದ್ದು, ವೀಸಾ ಅವಧಿ ಮುಗಿದಿದ್ದರೂ ಅನಧಿಕೃತವಾಗಿ ವಾಸವಾಗಿದ್ದುಕೊಂಡು ದೆಹಲಿಯಲ್ಲಿ ನೈಜೀರಿಯಾ ಪ್ರಜೆಗಳಿಂದ ಕಡಿಮೆ ಬೆಲೆಗೆ ಮಾದಕ ವಸ್ತುಗಳನ್ನು ಖರೀದಿಸಿಕೊಂಡು ಬಂದು ಸಾರ್ವಜನಿಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಹಾಗೂ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದುದ್ದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.ಈ ಮೂವರು ವಿದೇಶಿ ಪ್ರಜೆಗಳಿಂದ 21 ಕೋಟಿ ಮೌಲ್ಯದ 10 ಕೆಜಿ 270 ಗ್ರಾಂ ಎಂಡಿಎಂಎ, 4 ಮೊಬೈಲ್ ಹಾಗೂ 2 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದು, ಇವುಗಳ ಮಾರುಕಟ್ಟೆ ಮೌಲ್ಯ 21 ಕೋಟಿ ರೂ.ಗಳೆಂದು ಅಂದಾಜಿಸಲಾಗಿದೆ.



ಹಾವೇರಿಯ ಜಿಲ್ಲಾ ನ್ಯಾಯಾಲಯದಲ್ಲಿ ಸೋಮವಾರ ಬಾಂಬ್ ಬೆದರಿಕೆ ಪತ್ರ ಬಂದ ಹಿನ್ನೆಲೆಯಲ್ಲಿ ಬಾಂಬ್ ನಿಷ್ಕ್ರಿಯ ದಳ ಕಾರ್ಯಾಚರಣೆ ನಡೆಸಿತು.

# ಗೃಹಲಕ್ಷ್ಮಿ ಹಣ ದುರ್ಬಳಕೆ ಆರೋಪಕ್ಕೆ ತಿರುಗೇಟು ಸಿಎಜಿ ವರದಿ ಸತ್ಯಕ್ಕೆ ದೂರ: ಎಚ್.ಎಂ.ರೇವಣ್ಣ ಸ್ಪಷ್ಟನೆ

**ರಾಯಚೂರು, ಜೂ. 29:** ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಸಿಎಜಿ ವರದಿಯಲ್ಲಿ ಉಲ್ಲೇಖವಾಗಿರುವ 60 ಕೋಟಿ ರೂ. ಹಣ ಬ್ಯಾಂಕ್ ಖಾತೆಯೇ ಇಲ್ಲದವರಿಗೆ ಜಮೆಯಾಗಿದೆ ಎಂಬ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ. ರೇವಣ್ಣ ಹೇಳಿದ್ದಾರೆ. ಮೃತಪಟ್ಟ ಫಲಾನುಭವಿಗಳ ಖಾತೆಗೆ ಹಣ ಜಮೆಯಾಗಿರುವುದು ನಿಜವಾಗಿದ್ದು, ಅದನ್ನು ಸರ್ಕಾರ ಈಗಾಗಲೇ ಸರಿಪಡಿಸುವ ಕಾರ್ಯ ಆರಂಭಿಸಿದೆ ಎಂದು ತಿಳಿಸಿದರು.

ಗ್ಯಾರಂಟಿ ಯೋಜನೆಗಳು ಆರಂಭವಾದ ವೇಳೆ ಜನರಿಗೆ ಯಾವುದೇ ತೊಂದರೆಯಾಗದಂತೆ ಸಂಪೂರ್ಣ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ, ನೋಂದಣಿ ಹಾಗೂ ಹಣ ವರ್ಗಾವಣೆ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಈ ಪ್ರಕ್ರಿಯೆಯಲ್ಲಿ ಕೆಲವು ತಾಂತ್ರಿಕ ಲೋಪಗಳು ಕಂಡುಬಂದಿದ್ದು, ಅವುಗಳನ್ನು ಹಂತ ಹಂತವಾಗಿ ಸರಿಪಡಿಸಲಾಗುತ್ತಿದೆ. ಗೃಹಲಕ್ಷ್ಮಿ ಯೋಜನೆಯ ಮರುಪರಿಶೀಲನೆ ವೇಳೆ 2.80 ಲಕ್ಷ ಫಲಾನುಭವಿಗಳು ಮೃತಪಟ್ಟಿರುವುದು ಪತ್ತೆಯಾಗಿದೆ. ಅವರ ಖಾತೆಗಳಿಗೆ 115 ಕೋಟಿ ರೂ. ಜಮೆಯಾಗಿದ್ದು, ಈಗಾಗಲೇ 15 ಕೋಟಿ ರೂ. ವಾಪಸ್



ಪಡೆಯಲಾಗಿದೆ. ಉಳಿದ 100 ಕೋಟಿ ರೂ. ವಸೂಲಿಗೆ ಬ್ಯಾಂಕ್‌ಗಳೊಂದಿಗೆ ಚರ್ಚೆ ನಡೆಯುತ್ತಿದೆ. ಗೃಹಜ್ಯೋತಿ ಯೋಜನೆಯಲ್ಲಿ 200 ಯುನಿಟ್ ಉಚಿತ ವಿದ್ಯುತ್ ಸೌಲಭ್ಯವನ್ನು ಅಂಗಡಿ ಹಾಗೂ ವಾಣಿಜ್ಯ ಉದ್ದೇಶಗಳಿಗೆ ಬಳಸುತ್ತಿರುವ ಪ್ರಕರಣಗಳು ಬೆಳಕಿಗೆ ಬಂದಿದ್ದು, ಅನ್ನಭಾಗ್ಯ ಯೋಜನೆಯಲ್ಲಿ ನಕಲಿ ರೇಷನ್ ಕಾರ್ಡ್‌ಗಳ ಬಳಕೆಯ ಮಾಹಿತಿಯೂ ಲಭ್ಯವಾಗಿದೆ. ಈ ಎಲ್ಲ ಅಕ್ರಮಗಳ ಬಗ್ಗೆ ಪರಿಶೀಲನೆ ಮುಂದುವರಿದಿದೆ. ಗ್ಯಾರಂಟಿ ಯೋಜನೆಗಳ ಹಣ ದುರ್ಬಳಕೆಯಾಗುತ್ತಿದೆ ಎಂದು ಆರೋಪಿಸಿರುವ ವಿರೋಧ ಪಕ್ಷದ ನಾಯಕ ಆರ್. ಅಶೋಕ್‌ಗೆ ತಿರುಗೇಟು ನೀಡಿದ ರೇವಣ್ಣ, "ಗ್ಯಾರಂಟಿ ಯೋಜನೆಗಳನ್ನು ನಾವು ಜಾರಿಗೆ ತಂದಿದ್ದೇವೆ. ಎಲ್ಲಿ ಲೋಪ ಕಂಡುಬಂದಿದೆಯೋ ಅದನ್ನು ಸರಿಪಡಿಸುತ್ತಿದ್ದೇವೆ. ಗ್ಯಾರಂಟಿ ಯೋಜನೆಗಳು ಸಾಧ್ಯವಿಲ್ಲ ಎಂದಿದ್ದವರಿಗೆ ಈಗ ಉತ್ತರ ಸಿಕ್ಕಿದೆ".

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಲೋಪಗಳಾಗಿವೆ ಎಂಬ ಸಿಎಜಿ ವರದಿಯ ಹಿನ್ನೆಲೆಯಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಹೆಚ್.ಎಂ ರೇವಣ್ಣ ಸ್ಪಷ್ಟನೆ ನೀಡಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬ್ಯಾಂಕ್ ಖಾತೆಯೇ ಇಲ್ಲದವರಿಗೆ 60 ಕೋಟಿ ರೂಪಾಯಿ ಹಣ ಜಮೆಯಾಗಿದೆ ಎಂದು ಸಿಎಜಿ ವರದಿಯಲ್ಲಿ ಹೇಳಿರುವುದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದದ್ದು, ಎಂದು ತಳ್ಳಿಹಾಕಿದರು.

---

### ಕಾಂಗ್ರೆಸ್ ಹಟಾವೋ - ತಾಂಡಾ ಬಚಾವೋ...

## ಕಾಂಗ್ರೆಸ್‌ನಿಂದ ಒಳಮೀಸಲು ಮಹಾಮೋಸ ಬಂಜಾರ ಸಮಾಜದ ಆಕ್ರೋಶ



**ಕಲಬುರಗಿ, ಜೂ. 29:** ಕಾಂಗ್ರೆಸ್ ಸರ್ಕಾರ ಒಳಮೀಸಲಾತಿ ಹಂಚಿಕೆ ವಿಚಾರದಲ್ಲಿ ಲಂಬಾಣಿ ಸೇರಿ ಬಂಜಾರ, ಭೋವಿ, ಕೊರಮ ಹಾಗೂ ಕೊರಚ ಸಮುದಾಯಗಳಿಗೆ ಬಹುದೊಡ್ಡ ಅನ್ಯಾಯ ಮಾಡಿದೆ. ಅನ್ಯಾಯಕ್ಕೆ ಒಳಗಾದ ನಮಗೆಲ್ಲ ಜನಸಂಖ್ಯೆ ಮತ್ತು ಸಾಮಾಜಿಕ ಹಿಂದುಳಿದ ಸ್ಥಿತಿ ಪರಿಗಣಿಸಿ ನ್ಯಾಯಯುತ ಮೀಸಲಾತಿ ನೀಡಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ 'ಕಾಂಗ್ರೆಸ್ ಹಟಾವೋ– ತಾಂಡಾ ಬಚಾವೋ' ಚಳವಳಿ ಆರಂಭಿಸಬೇಕಗುತ್ತದೆ ಎಂದು ಶಿರಹಟ್ಟಿ ಬಿಜೆಪಿ ಶಾಸಕ ಡಾ.ಚಂದ್ರು ಲಮಾಣಿ ಹಾಗೂ ಶಾಸಕ ಕೃಷ್ಣಾ ನಾಯಕ್, ಮಾಜಿ ಸಂಸದ ಡಾ.ಉಮೇಶ ಜಾಧವ ಅವರು ಎಚ್ಚರಿಕೆ ನೀಡಿದರು.

ಸುಪ್ರೀಂ ಕೋರ್ಟ್ ಆದೇಶದಂತೆ ಒಳ ಮೀಸಲಾತಿಯನ್ನು ನ್ಯಾಯಯುತವಾಗಿ ಹಂಚಿಕೆ ಮಾಡುವ ಬದಲು, ಸರ್ಕಾರ ಮಂಡಿಸಿರುವ ವಿಧೇಯಕದಲ್ಲಿ ಬಂಜಾರ (ಲಂಬಾಣಿ), ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳಿಗೆ ಅನ್ಯಾಯ ಎಸಗಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ರಾಜ್ಯ ಸರ್ಕಾರ ಒಳ ಮೀಸಲಾತಿಯ ಅವೈಜ್ಞಾನಿಕ ಹಂಚಿಕೆ ಮೂಲಕ ಬಂಜಾರ ಸಮಾಜದ ವಿರುದ್ಧ ಸೇಡಿನ ರಾಜಕಾರಣ ನಡೆಸುತ್ತಿದೆ ಎಂದು ಆರೋಪಿಸಿದ ಅವರು, ಉತ್ತರ ಕರ್ನಾಟಕ ಭಾಗದಲ್ಲಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಲಂಬಾಣಿ, ಭೋವಿ, ಕೊರಮ ಹಾಗೂ ಕೊರಚ ಸಮುದಾಯಗಳಿಗೆ ಶೇ.4 ಮೀಸಲಾತಿ ಹಾಗೂ ಅಲೆಮಾರಿ ಸಮುದಾಯಗಳಿಗೆ ಶೇ.1 ಮೀಸಲಾತಿ ನಿಗದಿಪಡಿಸಿರುವುದು ನ್ಯಾಯಸಮ್ಮತವಾಗಿಲ್ಲ. ಜನಸಂಖ್ಯೆ ಹೆಚ್ಚಾಗಿರುವ ಲಂಬಾಣಿ, ಭೋವಿ, ಕೊರಮ ಹಾಗೂ ಕೊರಚ ಸಮುದಾಯಗಳಿಗೆ ಶೇ.5 ಮತ್ತು ಅಲೆಮಾರಿ ಸಮುದಾಯಕ್ಕೆ ಪ್ರತ್ಯೇಕವಾಗಿ ಶೇ.1 ಮೀಸಲಾತಿ ನೀಡುವಂತೆ ಆಗ್ರಹಿಸಿದರು.

ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ಒಳಮೀಸಲಾತಿ ಹಂಚಿಕೆ ಮಾಡಿದ್ದು, ಇದನ್ನು ಕೂಡಲೇ ಮರುಪರಿಶೀಲಿಸಿ ಅಲೆಮಾರಿ ಸಮುದಾಯವನ್ನು ಪ್ರತ್ಯೇಕ ವರ್ಗವಾಗಿ ಪರಿಗಣಿಸಿ ನ್ಯಾಯಯುತ ಮೀಸಲಾತಿ ನೀಡಬೇಕು. ತಮ್ಮ ಬೇಡಿಕೆ ಈಡೇರದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

---

### ಸಿಎಂ ಡಿ.ಕೆ ಶಿವಕುಮಾರ ಹೆಸರು ಕೆಡಿಸಲು ಹುನ್ನಾರ

## ಅವಧಿಗೆ ಮುನ್ನ ಕೆಳಗಿಳಿಸುವ ಷಡ್ಯಂತ್ರ ಡಾ.ಪ್ರಣವಾನಂದ ಸ್ವಾಮೀಜಿ ಆರೋಪ

**ಕಲಬುರಗಿ, ಜೂ. 29:** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರ ಹೆಸರನ್ನು ಕೆಡಿಸಿ, ಅವಧಿಗೂ ಮುನ್ನವೇ ಅವರನ್ನು ಕುರ್ಚಿಯಿಂದ ಕೆಳಗಿಳಿಸಲು ಕಾಂಗ್ರೆಸ್ ಪಕ್ಷದ ಒಳಗಿನ ಕೆಲವು ಶಕ್ತಿಗಳೇ ಯತ್ನಿಸುತ್ತಿವೆ ಎಂದು ಬ್ರಹ್ಮಶ್ರೀ ನಾರಾಯಣ ಗುರುಶಕ್ತಿ ಪೀಠದ ಡಾ.ಪ್ರಣವಾನಂದ ಸ್ವಾಮೀಜಿ ಗಂಭೀರ ಆರೋಪ ಮಾಡಿದ್ದಾರೆ.

ಈಗಾಗಲೇ ಅವಧಿಗೂ ಮುನ್ನವೇ ಅವರನ್ನು ಕೆಳಗಿಳಿಸುವ ಪ್ರಯತ್ನಗಳು ತೆರೆಮರೆಯಲ್ಲಿ ಗುಪ್ತ ಸಭೆಗಳನ್ನು ನಡೆಸುತ್ತಿರುವುದರಿಂದ, ಸಿಎಂ ಇಂಥ ಚಟುವಟಿಗಳ ಬಗ್ಗೆ ಅತ್ಯಂತ ಜಾಗರೂಕರಾಗಿರಬೇಕು. ನಾವೆಲ್ಲರೂ ಶೀಘ್ರದಲ್ಲೇ ಮಹತ್ವದ ಸಭೆ ನಡೆಸಿ, ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಸೂಕ್ತ ಸಲಹೆ ಹಾಗೂ ಎಚ್ಚರಿಕೆಯ ಸೂಚನೆಗಳನ್ನು

ಅತಿ ಹಿಂದುಳಿದ ಮಠಾಧೀಶರ ಮಹಾಸಭೆ ನಿರ್ಣಯ: ಅತಿ ಹಿಂದುಳಿದ ಮಠಾಧೀಶರ ಮಹಾಸಭೆ ಎರಡು ದಿನಗಳ ಚಿಂತನ ಶಿಬಿರದಲ್ಲಿ ನೂತನ ಮುಖ್ಯಮಂತ್ರಿ ಶಿವಕುಮಾರ್‌ಗೆ ಗೌರವ ಸನ್ಮಾನ ಏರ್ಪಡಿಸುವುದು ಸೇರಿ ಅತಿ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಪ್ರಮುಖ ನಿರ್ಣಯ ಕೈಗೊಳ್ಳಲಾಗಿದೆ.

ಮುಖ್ಯವಾಗಿ ಮಡಿವಾಳ,



ಡಿ.ಕೆ. ಶಿವಕುಮಾರ ಅವರು ಮುಖ್ಯಮಂತ್ರಿಯಾಗಲು ನಾವೆಲ್ಲರೂ ಹೇಗೆ ದೃಢ ಸಂಕಲ್ಪ ಮಾಡಿದ್ದೆವು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಹಾಗೂ ಸಂಘಟಿಸಲು ಶಿವಕುಮಾರ ಅಪಾರ ಶ್ರಮ ಹಾಕಿದ್ದಾರೆ. ಆದರೆ, ಈಗ ಸಿಎಂ ಪಟ್ಟ ಅಲಂಕರಿಸಿದ ಬೆನ್ನಲ್ಲೇ, ಅವರದೇ ಪಕ್ಷದ ಕೆಲವು ಆಂತರಿಕ ಶಕ್ತಿಗಳು ವ್ಯವಸ್ಥಿತವಾಗಿ ಅವರ ವಿರುದ್ಧ ಹುನ್ನಾರ ನಡೆಸುತ್ತಿವೆ ಎಂದು ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ನೀಡಲಿದ್ದೇವೆ ಎಂದು ಶ್ರೀಗಳು ಸ್ಪಷ್ಟಪಡಿಸಿದರು.

ಗಾಣಿಗರ ಜಗದ್ಗುರು ಶ್ರೀ ಪ್ರಣವಾನಂದ ಪುರಿ ಮಹಾಸ್ವಾಮೀಜಿ, ರಾಷ್ಟ್ರೀಯ ಅಧ್ಯಕ್ಷ ಶ್ರೀ ಬಸವನಾಗಿದೇವ ಶರಣರು, ವಿಶ್ವಕರ್ಮ ಸಮಾಜದ ಶ್ರೀ ದೊಡ್ಡೇಂದ್ರ ಸ್ವಾಮೀಜಿ, ಕುಂಬಾರ ಸಮುದಾಯದ ಬಸವ ಮೂರ್ತಿ ಸ್ವಾಮೀಜಿ, ಕುಂಬಾರ ಗುಂಡಯ್ಯ ಸ್ವಾಮೀಜಿ, ಮಾದಿಗ ಸಮುದಾಯದ ಶಿವಮೂರ್ತಿ ಸ್ವಾಮೀಜಿ ಸೇರಿ ರಾಜ್ಯದ ವಿವಿಧ ಭಾಗಗಳ 25ಕ್ಕೂ ಹೆಚ್ಚು ಅತಿ ಹಿಂದುಳಿದ ಸಮುದಾಯಗಳ ಮಠಾಧೀಶರು ಇದ್ದರು.

ಸವಿತಾ ಸಮಾಜ, ಈಡಿಗ, ಉಪ್ಪಾರ, ಗಾಂಗಿಕುಲ ಸೇರಿ ಕ್ಯಾಟಗರಿ 1 ಮತ್ತು 2ರಲ್ಲಿರುವ ಅತ್ಯಂತ ಸಣ್ಣ ಸಮುದಾಯಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಮಾನವ ಶಾಸ್ತ್ರ ತಜ್ಞರಿಂದ ಕುಲಶಾಸ್ತ್ರ ಅಧ್ಯಯನ ನಡೆಸಲು ಸರ್ಕಾರವನ್ನು ಒತ್ತಾಯಿಸಲಾಗಿದೆ.

ಶ್ರೀಕ್ಷೇತ್ರ ಧರ್ಮಸ್ಥಳ ಹಾಗೂ ಪೂಜ್ಯ ವೀರೇಂದ್ರ ಹೆಗ್ಗಡೆ ಯವರನ್ನು ಅವಮಾನಿಸುವ ದುಷ್ಟ ಶಕ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಮಹಾಸಭೆಯು ರಾಜ್ಯ ಸರ್ಕಾರಕ್ಕೆ ಆಗ್ರಹ ಮಂಡಿಸಿದೆ.

---

### ಕಲಬುರಗಿ, ರಾಯಚೂರಿನಲ್ಲಿ ಕೃತಕ ಶೇಂದಿ ದಂಧೆ!

## 1,500 ಕೆಜಿ ಮಾರಣಾಂತಿಕ ಕೆಮಿಕಲ್ ವಶಪಡಿಕೊಂಡ ಅಬಕಾರಿ ಇಲಾಖೆ



**ಕಲಬುರಗಿ, ಜೂ. 29:** ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರ್ಮಿಕರನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ನಕಲಿ ಹಾಗೂ ವಿಷಕಾರಿ ಕೃತಕ ಕಳ್ಳು ದಂಧೆಯ ವಿರುದ್ಧ ಅಬಕಾರಿ ಇಲಾಖೆ ಭಾರಿ ಕಾರ್ಯಾಚರಣೆ ನಡೆಸಿದೆ. ಕೃತಕ ಕಳ್ಳು ತಯಾರಿಕೆಗೆ ಬಳಸಲಾಗುವ ಅತ್ಯಂತ ಅಪಾಯಕಾರಿ 'ಕ್ಲೋರಲ್ ಹೈಡ್ರೇಟ್' ಎಂಬ 1,500 ಕೆಜಿ ರಾಸಾಯನಿಕ ಪುಡಿಯನ್ನು ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧೆಡೆಯಿಂದ ವಶಪಡಿಸಿಕೊಂಡಿದೆ. ಈ ದಂಧೆಗೆ ಸಂಬಂಧಿಸಿದಂತೆ ತೊಡಗಿಸಿಕೊಂಡವರನ್ನು ಗುರುತಿಸಿ, ಇದುವರೆಗೆ 771 ಜನರನ್ನು ಬಂಧಿಸಲಾಗಿದೆ.

ಅಬಕಾರಿ ಇಲಾಖೆಯ ದಾಖಲೆಗಳ ಪ್ರಕಾರ, ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಈ ಮಾರಕ ನಕಲಿ ಕಳ್ಳಿನ ಬಳಕೆ ಅತ್ಯಂತ ಹೆಚ್ಚಾಗಿದೆ. ಇದು ನೇರವಾಗಿ ಮನುಷ್ಯನ ಕೇಂದ್ರ ನರಮಂಡಲದ ಮೇಲೆ ದಾಳಿ ಮಾಡಿ ಜರ್ಜರಿತಗೊಳಿಸುತ್ತದೆ. ಕಲಬುರಗಿ ಮತ್ತು ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಈ ದಂಧೆ ಹೆಮ್ಮರವಾಗಿ ಬೆಳೆದಿದೆ. ಅದರಲ್ಲೂ ವಿಶೇಷವಾಗಿ ರಾಯಚೂರು ಜಿಲ್ಲೆಯೊಂದರಲ್ಲೇ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 1,033 ಕೆಜಿ ಕ್ಲೋರಲ್ ಹೈಡ್ರೇಟ್ ಪುಡಿ ಮತ್ತು 16,905 ಲೀಟರ್ ಕೃತಕ ಕಳ್ಳನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಕಲ್ಯಾಣ ಕರ್ನಾಟಕದ ಹೊರತಾಗಿ ಚಿಕ್ಕಬಳ್ಳಾಪುರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಈ ವಿಷಕಾರಿ ಪಾನೀಯದ ಹಾವಳಿ ಹೆಚ್ಚಾಗಿದೆ.

ಕಳ್ಳಭಟ್ಟಿ ದಂಧೆಕೋರರು ಕೇವಲ 5 ಗ್ರಾಮ್ ಕ್ಲೋರಲ್ ಹೈಡ್ರೇಟ್ ಪುಡಿಯನ್ನು ಬಳಸಿ 1 ಲೀಟರ್ ಕೃತಕ ಕಳ್ಳನ್ನು ತಯಾರಿಸುತ್ತಾರೆ. ಕಡಿಮೆ ಬೆಲೆಗೆ ಸಿಗುತ್ತದೆ ಮತ್ತು ಅತಿ ಹೆಚ್ಚು ಕಿಕ್ ನೀಡುತ್ತದೆ ಎಂಬ ಕಾರಣಕ್ಕೆ ದಿನಗೂಲಿ ಕಾರ್ಮಿಕರು ಈ ರಾಸಾಯನಿಕ ಮಿಶ್ರಿತ ಕಳ್ಳನ್ನು ಹೆಚ್ಚಾಗಿ ಕುಡಿಯುತ್ತಿದ್ದಾರೆ. ಇದು ಮನುಷ್ಯನ ದೇಹವನ್ನು ನಿಧಾನವಾಗಿ ಕೊಲ್ಲುವ ಸ್ಲೋ ಪಾಯ್ಸನ್ ಆಗಿದೆ. ಇದರ ನಿರಂತರ ಸೇವನೆಯಿಂದ ಅಂಗಾಂಗ ವೈಫಲ್ಯ, ಪಾರ್ಶ್ವವಾಯು ಮತ್ತು ಸಾವು ಸಂಭವಿಸಬಹುದು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ ಇಡೀ ಕರ್ನಾಟಕದಲ್ಲಿ ನೈಸರ್ಗಿಕ ಕಳ್ಳು ತೆಗೆಯುವುದು ಮತ್ತು ಮಾರುವುದನ್ನು ಬ್ಯಾನ್ ಮಾಡಲಾಗಿದೆ. ಇನ್ನು ಈ ಕ್ಲೋರಲ್ ಹೈಡ್ರೇಟ್ ರಾಸಾಯನಿಕವನ್ನು ಮನುಷ್ಯನ ಬಳಕೆಗೆ ಮಾರಾಟ ಮಾಡುವುದನ್ನು 'ಔಷಧ ಮತ್ತು ಸೌಂದರ್ಯವರ್ಧಕಗಳ ಕಾಯ್ದೆ' ಅಡಿಯಲ್ಲಿ ದೇಶಾದ್ಯಂತ ಸಂಪೂರ್ಣವಾಗಿ ನಿಷೇಧಿಸಲಾಗಿದೆ.

---

### ಬಳ್ಳಾರಿ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಅಭಿಯಾನ

## ಶೇ.97.3 ರಷ್ಟು ಪ್ರಗತಿ: ಡಿಎಚ್‌ಓ ಡಾ.ಯಲ್ಲಾ ರಮೇಶ್ ಬಾಬು

**ಬಳ್ಳಾರಿ,ಜೂ.29.** ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜೂನ್ 28ರ ಪೋಲಿಯೋ ಭಾನುವಾರದಂದು ಬಳ್ಳಾರಿ ಜಿಲ್ಲೆಯಲ್ಲಿ ಮೊದಲ ದಿನವೇ ಶೇಕಡಾ 97.3 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ತಿಳಿಸಿದ್ದಾರೆ.

ಜಿಲ್ಲೆಯ ಬಳ್ಳಾರಿ, ಸಂಡೂರು, ಸಿರುಗುಪ್ಪ, ಕುರುಗೋಡು ಮತ್ತು ಕಂಪ್ಲಿ ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಅಭಿಯಾನದಲ್ಲಿ 5 ವರ್ಷದೊಳಗಿನ ಒಟ್ಟು 1,99,934 ಮಕ್ಕಳ ಗುರಿಯಲ್ಲಿ 1,94,579 ಮಕ್ಕಳಿಗೆ ಯಶಸ್ವಿಯಾಗಿ ಲಸಿಕೆ ಹಾಕಲಾಗಿದೆ. ಉಳಿದಿರುವ 5,355 ಮಕ್ಕಳಿಗೆ ಜುಲೈ 1 ರವರೆಗೆ ನಡೆಯಲಿರುವ ಮನೆ–ಮನೆ ಲಸಿಕಾ ಕಾರ್ಯಕ್ರಮದಲ್ಲಿ ಪೋಲಿಯೋ ಹನಿಗಳನ್ನು ಹಾಕಲಾಗುವುದು ಎಂದು ಅವರು ತಿಳಿಸಿದ್ದಾರೆ.

**ತಾಲ್ಲೂಕುವಾರು ಲಸಿಕಾ ಪ್ರಗತಿ ವಿವರ:** ಬಳ್ಳಾರಿ: 95,879–ಲಸಿಕಾ ಗುರಿ, 91,990–ಸಾಧನೆ(ಮಕ್ಕಳ ಸಂಖ್ಯೆ), ಶೇ.95.9–ಪ್ರಗತಿ.

ಕಂಪ್ಲಿ: 14,627–ಲಸಿಕಾ ಗುರಿ, 14,921–ಸಾಧನೆ(ಮಕ್ಕಳ ಸಂಖ್ಯೆ), ಶೇ.102–ಪ್ರಗತಿ.

ಕುರುಗೋಡು: 17,241–ಲಸಿಕಾ ಗುರಿ, 17,062–ಸಾಧನೆ(ಮಕ್ಕಳ ಸಂಖ್ಯೆ), ಶೇ.99–ಪ್ರಗತಿ.

ಸಂಡೂರು: 35,818–ಲಸಿಕಾ ಗುರಿ, 34,993–ಸಾಧನೆ(ಮಕ್ಕಳ ಸಂಖ್ಯೆ), ಶೇ.98.8–ಪ್ರಗತಿ.

ಸಿರುಗುಪ್ಪ: 36,369–ಲಸಿಕಾ ಗುರಿ, 35,613–ಸಾಧನೆ(ಮಕ್ಕಳ ಸಂಖ್ಯೆ), ಶೇ.97.9–ಪ್ರಗತಿ.

ಒಟ್ಟು: 1,99,934–ಲಸಿಕಾ ಗುರಿ, 1,94,579–ಸಾಧನೆ(ಮಕ್ಕಳ ಸಂಖ್ಯೆ), ಶೇ.97.3–ಪ್ರಗತಿ.

**ಕಂಪ್ಲಿಯಲ್ಲಿ ಗುರಿ ಮೀರಿದ ಸಾಧನೆ:** ವಿಶೇಷವೆಂದರೆ, ಜಿಲ್ಲೆಯ ಕಂಪ್ಲಿ ತಾಲ್ಲೂಕಿನಲ್ಲಿ ನಿಗದಿಪಡಿಸಿದ್ದ ಗುರಿಗಿಂತಲೂ ಹೆಚ್ಚು ಅಂದರೆ ಶೇ.102 ರಷ್ಟು ಮಕ್ಕಳಿಗೆ ಲಸಿಕೆ ನೀಡುವ ಮೂಲಕ ದಾಖಲೆಯ ಸಾಧನೆ ಮಾಡಲಾಗಿದೆ. ಕುರುಗೋಡು ಹಾಗೂ ಸಂಡೂರು ತಾಲ್ಲೂಕುಗಳು ಸಹ ಕ್ರಮವಾಗಿ ಶೇ.99 ಹಾಗೂ ಶೇ. 98.8 ರಷ್ಟು ಪ್ರಗತಿ ಸಾಧಿಸಿ ಮುಂಚೂಣಿಯಲ್ಲಿವೆ.

**ವ್ಯಾಪಕ ಸಿದ್ಧತೆ ಮತ್ತು ತಂಡಗಳ ಕಾರ್ಯವೈಖರಿ:** ಜಿಲ್ಲೆಯಾದ್ಯಂತ ಯಾವುದೇ ಮಗು ಲಸಿಕೆಯಿಂದ ವಂಚಿತವಾಗಬಾರದು ಎಂಬ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ವ್ಯಾಪಕ ಸಿದ್ಧತೆಗಳನ್ನು ಮಾಡಿಕೊಂಡಿತ್ತು. ಜಿಲ್ಲೆಯಲ್ಲಿ 335 ಕ್ಲಿಷ್ಟಕರ ಪ್ರದೇಶಗಳನ್ನು ಗುರುತಿಸಿ, ಅಲ್ಲಿ ಲಸಿಕೆ ಹಾಕಲು 236 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಒಟ್ಟು 977 ಬೂತ್‌ಗಳು



ಹಾಗೂ 615 ಮನೆ ಭೇಟಿ ತಂಡಗಳು ಕಾರ್ಯನಿರ್ವಹಿಸಿದವು. ಸಂತೆ, ಮಾರುಕಟ್ಟೆ, ಬಸ್ ನಿಲ್ದಾಣಗಳಂತಹ ಜನನಿಬಿಡ ಪ್ರದೇಶಗಳಿಗಾಗಿ 50 ತಂಡಗಳನ್ನು, ಹಾಗೂ ಇಟ್ಟಿಗೆ ಭಟ್ಟಿ, ಕಟ್ಟಡ ಕಾಮಗಾರಿ ಪ್ರದೇಶ, ಕಬ್ಬು ಕಡಿಯುವ ಸ್ಥಳ ಮತ್ತು ಕುರಿಹಟ್ಟಿಗಳಂತಹ ವಲಸೆ ಕಾರ್ಮಿಕರ ಪ್ರದೇಶಗಳಿಗಾಗಿ 15 ಸಂಚಾರಿ (ಮೊಬೈಲ್) ತಂಡಗಳನ್ನು ನಿಯೋಜಿಸಲಾಗಿತ್ತು.

ಈ ಬೃಹತ್ ಅಭಿಯಾನದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿಯೊಂದಿಗೆ ನರ್ಸಿಂಗ್ ಕಾಲೇಜು ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಕರು ವ್ಯಾಕ್ಸಿನೇಟರ್‌ಗಳಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಇವರ ಕಾರ್ಯದ ಉಸ್ತುವಾರಿಗಾಗಿ 188 ಮೇಲ್ವಿಚಾರಕರು ಹಾಗೂ ಜಿಲ್ಲಾ ಮಟ್ಟದ ಕಾರ್ಯಕ್ರಮ ಅನುಷ್ಠಾನ ಅಧಿಕಾರಿಗಳು ನೋಡಲ್ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ.

---

## ಕಾವೇರಿ ಒಡಲು ಸೇರುತ್ತಿದೆ ತ್ಯಾಜ್ಯ: ನಿಯಂತ್ರಣವಿಲ್ಲದ ಪ್ರವಾಸೋದ್ಯಮದಿಂದ ನೀರಿನ ಗುಣಮಟ್ಟಕ್ಕೆ ಹಾನಿ– ಪರಿಸರತಜ್ಞರ ಆತಂಕ

**ಮೈಸೂರು, ಜೂ.29:** ಕರ್ನಾಟಕದ ಜೀವನಾಡಿ ಎಂದೇ ಕರೆಯಲಾಗುವ ಕಾವೇರಿ ನದಿ ವ್ಯವಸ್ಥೆ ಪ್ರಸ್ತುತ ಹಿಂದೆಂದೂ ಕಾಣದಂತಹ ಪರಿಸರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಒಂದೆಡೆ ಹವಾಮಾನ ವೈಪರೀತ್ಯ, ದುರ್ಬಲ ಮುಂಗಾರು ಹಾಗೂ ಮಳೆ ಕೊರತೆ ಪರಿಣಾಮವಾಗಿ ಜಲಾಶಯಗಳಲ್ಲಿ ನೀರಿನ ಸಂಗ್ರಹಣೆಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದ್ದರೆ, ಮತ್ತೊಂದೆಡೆ ಸಂಸ್ಕರಿಸದ ಒಳಚರಂಡಿ ನೀರು, ಕೈಗಾರಿಕಾ ತ್ಯಾಜ್ಯ, ಪ್ಲಾಸ್ಟಿಕ್ ಕಸ ಹಾಗೂ ನಿಯಂತ್ರಣವಿಲ್ಲದ ಪ್ರವಾಸೋದ್ಯಮದಿಂದ ನದಿ ಮತ್ತು ಜಲಾಶಯಗಳ ನೀರಿನ ಗುಣಮಟ್ಟ ಹದಗೆಡುತ್ತಿದೆ. ಈ ಎರಡು ಸಮಸ್ಯೆಗಳು ಮುಂದಿನ ದಿನಗಳಲ್ಲಿ ಕುಡಿಯುವ ನೀರು, ಕೃಷಿ, ಜೈವಿಕ ವೈವಿಧ್ಯ, ಸಾರ್ವಜನಿಕ ಆರೋಗ್ಯ ಹಾಗೂ ರಾಜ್ಯದ ಆರ್ಥಿಕತೆಯ ಮೇಲೆಯೂ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಪರಿಸರತಜ್ಞರು ಎಚ್ಚರಿಸಿದ್ದಾರೆ.

ಕಾವೇರಿ ಹಾಗೂ ಅದರ ಪ್ರಮುಖ ಉಪನದಿಯಾದ ಕಬಿನಿ ನದಿ ವ್ಯವಸ್ಥೆಯು ದಕ್ಷಿಣ ಕರ್ನಾಟಕದ ಲಕ್ಷಾಂತರ ಜನರ ಜೀವನಾಧಾರವಾಗಿದ್ದು, ಈ ನದಿಗಳ ಆರೋಗ್ಯವೇ ರಾಜ್ಯದ ನೀರಿನ ಭದ್ರತೆಯನ್ನು ನಿರ್ಧರಿಸುತ್ತದೆ.ಮೈಸೂರು ಜಿಲ್ಲೆಯ ಕಬಿನಿ ಜಲಾಶಯದ ಹಿನ್ನೀರು ಪ್ರದೇಶವು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಿರುವ ದೇಶದ ಪ್ರಮುಖ ಪರಿಸರ ಪ್ರವಾಸಿ ತಾಣಗಳಲ್ಲಿ ಒಂದಾಗಿದೆ.

ಪ್ರತಿವರ್ಷ ಸಾವಿರಾರು ದೇಶೀಯ ಹಾಗೂ ವಿದೇಶಿ ಪ್ರವಾಸಿಗರು ಇಲ್ಲಿ ಭೇಟಿ ನೀಡುತ್ತಾರೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಈ ಪ್ರದೇಶದಲ್ಲಿ ನಿಯಂತ್ರಣವಿಲ್ಲದೆ ಬೆಳೆಯುತ್ತಿರುವ ರೆಸಾರ್ಟ್‌ಗಳು, ಹೋಂಸ್ಟೇಗಳು, ಬಾರ್‌ಗಳು ಮತ್ತು ಹೋಟೆಲ್‌ಗಳಿಂದ ಪರಿಸರಕ್ಕೆ ಅಪಾಯ ಹೆಚ್ಚುತ್ತಿದೆ ಎಂಬ ಆರೋಪಗಳು ಕೇಳಿಬರುತ್ತಿವೆ.

20ರಂದು ಕಬಿನಿ ಅಣೆಕಟ್ಟಿನ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪೊಲೀಸ್ ಇಲಾಖೆಗೆ ಪತ್ರ ಬರೆದು, ಕೆಲವು ಪ್ರವಾಸಿ ವಸತಿ ಕೇಂದ್ರಗಳು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸದೆ ಘನ ಹಾಗೂ ದ್ರವ ತ್ಯಾಜ್ಯವನ್ನು ಜಲಾಶಯದ ಹಿನ್ನೀರಿಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ ಸುರಿಯುತ್ತಿರುವ ಬಗ್ಗೆ ತನಿಖೆ ನಡೆಸುವಂತೆ ಮನವಿ ಮಾಡಿದ್ದಾರೆ.ಅಧಿಕಾರಿಗಳು ಎಲ್ಲ ರೆಸಾರ್ಟ್‌ಗಳು ಮತ್ತು ಹೋಂಸ್ಟೇಗಳಲ್ಲಿ ಸಮರ್ಪಕ ತ್ಯಾಜ್ಯ ನಿರ್ವಹಣಾ ವ್ಯವಸ್ಥೆ



ಹಾಗೂ ಒಳಚರಂಡಿ ಶುದ್ಧೀಕರಣ ಘಟಕಗಳು ಕಾರ್ಯನಿರ್ವಹಿಸುತ್ತಿವೆಯೇ ಎಂಬುದನ್ನು ಪರಿಶೀಲಿಸಿ, ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ.

ಕಬಿನಿ ಜಲಾಶಯವು ಕೇವಲ ಕುಡಿಯುವ ನೀರಿನ ಮೂಲವಲ್ಲ. ಇದು ಮೀನುಗಳು, ಮೊಸಳೆಗಳು, ಆಮೆಗಳು, ವಲಸೆ ಪಕ್ಷಿಗಳು ಹಾಗೂ ಅನೇಕ ವನ್ಯಜೀವಿಗಳಿಗೆ ಜೀವಾಧಾರವಾಗಿದೆ. ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶಗಳ ವನ್ಯಜೀವಿಗಳಿಗೂ ಈ ಜಲಾಶಯವೇ ಪ್ರಮುಖ ನೀರಿನ ಮೂಲವಾಗಿದೆ.

ಪ್ಲಾಸ್ಟಿಕ್ ತ್ಯಾಜ್ಯ, ಆಹಾರ ಕಸ ಹಾಗೂ ಸಂಸ್ಕರಿಸದ ಒಳಚರಂಡಿ ನೀರು ಜಲಾಶಯಕ್ಕೆ ಸೇರುವುದರಿಂದ ನೀರಿನಲ್ಲಿನ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತದೆ. ಇದರ ಪರಿಣಾಮವಾಗಿ ಮೀನುಗಳ ಸಂತಾನೋತ್ಪತ್ತಿ ಕುಗ್ಗುವುದು, ಜಲಚರ ಜೀವಿಗಳ ಸಾವು ಹೆಚ್ಚುವುದು ಹಾಗೂ ಪರಿಸರ ಸಮತೋಲನ ಹದಗೆಡುವ ಸಾಧ್ಯತೆ ಇದೆ.ಮಂಡ್ಯ ಜಿಲ್ಲೆಯ ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯವೂ ಇದೇ ರೀತಿಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ಜಲಾಶಯವು ಮೈಸೂರು, ಮಂಡ್ಯ, ಬೆಂಗಳೂರು ಸೇರಿದಂತೆ ಅನೇಕ ನಗರಗಳಿಗೆ ಕುಡಿಯುವ ನೀರು ಒದಗಿಸುವ ಪ್ರಮುಖ ಮೂಲವಾಗಿದೆ. ಜೊತೆಗೆ ಲಕ್ಷಾಂತರ ಎಕರೆ ಕೃಷಿಭೂಮಿಗೆ ನೀರಾವರಿ ನೀಡುವ ಜೀವನಾಡಿಯಾಗಿದೆ.

ತಜ್ಞರು ಸೂಚಿಸುವಂತೆ, ಕಾವೇರಿ ಜಲಾನಯನ ಪ್ರದೇಶವನ್ನು ರಕ್ಷಿಸಲು ಸಮಗ್ರ ನದಿ ನಿರ್ವಹಣಾ ಯೋಜನೆ ಅಗತ್ಯವಾಗಿದೆ. ಇದಕ್ಕಾಗಿ ಸಂಸ್ಕರಿಸದ ಒಳಚರಂಡಿ ನೀರಿನ ಸಂಪೂರ್ಣ ನಿಯಂತ್ರಣ, ಮಾಲಿನ್ಯ ನಿಯಂತ್ರಣ ಕಾನೂನುಗಳ ಕಟ್ಟುನಿಟ್ಟಿನ ಜಾರಿ, ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ ಪ್ರವಾಸೋದ್ಯಮಕ್ಕೆ ಮಿತಿ, ಅರಣ್ಯ ಸಂರಕ್ಷಣೆ, ಮಳೆನೀರು ಸಂಗ್ರಹಣೆ ಹಾಗೂ ಸಾರ್ವಜನಿಕರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯವಾಗಿದೆ. ಆದ್ದರಿಂದ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಕೈಗಾರಿಕೆಗಳು, ಪ್ರವಾಸೋದ್ಯಮ ಕ್ಷೇತ್ರ ಹಾಗೂ ಸಾರ್ವಜನಿಕರು ಒಗ್ಗೂಡಿ ಕರ್ನಾಟಕದ ಜೀವನಾಡಿಯಾದ ಕಾವೇರಿಯನ್ನು ಉಳಿಸುವ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ.

---

## ಬಸವಾದಿ ಶರಣರ ಹಿಂದೂ ಸಮಾವೇಶ: ಹಿಂದೂ ಧರ್ಮ ಒಪ್ಪದವರಿಗೆ ಬುದ್ಧಿ ಇಲ್ಲ– ತಡೋಳಾ ರಾಜೇಶ್ವರ ಶಿವಾಚಾರ್ಯ

**ಬಸವಕಲ್ಯಾಣ, ಜೂ. 29:** ಹಿಂದೂ ಧರ್ಮವೇ ಇಲ್ಲ ಎನ್ನುವವರಿಗೆ ಬುದ್ಧಿ ಇಲ್ಲ. ಮನೆಯಲ್ಲಿನ ದೇವರು ತೆಗಿರಿ, ಗುಡಿ ಕಟ್ಟಬೇಡಿ ಎನ್ನುವವರೇ ಲಕ್ಷ ದೇಣಿಗೆ ಕೊಟ್ಟರೆ ದೇವಸ್ಥಾನದ ಉದ್ಘಾಟನೆಗೆ ಓಡುತ್ತ ಬರುತ್ತಾರೆ ಎಂದು ಮಠಾಧೀಶರ ಒಕ್ಕೂಟದ ಜಿಲ್ಲಾಕ್ಷ ತಡೋಳಾ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ಬಸವಣ್ಣನವರು ದಯವೇ ಧರ್ಮದ ಮೂಲ ಎಂದರು. ಹಾಗೆಂದಮೇಲೆ ಎಲ್ಲರ ಬಗ್ಗೆಯೂ ಪ್ರೀತಿ ಇರಬೇಕಲ್ಲವೇ? ಬಸವಣ್ಣನವರು ಯಾರೊಬ್ಬರ ಆಸ್ತಿ ಅಲ್ಲವಲ್ಲ. ಆದರೂ, ಕೆಲವರು ಅವರನ್ನು ಖರೀದಿಸಿದಂತೆ ವರ್ತಿಸುತ್ತಾರೆ. ಗುಡಿಗಳಿಗೆ ವಿರೋಧಿಸಿ ಮಠದಲ್ಲಿ ದೊಡ್ಡ ಸಮಾಧಿ ಕಟ್ಟಿ ವರ್ಷಕ್ಕೆ ನಾಲ್ಕು ಸಲ ದೇಣಿಗೆ ಸಂಗ್ರಹಿಸಿ ಕಾರ್ಯಕ್ರಮ ಮಾಡುತ್ತಾರೆ. ನಾಗರ ಪಂಚಮಿಗೆ ಬಸವ ಪಂಚಮಿ ಎನ್ನುತ್ತಾರೆ. ಗಣೇಶ ಹಬ್ಬ ವಿರೋಧಿಸುತ್ತಾರೆ. ಹೀಗೆ ಅಧ್ಯಯನ, ಸಂಶೋಧನೆ ಇಲ್ಲದೆ ಊಹಾಪೋಹಗಳ ಮಾತನಾಡುವವರನ್ನು ನಂಬಬಾರದು ಎಂದರು.



ಬಸವಕಲ್ಯಾಣ ಬಸವಣ್ಣನವರ ಕರ್ಮಭೂಮಿ. ಅವರ ಅನುಭವ ಮಂಟಪವಿರುವುದು ಇಲ್ಲೇ. ಅದನ್ನು ವಶಪಡಿಸಿಕೊಂಡು ಪೀರ್ ಪಾಷಾ ದರ್ಗಾ ಮಾಡಿಕೊಂಡಿದ್ದರೆ. ಮೂಲ ಅನುಭವ ಮಂಟಪ ವಶಕ್ಕೆ ಪಡೆಯುವ ತಾಕತ್ತು ಈ ಬಸವ ಅನುಯಾಯಿ ಎಂದು ಹೇಳಿಕೊಳ್ಳುವವರಿಗಿಲ್ಲ. ಬಸವಣ್ಣನವರ ಪರುಷ ಕಟ್ಟೆಗೆ ರೂ.32 ಕೋಟಿ ಮಂಜೂರಾದರೂ 35 ಪೈಸೆಯ ಕೆಲಸವಾಗದೆ ಇನ್ನೂ ತಗಡಿನ ಶೆಡ್‌ನಲ್ಲಿಯೇ ಕಟ್ಟೆ ಇದೆ. ದೇವರನ್ನು ನಂಬದವರು ಲಿಂಗಾಯತ 'ಎ' ಗುಂಪಿನವರಾದರೆ, ಧರ್ಮದ ಆಚರಣೆ ಮಾಡುವವರು ಲಿಂಗಾಯತ 'ಬಿ' ಗುಂಪಿನವರಾ ಗಿದ್ದಾರೆ. ಪರಸ್ಪರರ ಮೇಲೆ ಯಾರೂ ತಮ್ಮ ವಿಚಾರಗಳನ್ನು ಹೇರಲು ಹೋಗಬಾರದು ಎಂದರು.

ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, 'ವಾಕ್ ಸ್ವಾತಂತ್ರ್ಯಕ್ಕೆ ಎಲ್ಲಿಯೂ ಧಕ್ಕೆ ಬಂದಿಲ್ಲ. ಆದರೆ, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರದಲ್ಲಿ ಕನ್ಹೇರಿ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರಿಗೆ ಕಾರ್ಯಕ್ರಮದಲ್ಲಿ ಮಾತನಾಡದಂತೆ ಆದೇಶ ಹೊರಡಿಸುವ ಹುನ್ನಾರ ಮಾಡಲಾಗಿದೆ. ರಾಜ್ಯ ಸರ್ಕಾರ ಅವಹೇಳನಕಾರಿ ಪೋಸ್ಟ್‌ಗಳನ್ನು ನಿರ್ಬಂಧಿಸುವುದಾಗಿ ಹೇಳಿದ್ದರೂ, ಶ್ರೀರಾಮ ಮತ್ತಿತರೆ ದೇವರನ್ನು ನಿಂದಿಸುವವರ ಮೇಲೆ ಹಾಗೂ ಕನೇರಿ ಸ್ವಾಮೀಜಿಯವರಿಗೆ ಟೀಕೆ ಮಾಡುವವರನ್ನು ಏನೂ ಮಾಡಿಲ್ಲ. ಹೀಗಾಗಿ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿಯಾಗಿದೆ. ಹಿಂದೂಗಳನ್ನು ಕೆಣಕಬೇಡಿ, ಕೆಲವರು ಸಮಾವೇಶ ವಿರೋಧಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿನ ಫ್ಲೈಓವರ್ ಕೆಳಗಡೆ ಪ್ರತಿಭಟನೆ ಮಾಡಿದ್ದು, ಅವರು ಇಂದಿನಿಂದ ತಾಲಿಬಾನಿ ಅಲ್ಲ. ಫ್ಲೈಓವರ್ ಕಂಪನಿ ಎಂದು ಕರೆಯಬೇಕಾಗುತ್ತದೆ ಎಂದರು.

---

## ಜೆ.ಎಸ್.ಆಂಜನೇಯುಲು ಹುಟ್ಟುಹಬ್ಬ: ಶುಭಕೋರಿದ ಗಣ್ಯರು



**ಬಳ್ಳಾರಿ ಜೂ 29.** ಬಳ್ಳಾರಿಯ ಬುಡಾ ಅಧ್ಯಕ್ಷರಾದ ಜೆ.ಎಸ್. ಆಂಜನೇಯುಲು ಅವರ ಜನ್ಮದಿನದ ಪ್ರಯುಕ್ತ ಅವರ ಸ್ವಗೃಹದಲ್ಲಿ ಕೇಕ್ ಕತ್ತರಿಸಿ ಶುಭ ಕೋರಲಾಯಿತು.

ಈ ಸಂದರ್ಭದಲ್ಲಿ ಬಳ್ಳಾರಿ ಮಹಾನಗರ ಪಾಲಿಕೆಯ ಮಹಾಪೌರರು ಗಾದೆಪ್ಪ, ಕೆಪಿಸಿಸಿ ವಕ್ತಾರರು ವೆಂಕಟೇಶ್ ಹೆಗಡೆ, ಡಿಸಿಸಿ ಕಾರ್ಯಾಧ್ಯಕ್ಷರು ಬೋಯಪಾಟಿ ವಿಷ್ಣುವರ್ಧನ, ಉಪಾಧ್ಯಕ್ಷರು ಕೆ. ಶ್ರೀನಿವಾಸಲು, ಡಿಸಿಸಿ ಕಾರ್ಯದರ್ಶಿ ಶೋಭಾ ಕಾಳಿಂಗ, ಕಾಂಗ್ರೆಸ್ ಮುಖಂಡರು ವೀರೇಂದ್ರ ಕುಮಾರ್, ಜುಬೇರ್ ಬಾಷಾ, ಬಳ್ಳಾರಿ ಜಿಲ್ಲಾ ಡಿ.ಕೆ. ಶಿವಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರು ಸಂತೋಷ್ ಸ್ವಾಮಿ, ಚಲ್ಲಾ ರಮೇಶ್, ಕಾರ್ತಿಕ್ ಹಾಗೂ ಕಾರ್ಯಕರ್ತರು ಹಾಜರಿದ್ದರು.

# ಜೆಡಿಎಸ್ ನಾಯಕರ ಬಗ್ಗೆ ನಾಲಿಗೆ ಬಿಗಿಹಿಡಿದು ಮಾತಾಡಿ: ಪ್ರದೀಪ್ ಈಶ್ವರ್‌ಗೆ ತಾಯಣ್ಣ ಎಚ್ಚರಿಕೆ

**ಬಳ್ಳಾರಿ ಜೂ 29:** ಮಾಜಿ ಮುಖ್ಯಮಂತ್ರಿಗಳು, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಶಾಸಕ ಪ್ರದೀಪ್ ಈಶ್ವರ್ ಮನಬಂದಂತೆ ಮಾತನಾಡುತ್ತಿರುವುದು ಸರಿಯಲ್ಲ, ಸೆಡ್ಡು ಹೊಡೆಯುವುದು, ತೊಡೆ ತಟ್ಟುವುದು, ಮೀಸೆ ತಿರುವುದು ಒಬ್ಬ ಶಾಸಕರ ಸಂಸ್ಕೃತಿಯಲ್ಲ, ನಮ್ಮ ನಾಯಕರ ಬಗ್ಗೆ ನಾಲಿಗೆ ಹರಿಬಿಡುವುದನ್ನು ಕೂಡಲೇ ನಿಲ್ಲಿಸಬೇಕು, ಮುಂದುವರೆದರೆ ಹೋರಾಟದ ಸ್ವರೂಪ ಬದಲಾಗಲಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಎಚ್ಚರಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿದ ಅವರು, ನಮ್ಮ ಕುಮಾರಸ್ವಾಮಿ ಅವರು ಇಲ್ಲಿವರೆಗೆ ರಾಜಕಾರಣದಲ್ಲಿ ಹಾಲಿನಸ್ಟೇ ಶುದ್ಧವಾಗಿದ್ದಾರೆ, ಇಂತಹ ನಮ್ಮ ನಾಯಕರ ಬಗ್ಗೆ ಶಾಸಕ ಪ್ರದೀಪ್ ಈಶ್ವರ್ ಕುಮಾರಣ್ಣ ಅವರ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿರುವುದು ಸರಿಯಲ್ಲ, ಕುಮಾರಣ್ಣ ನನ್ನ ಏನೂ ಮಾಡೋಕೆ ಆಗೋಲ್ಲ, ಒಂದು ಕೂದಲು ಕಿತ್ತುಕೊಳ್ಳೋಕೆ ಆಗೋಲ್ಲ, ಹೆದರುವ ಮಾತೇ ಇಲ್ಲ ಅಂತಾರೆ, ನಮ್ಮ ಕುಮಾರಣ್ಣ ಅವರು ಒಂದು ಕರೆ ಕೊಟ್ಟರೆ, ಅದರ ಕಥೆನೇ ಬೇರೆಯಾಗಲಿದೆ, ಇನ್ನಾದರೂ ಪ್ರದೀಪ್ ಈಶ್ವರ್ ನಮ್ಮ ನಾಯಕರ ಬಗ್ಗೆ ಮಾತನಾಡುವ ಮುನ್ನ ಆಲೋಚಿಸಿ ಮಾತನಾಡಬೇಕು, ನಾಲಿಗೆ ಹರಿಬಿಟ್ಟರೆ, ರಾಜ್ಯದ ನಮ್ಮ ಕಾರ್ಯಕರ್ತರೇ ಅವರಿಗೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಎಚ್ಚರಿಸಿದರು.

ಎಚ್. ಡಿ.ಕುಮಾರಸ್ವಾಮಿ ಅವರು ಒಬ್ಬ ಮುಖ್ಯಮಂತ್ರಿಯಾಗಿದ್ದವರು, ಸದ್ಯ ಕೇಂದ್ರ



ಸಚಿವರಿದ್ದಾರೆ, ಅವರ ಬಗ್ಗೆ ಹೇಗೆ ಮಾತನಾಡಬೇಕು ಎನ್ನುವ ಸೌಜನ್ಯವೂ ಅವರಲ್ಲಿಲ್ಲ, ಪ್ರದೀಪ್ ಈಶ್ವರ್ ಒಬ್ಬ ಶಾಸಕರಾ ಎನ್ನುವ ಅನುಮಾನ ಕ್ಷೇತ್ರದ ಜನರಿಗೆ ಹುಟ್ಟಿದೆ, ಇದು ಬಹುದೊಡ್ಡ ದುರಂತ. ಉದ್ದಟತನದಿಂದ ಮಾತನಾಡುವುದು, ನಿಂದನೆ ಮಾಡುವುದು, ಸಂಸ್ಕೃತಿಯಲ್ಲ, ಕ್ಷೇತ್ರಕ್ಕೆ ಇಂತಹ ಶಾಸಕರು ಆಯ್ಕೆಯಾಗಿರುವುದು ದೊಡ್ಡ ದುರಂತ, ಬಹಿರಂಗವಾಗಿ ತೋಡೇ, ತೋಳು ತಟ್ಟುವುದು, ಶೆಡ್ಡು ಹೊಡೆಯುವರನ್ನು ಶಾಸಕರು ಅನ್ನಬೇಕಾ, ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಇಂತವರಿಗೆ ಬರುವ ದಿನಗಳಲ್ಲಿ ಜನರೇ ತಕ್ಕ ಪಾಠ ಕಲಿಸಲಿದ್ದಾರೆ. ಕುಮಾರಣ್ಣ ಅವರ ಬಗ್ಗೆ ಅವಹೇಳನ ಕಾರಿಯಾಗಿ ಹೇಳಿಕೆ ನೀಡಿದ, ಮಾತನಾಡಿದ ಪ್ರದೀಪ್ ಈಶ್ವರ್ ಕೂಡಲೇ ಬಹಿರಂಗ ಕ್ಷಮೆಯಾಚಿಸಬೇಕು, ನಿರ್ಲಕ್ಷ್ಯ ವಹಿಸಿದರೆ ಬರುವ ದಿನಗಳಲ್ಲಿ ಜೆಡಿಎಸ್ ವತಿಯಿಂದ ಪ್ರತಿಭಟನೆಯ ಸ್ವರೂಪ, ಹೋರಾಟ ಬದಲಾಗಲಿದೆ ಎಂದು ಎಚ್ಚರಿಸಿದ್ದಾರೆ.



ಚಿಕ್ಕಮಗಳೂರಿನಲ್ಲಿ ಜಿಲ್ಲಾಡಳಿತ ಸೋಮವಾರ ಆಯೋಜಿಸಿದ್ದ ಎಸ್‌ಐಆರ್ ಕುರಿತು ಜಾಗೃತಿ ಜಾಥಾದಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು..

### ರಾಮಮಂದಿರ ದೇಣಿಗೆ ಅಕ್ರಮ

## ಶಾಸಕ ಪ್ರಭು ಚವ್ಹಾಣ್ ವಿರುದ್ಧ ಎಸ್‌ಐಟಿಗೆ ದೂರು

**ಬೀದರ್, ಜೂ. 29:** ಅಯೋಧ್ಯೆಯ ಶ್ರೀರಾಮ ಮಂದಿರದ ದೇಣಿಗೆಯಲ್ಲಿ ನಡೆದಿದೆ ಎನ್ನಲಾದ ಹಣದ ಅಕ್ರಮ ಹಾಗೂ ಲೂಟಿಯ ಆರೋಪಗಳ ಸರಣಿ ಇದೀಗ ಕರ್ನಾಟಕದ ಗಡಿ ಜಿಲ್ಲೆ ಬೀದರ್‌ಗೂ ವ್ಯಾಪಿಸಿದೆ.

ಔರಾದ್ ತಾಲೂಕಿನ ಚಾಂದೂರಿ ಗ್ರಾಮದ ನಿವಾಸಿ ದೀಪಕ್ ಪಾಟೀಲ್ ಎಂಬುವವರು ಔರಾದ್ ಶಾಸಕ ಹಾಗೂ ಮಾಜಿ ಸಚಿವ ಪ್ರಭು ಚವಾಣ್ ಸೇರಿದಂತೆ ಮೂವರ ವಿರುದ್ಧ ಅಯೋಧ್ಯೆ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡಕ್ಕೆ ದೂರು ದಾಖಲಿಸುವ ಮೂಲಕ ಸಂಚಲನ ಮೂಡಿಸಿದ್ದಾರೆ.

ಲಖನೌ ವಿಭಾಗೀಯ ಆಯುಕ್ತ ವಿಜಯ್ ವಿಶ್ವಾಸ್ ಪಂತ್ ಅವರಿಗೆ ದೀಪಕ್ ಪಾಟೀಲ್ ಅವರು ಅಂಚೆ ಮೂಲಕ ಈ ದೂರನ್ನು ರವಾನಿಸಿದ್ದಾರೆನ್ನಲಾಗಿದೆ. ದೂರುದಾರ ದೀಪಕ್ ಪಾಟೀಲ್ ಅವರು ನೀಡಿರುವ ದೂರಿನಲ್ಲಿ ಗಂಭೀರ ವಿಚಾರಗಳನ್ನು ಪ್ರಸ್ತಾಪಿಸ ಲಾಗಿದೆ.

ಹಿಂದೆ ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣದ ಕಾರ್ಯ ಪ್ರಾರಂಭವಾದ ಸಮಯದಲ್ಲಿ, ಆರ್‌ಎಸ್‌ಎಸ್ ಪ್ರಮುಖರಾದ ಗೋಪಾಲಜಿ ಹಾಗೂ ಔರಾದ್ ವಿಧಾನಸಭಾ ಕ್ಷೇತ್ರದ ಬಿಜೆಪಿ



ಶಾಸಕ ಪ್ರಭು ಚವಾಣ್ ಇವರಿಬ್ಬರೂ ಜೊತೆಗೂಡಿ ಔರಾದ್ ತಾಲೂಕಿನ ಪ್ರಭಾವಿ ಗುತ್ತಿಗೆದಾರರಿಂದ ರಾಮ ಮಂದಿರದ ಹೆಸರಿನಲ್ಲಿ ಲೆಕ್ಕಕ್ಕೆ ಸಿಗದ ಕೋಟ್ಯಂತರ ರೂಪಾಯಿ ದೇಣಿಗೆ ಮೊತ್ತವನ್ನು ಸಂಗ್ರಹಿಸಿದ್ದರು. ಆದರೆ, ಆ ಹಣವನ್ನು ಅಧಿಕೃತವಾಗಿ ಟ್ರಸ್ಟ್‌ಗೆ ತಲುಪಿಸದೆ ಇಬ್ಬರೂ ಸೇರಿ ಸಂಪೂರ್ಣವಾಗಿ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ.

ಈ ಹಣದ ಅಕ್ರಮ ದುರುಪಯೋಗದ ಜಾಲದಲ್ಲಿ ಕೇವಲ ರಾಜಕಾರಣಿಗಳಷ್ಟೇ ಅಲ್ಲದೆ ಉದ್ಯಮಿಗಳೂ ಭಾಗಿಯಾಗಿದ್ದಾರೆ ಎಂದು ದೂರಿನಲ್ಲಿ ವಿವರಿಸಲಾಗಿದೆ. ಶಾಸಕ ಪ್ರಭು ಚವ್ಹಾಣ ಅವರೊಂದಿಗೆ ಬೀದರ್ ಮೂಲದ ಪ್ರಮುಖ ರಿಯಲ್ ಎಸ್ಟೇಟ್ ಉದ್ಯಮಿ ಸತೀಶ್ ನಾವಬಾಡೆ ಎಂಬುವವರು ಕೈಜೋಡಿಸಿದ್ದು, ರಾಮಮಂದಿರದ ಪವಿತ್ರ ನಿಧಿಯನ್ನು ಇವರೆಲ್ಲರೂ ಸೇರಿ ಲೂಟಿ ಹೊಡೆದಿದ್ದಾರೆ ಎಂಬ ಬಲವಾದ ಅನುಮಾನ ವ್ಯಕ್ತಪಡಿಸ ಲಾಗಿದೆ.

ದೇಶ-ವಿದೇಶಗಳ ಶ್ರದ್ಧಾಳುಗಳು ಭಕ್ತಿಯಿಂದ ನೀಡಿದ ಶ್ರೀರಾಮನ ದೇಣಿಗೆಯ ಹಣವನ್ನು ಈ ಮೂವರು ವ್ಯಕ್ತಿಗಳು ಸೇರಿಕೊಂಡು ದುರುಪಯೋಗ ಪಡಿಸಿಕೊಂಡಿದ್ದಾರೆ. ಈ ಮೂವರ ವಿರುದ್ಧ ಎಸ್‌ಐಟಿ ಅಧಿಕಾರಿಗಳು ಸಂಪೂರ್ಣ ತನಿಖೆ ನಡೆಸಿ, ಪವಿತ್ರ ಹಣ ಲೂಟಿ ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಚಾಂದೋರಿಯ ದೀಪಕ್ ಪಾಟೀಲ್ ಅವರು ಉತ್ತರ ಪ್ರದೇಶದ ಉನ್ನತ ತನಿಖಾಧಿಕಾರಿಗಳಿಗೆ ಆಗ್ರಹಿಸಿದ್ದಾರೆ.

ಇದೇ ದೀಪಕ್ ಪಾಟೀಲ್ ಈ ಹಿಂದೆ ಶಾಸಕ ಪ್ರಭು ಚವ್ಹಾಣ ಅವರು ನಕಲಿ ಜಾತಿ ಹೆಸರಿನಲ್ಲಿ ಚುನಾವಣೆಗೆ ಸ್ಪರ್ಧಿಸಿ ಗೆದ್ದಿದ್ದಾರೆ. ಅವರ ಶಾಸಕತ್ವವನ್ನು ರದ್ದು ಪಡಿಸುವಂತೆ ಕೋರ್ಟಿಗೆ ಹೋಗಿದ್ದರು. ಕೋರ್ಟ್ ಅವರಿಗೆ ಛೀಮಾರಿ ಹಾಕಿ ದೂರನ್ನು ತಳ್ಳಿಹಾಕಿದ್ದು, ಇದೀಗ ಅಯೋಧ್ಯೆ ರಾಮಮಂದಿರದ ದೇಣಿಗೆ ಸಂಗ್ರಹದ ಹೆಸರಿನಲ್ಲಿ ದೀಪಕ್ ಪಾಟೀಲ್ ದೂರು ದಾಖಲಿಸಿದ್ದಾರೆ.

## ಭಗ್ನಪ್ರೇಮಿ ಆತ್ಮಹತ್ಯೆ: ನಾಡಬಾಂಬ್ ಸಿಕ್ಕಿದ್ದೆಲ್ಲಿ? ಪೋಲೀಸರಿಗೆ ಶುರುವಾಯ್ತು ಚಿಂತೆ

**ತುಮಕೂರು, ಜೂ.29:** ಭಗ್ನ ಪ್ರೇಮಿಯೊಬ್ಬ ಬಾಂಬ್ ಸ್ಫೋಟಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ದಿನೇದಿನೇ ತಿರುವು ಪಡೆದುಕೊಳ್ಳುತ್ತಿದ್ದು, ನಾಡಬಾಂಬ್ ಸಿಕ್ಕಿದ್ದು ಎಲ್ಲಿ ಎನ್ನುವ ಚಿಂತೆ ಕಳ್ಳಂಬೆಳ್ಳ ಠಾಣೆ ಪೊಲೀಸರಿಗೆ ಶುರುವಾಗಿದೆ.

ಆತ್ಮಹತ್ಯೆ ಮಾಡಿಕೊಂಡಿದ್ದ ನಾಗೇಂದ್ರನ ಪಾರ್ಥಿವ ಶರೀರ ಊರು ಸೇರಿದೆ. ಅತ್ತ ಪ್ರಿಯಕರನಿಂದ ದಾಳಿಗೆ ಒಳಗಾಗಿದ್ದ ಪ್ರಿಯತಮೆ ರಮ್ಯಾ ಚಿಕಿತ್ಸೆ ಪಡೆದು ಮನೆ ಸೇರಿದ್ದಾಳೆ. ಈ ಮಧ್ಯೆ ಪೊಲೀಸರು ನಾಡಬಾಂಬ್ ಮೂಲ ಬೆನ್ನತ್ತಿದ್ದಾರೆ.

ಭಗ್ನ ಪ್ರೇಮಿಯ ಆತ್ಮಾಹುತಿ ಪ್ರಕರಣ ಸಂಬಂಧಿಸಿದಂತೆ ಮತ್ತಷ್ಟು ಅಂಶಗಳು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ. ರಮ್ಯಾಳನ್ನು ಪ್ರೀತಿಸುತ್ತಿದ್ದ ನಾಗೇಂದ್ರ ಪಕ್ಕಾ ಪ್ಲ್ಯಾನ್ ಮಾಡಿಕೊಂಡೇ ಬೆಂಗಳೂರಿಗೆ ಹೋಗಿದ್ದಾನೆ. ರಮ್ಯಾ ತನ್ನಿಂದ ದೂರ ಆಗುತ್ತಾಳೆ ಎಂದು ನೊಂದ ನಾಗೇಂದ್ರ ಬಾಂಬ್ ಸ್ಫೋಟಿಸಿಕೊಂಡು ಇಬ್ಬರ ಪ್ರಾಣಹೋಗಲೆಂದೇ ಪ್ರಯತ್ನಿಸಿದ್ದ.ಆದರೆ ಪ್ರಿಯತಮೆ ಬಚಾವ್ ಆದಳು. ಈತ ಮಾತ್ರ ಬಾಂಬಿನ ಬೆಂಕಿಯಲ್ಲಿ ಬೆಂದು ಹೋದ. ಈ ದುರಂತಕ್ಕೆ ಕಾರಣವಾಗಿದ್ದು ನಾಗೇಂದ್ರ ತಂದ ಆ ಮೂರು ಬಾಂಬ್. ನಾಗೇಂದ್ರನ ಬಳಿ ಬಾಂಬ್ ಇಲ್ಲದೇ ಇದ್ದರೆ ಆತ ಬದುಕಿರುತಿದ್ದ. ಮತ್ತೇ ಈ ಘಟನೆಯೇ ನಡೆಯುತ್ತಿರಲಿಲ್ಲ.

ನಾಗೇಂದ್ರ ಜೂ.25ರಂದೇ ಬೆಂಗಳೂರಿಗೆ ಹೋಗಿದ್ದಾನೆ. ರಮ್ಯಾಳ ರೂಮಿಗೆ ಹೋಗಿ ಮದುವೆ ಆಗುವಂತೆ ಪೀಡಿಸಿದ್ದಾನೆ. ಒಂದು ವೇಳೆ ಮದುವೆ ಆಗದೇ ಇದ್ದರೆ ಇಬ್ಬರೂ ಜೀವ ಬಿಡೋಣ ಅಂದಿದ್ದನಂತೆ. ನಿನ್ನ ಸಾಯಿಸಿ ನಾನೂ ಸಾಯ್ತಿನಿ ಎಂದು ಬೆದರಿಕೆ ಹಾಕಿದ್ದ. ಇದಕ್ಕೆಲ್ಲ ರಮ್ಯಾ ಸೊಪ್ಪು ಹಾಕದಿದ್ದಾಗ ಮತ್ತೇ ಅಂಕೋಲಾಕ್ಕೆ ಹೋಗಿ 27ನೇ ತಾರೀಕಿನಂದು ಮೂರು ನಾಡಬಾಂಬ್ ತಂದಿದ್ದ. ಮೂರರಲ್ಲಿ ಎರಡು ಸ್ಫೋಟಗೊಂಡಿತ್ತು ಎನ್ನುವುದು ತನಿಖೆಯಲ್ಲಿ ಗೊತ್ತಾಗಿದೆ. ಜೀವಂತವಾಗಿದ್ದ ಇನ್ನೊಂದು ಬಾಂಬನ್ನು ಪೊಲೀಸರು ನಿಷ್ಕ್ರಿಯಗೊಳಿಸಿದ್ದಾರೆ. ಹಾಗಾದರೆ ಈ ಭಯಾನಕ ನಾಡಬಾಂಬ್ ನಾಗೇಂದ್ರನಿಗೆ ಸಿಕ್ಕಿದಾದರೂ ಹೇಗೆ ಅನ್ನೋ ಪ್ರಶ್ನೆ ಪೊಲೀಸರನ್ನು ಕಾಡ ತೊಡಗಿದೆ.

ಒಂದು ಮೂಲದ ಪ್ರಕಾರ ಉತ್ತರ ಕನ್ನಡದಿಂದಲೇ ಆತ ತಂದಿರುವ ಅನುಮಾನ ವ್ಯಕ್ತವಾಗಿದೆ. ಅಂಕೋಲಾ, ಯಲ್ಲಾಪುರ, ಹಳಿಯಾಳ, ದಾಂಡೇಲಿಯಿಂದ ಬಾಂಬ್ ತಂದಿರುವ ಸಾಧ್ಯತೆಯನ್ನು ಅಲ್ಲಗೆಳೆಯುವಂತಿಲ್ಲ.

### ಕೇಂದ್ರ ಸಚಿವ ವಿ.ಸೋಮಣ್ಣ, ಸಚಿವ ಎಂ.ಬಿ.ಪಾಟೀಲ್ ಲೋಕಾರ್ಪಣೆ

## ಚನ್ನಪಟ್ಟಣದ ಎಲೆಕೇರಿ ಗೇಟ್ ಬಳಿ ರಸ್ತೆ ಮೇಲ್ಸೇತುವೆ ಬಳಕೆಗೆ ಮುಕ್ತ

**ಮಂಡ್ಯ, ಜೂ.29:** ಚನ್ನಪಟ್ಟಣದ ಎಲೆಕೇರಿ ಗೇಟ್ ಬಳಿಯಿದ್ದ ರೈಲ್ವೆ ಕ್ರಾಸಿಂಗ್ ಸಮಸ್ಯೆಗೆ ಮುಕ್ತಿ ಹಾಡಲು ನೂತನವಾಗಿ ನಿರ್ಮಿಸಲಾದ ರಸ್ತೆ ಮೇಲ್ಸೇತುವೆಯನ್ನು ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಲಾಗಿದೆ. ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವರಾದ ವಿ. ಸೋಮಣ್ಣ ಮತ್ತು ರಾಜ್ಯದ ಸಚಿವ ಎಂ.ಬಿ. ಪಾಟೀಲ್ ಅವರು ಜಂಟಿಯಾಗಿ ಈ ಯೋಜನೆಯನ್ನು ಲೋಕಾರ್ಪಣೆಗೊಳಿಸಿದರು. ಒಟ್ಟು 15 ಕೋಟಿ ರೂ. ವೆಚ್ಚದಲ್ಲಿ ತಲೆಯೆತ್ತಿರುವ ಈ ಬೃಹತ್ ಕಾಮಗಾರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮಾನವಾಗಿ (50:50) ಹಣಕಾಸು ಹಂಚಿಕೆ ಮಾಡಿಕೊಂಡಿವೆ.



ಅದರಂತೆ ಕರ್ನಾಟಕ ಸರ್ಕಾರವು ಏಳೂವರೆ ಕೋಟಿ ರೂಪಾಯಿಗಳ ಅನುದಾನವನ್ನು ನೀಡಿದ್ದು, ಇದು ಈ ವಲಯದ ಅತ್ಯಂತ ಎತ್ತರದ ಅತ್ಯಾಧುನಿಕ ಸೇತುವೆಗಳಲ್ಲಿ ಒಂದಾಗಿ ಗಮನಸೆಳೆದಿದೆ.ಈ ಹೊಸ ಮೇಲ್ಸೇತುವೆಯು ಸ್ಥಳೀಯ ವಾಹನ ಸವಾರರ ಪ್ರಯಾಣವನ್ನು ಸರಳಗೊಳಿಸುವು ದಲ್ಲದೆ, ಅಪಘಾತಗಳನ್ನು ತಡೆದು ಸುರಕ್ಷತೆ ಹೆಚ್ಚಿಸಲಿದೆ.

ಈ ಉದ್ಘಾಟನಾ ಸಮಾರಂಭದಲ್ಲಿ ಸಂಸದರಾದ ಡಾ. ಮಂಜುನಾಥ್, ಸ್ಥಳೀಯ ಶಾಸಕ ಸಿ.ಪಿ. ಯೋಗೀಶ್ವರ್ ಸೇರಿದಂತೆ ರೈಲ್ವೆ ಇಲಾಖೆಯ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು.

## ವಿಜಯೇಂದ್ರ ವಿರುದ್ಧ ಪಿತೂರಿ ನಡೆದರೆ ಸುಮ್ಮನಿರಲ್ಲ: ರೇಣುಕಾಚಾರ್ಯ ಗುಡುಗು

**ದಾವಣಗೆರೆ, ಜೂ.29:** ಬಿ.ವೈ. ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕಿತ್ತು ಬಿಸಾಕಿ ಅನ್ನೋ ಆಡಿಯೋ ವೈರಲ್ ಆಗುತ್ತಿದ್ದಂತೆಯೇ ಯಡಿಯೂರಪ್ಪ ಬಣದ ನಾಯಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಬಗ್ಗೆ ದಾವಣಗೆರೆಯಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿರುವ ಎಂ.ಪಿ. ರೇಣುಕಾಚಾರ್ಯ, ಯಡಿಯೂರಪ್ಪನವರ ಅಶೀರ್ವಾದದಿಂದ ಕೆಲವರು ಸಿಎಂ ಆಗಿದ್ದಾರೆ, ಸಚಿವರು ಆಗಿದ್ದಾರೆ. ಏನಾದರೂ ಪಿತೂರಿ ನಡೆಸಿದರೆ ನಾವು ಸುಮ್ಮನೆ ಕೂರುವುದಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ್ದಾರೆ. ಪಕ್ಷ ಸಂಘಟನೆಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಯಡಿಯೂರಪ್ಪ ಪಕ್ಷ ಸಂಘಟನೆ ಮಾಡದಿದ್ರೆ ಈಗ ಮಾತನಾಡುವವರು ಇರುತ್ತಿರಲಿಲ್ಲ . ಆವರ ಮಗ ಅಂತಾ ಹೇಳುತ್ತಿಲ್ಲ ಅವರು ಜಾತ್ಯತೀತ ವ್ಯಕ್ತಿ . ರಾಜ್ಯದಲ್ಲಿ ಅನೇಕ ಹೋರಾಟವನ್ನು ವಿಜಯೇಂದ್ರ



ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇತ್ತೀಚೆಗೆ ನಡೆದ ಪರಿಷತ್ ಚುನಾವಣೆಯಲ್ಲಿ ವಿಜಯೇಂದ್ರಗೆ ಅವರಿಗೆ ಕೆಟ್ಟ ಹೆಸರು ತರಲು ಅಡ್ಡ ಮತದಾನ ಮಾಡಿದ್ದಾರೆ . ತಾಕತ್ತು ಇದ್ದರೆ ಯಡಿಯೂರಪ್ಪ ಬಿಜೆಪಿಗೆ ಅವಶ್ಯಕತೆ ಇಲ್ಲ ಅಂತಾ ಹೇಳಲಿ ನೋಡೋಣಾ. ಇನ್ನೂ ಮುಂದೆ ವಿಜಯೇಂದ್ರ ಬಗ್ಗೆ ಅವಹೇಳನವಾಗಿ ಮಾತಾಡಿದ್ರೆ ಸಹಿಸುವುದಿಲ್ಲ. ಯಡಿಯೂರಪ್ಪ ಕಟ್ಟಿದ್ದ ಪಕ್ಷಕ್ಕೆ ಇವರೆಲ್ಲ ಬಂದು ಈಗ ಆವರ ಕುಟುಂಬ ಆವರ ಬಗ್ಗೆ ಮಾತಾಡುತ್ತಾರೆ ಇದು ಒಳ್ಳೆಯದಲ್ಲ. 2028ಕ್ಕೆ ವಿಜಯೇಂದ್ರ ಮುಖಂಡತ್ವದಲ್ಲಿ ಚುನಾವಣೆಗೆ ಹೋಗುತ್ತೇವೆ. ರಾಷ್ಟ್ರೀಯ ನಾಯಕರು ಬದಲಾವಣೆ ಮಾಡಲ್ಲ ಅವರೇ ಮುಂದುವರೆಯುತ್ತಾರೆ. ವಿಜಯೇಂದ್ರ ಅವರೇ ಮುಂದುವರೆಯಬೇಕು. ಇಲ್ಲದಿದ್ದರೆ ಸಂಘಟನೆ ಮಾಡಿ ಹೋರಾಡುತ್ತೇವೆ. ಆಂತರಿಕ ವಿಚಾರವನ್ನು ಮಾತಾಡಬಾರದು ಅಂತಾ ಮೌನವಾಗಿದ್ದೆ. ವಿಜಯೇಂದ್ರ ಬಗ್ಗೆ ಮಾತಾಡಿದರೆ ಅದೇರೀತಿ ಉತ್ತರ ಕೊಡುತ್ತೇವೆ. ಕುಮಾರ್ ಬಂಗಾರಪ್ಪನನ್ನು ಕರೆತಂದು ಶಾಸಕರನ್ನಾಗಿ ಮಾಡಿದ್ದು ವಿಜಯೇಂದ್ರ, ಯಡಿಯೂರಪ್ಪ. ಅವರ ಬೆಂಬಲ ಇಲ್ಲದೆ ಸೊರಬದಲ್ಲಿ ಗೆದ್ದು ತೋರಿಸಲಿ. ಕುಮಾರ್ ಬಂಗಾರಪ್ಪ ಜಿಲ್ಲಾ ಪಂಚಾಯತಿ ಸದಸ್ಯ ಆಗಲು ಯೋಗ್ಯತೆ ಇಲ್ಲ ಎಂದು ಕಿಡಿಕಾರಿದರು.

# ಸರಡಗಿ ಭೀಮಾ ಬ್ಯಾರೇಜ್ ಹೂಳುಮುಕ್ತ: ಕಲಬುರಗಿಗೆ ನೀರು ಸರಬರಾಜಿಗೆ ಅಧಿಕ ಸಂಗ್ರಹ: ಶಾಸಕ ಅಲ್ಲಮಪ್ರಭು

**ಕಲಬುರಗಿ, ಜೂ. 29:** ನಗರಕ್ಕೆ ಕುಡಿಯುವ ನೀರು ಪೂರೈಸುವ ಸರಡಗಿ ಭೀಮಾ ಬ್ಯಾರೇಜ್ ಹೂಳೆತ್ತುವ ಕಾಮಗಾರಿ ಪೂರ್ಣ ಗೊಂಡು, ಬ್ಯಾರೇಜು ಹೂಳುಮುಕ್ತವಾಗಿ, ಹೆಚ್ಚಿನ ನೀರು ಸಂಗ್ರಹಿಸಲು ಸಾಧ್ಯವಾಗಲಿದೆ. ಇನ್ನೇನು ಕೆಲವೇ ದಿನಗಳಲ್ಲಿ ನಾರಾಯಣಪುರ ಜಲಾಶಯದಿಂದ ನೀರು ಆಗಮಿಸಲಿದ್ದು, ಸರಡಗಿ ಬ್ಯಾರೆಜ್ ತುಂಬಿಕೊಳ್ಳಲಾಗುವುದು ಎಂದುಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ಮುಂಗಾರು ಮಳೆ ಕೈಕೊಟ್ಟ ಕಾರಣ ನಗರದಲ್ಲಿನ ಕುಡಿಯುವ ನೀರಿಗೆ ತುಂಬಾ ಸಮಸ್ಯೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ದಕ್ಷಿಣ ಶಾಸಕ ಅಲ್ಲಮಪ್ರಬು ಪಾಟೀಲ ಅವರು, ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪಮೇಯರ್ ತೃಪ್ತಿ ಲಾಖೆ ಹಾಗೂ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರೊಂದಿಗೆ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಸರಡಗಿ ಬ್ರಿಜ್ ಕಂ ಬ್ಯಾರೇಜಿಗೆ ಭೇಟಿ ನೀಡಿ ಪ್ರಸ್ತುತ ಲಭ್ಯ ಇರುವ ನೀರಿನ ಪ್ರಮಾಣದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸುದ್ದಿಗಾರರೊಂದಿಗೆ, ಶಾಸಕ ಅಲ್ಲಮಪ್ರಭು ಪಾಟೀಲ ಅವರು, ಈ ಬಾರಿ ಮಳೆ ಕೈಕೊಟ್ಟ ಕಾರಣ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಹೀಗಾಗಿ ಈಗಾಗಲೆ ನಾರಾಯಣಪುರ ಜಲಾಶಯ ದಿಂದ 0.5 ಟಿ.ಎಂ.ಸಿ. ನೀರು ಹರಿಬಿಡಲಾಗಿದ್ದು, ಎರಡು ದಿನಗಳಲ್ಲಿ ಸರಡಗಿ ಬ್ಯಾರೇಜಿಗೆ ತಲುಪಲಿದೆ. ಪ್ರತಿವರ್ಷ ಬೇಸಿಗೆಯಲ್ಲಿ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತಿದ್ದು, ನಾರಾಯಣಪುರ ಜಲಾಶಯದಿಂದ ಶಹಾಪುರ, ನಗನೂರ ಮಾರ್ಗವಾಗಿ ಹರಿಬಿಡುವ ನೀರು ನಮ್ಮಲ್ಲಿ ಬರುವಷ್ಟಿಗೆ ಹೆಚ್ಚಿನ ನೀರು ಭೂಮಿ ಪಾಲಾಗುತ್ತಿದೆ. ಇದರ ಬದಲಾಗಿ ನಾರಾಯಣಪುರದಿಂದ ನೇರವಾಗಿ ಸರಡಗಿಗೆ ನೀರು ಹರಿಸಿದಲ್ಲಿ ಹೆಚ್ಚಿನ ನೀರು ನಮಗೆ ಸಿಗಲಿದೆ. ಇದಕ್ಕಾಗಿ 1,850 ಕೋಟಿ ರೂ. ಮೊತ್ತದ



ಡಿ.ಪಿ.ಆರ್ ಸಿದ್ದಪಡಿಸಿದ್ದು, ಅಂದುಕೊಂಡಂತೆ ಯೋಜನೆ ಅನುಷ್ಠಾನಕ್ಕೆ ಬಂದಲ್ಲಿ ಮುಂದಿನ ದಿನದಲ್ಲಿ ನಗರಕ್ಕೆ ಕುಡಿಯುವ ನೀರಿಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದರು.

ಇನ್ನು ಸರಡಗಿ ಬ್ಯಾರೇಜಿನಲ್ಲಿ 41 ವರ್ಷ ಹಳೆಯದ 900ಕ್ಕೂ ಹೆಚ್ಚಿನ ಸ್ಟಾಪ್‌ಲಾಗ್ ಗೇಟ್‌ಗಳಿದ್ದು, ಇದರಲ್ಲಿ ಈಗಾಗಲೆ 600 ಹೊಸದಾಗಿ ಗೇಟ್ ಅಳವಡಿಸಿದೆ. 150 ದುರಸ್ತಿ ಮಾಡಿದ್ದು, ಇನ್ನುಳಿದ ಗೇಟ್ ಸಹ ಹೊಸದಾಗಿ ಅಳವಡಿಸಿ ಬೇಸಿಗೆಯಲ್ಲಿ ನೀರು ಪೋಲಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಇದಲ್ಲದೆ ಶುದ್ಧ ಕುಡಿಯುವ ನೀರು ಪೂರೈಕೆ ಮತ್ತು ಹೆಚ್ಚಿನ ಸಂಗ್ರಹಣೆ ಸಾಮರ್ಥ್ಯ ಹೆಚ್ಚಿಸಲು ಬ್ಯಾರೇಜ್‌ನಲ್ಲಿ ಹೂಳೆತ್ತುವ ಕಾಮಗಾರಿ ಸಹ ನಡೆಯುತ್ತಿದ್ದು, ಇವೆಲ್ಲ ಕೆಲಸ ಕಾರ್ಯಗಳಿಗೆ 5 ಕೋಟಿ ರೂ. ಖರ್ಚು ಮಾಡಲಾಗಿದೆ. ಇದೀಗ ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದ್ದು, ಈಗ ಬ್ಯಾರೇಜ್ ಹೂಳುಮುಕ್ತವಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಹೆಚ್ಚಿನ ನೀರು ಸಂಗ್ರಹವಾಗುವುದರೊಂದಿಗೆ ಶುದ್ಧ ಕುಡಿಯುವ ನೀರು ನಗರದ ಜನರಿಗೆ ಲಭ್ಯವಾಗಲಿದೆ ಎಂದರು. ಇನ್ನು ಕಲಬುರಗಿ ಮಹಾನಗರದಲ್ಲಿ ಎಲ್‌ಎನ್‌ಟಿ ಸಂಸ್ಥೆಯಿಂದ 24 ಗಂಟೆ ನಿರಂತರ ಕುಡಿಯುವ ನೀರು ಪೂರೈಕೆ ಸ್ಕೀಮ್ 'ಎ' ಯೋಜನೆ ಯಡಿ 700 ಕಿ.ಮೀ ಪೈಪ್‌ಲೈನ್ ಕಾಮಗಾರಿ ನಡೆದಿದ್ದು, 'ಬಿ' ಸ್ಕೀಮ್ ನಲ್ಲಿ ಇನ್ನು 500 ಕಿ.ಮೀ ವಿಸ್ತರಣೆ ಮಾಡಲಾಗುತ್ತಿದೆ. ಇದರಿಂದ ನಗರದಾದ್ಯಂತ ನೀರು ಸರಬರಾಜು ಜಾಲ ವಿಸ್ತರಣೆಯಾಗಲಿದೆ. ಪ್ರಸ್ತುತ ಕಲಬುರಗಿ ದಕ್ಷಿಣ ಮತ್ತು ಉತ್ತರ ಕ್ಷೇತ್ರದಲ್ಲಿ ಎಲ್ಲಿಯೆ ಕುಡಿಯುವ ನೀರಿನ ಸಮಸ್ಯೆ ತಲೆದೋರಿದಲ್ಲಿ ಕೂಡಲೆ ನೀರು ಪೂರೈಕೆಗೆ ಸುಮಾರು 200 ಟ್ಯಾಂಕರ್ ಪಡೆಯಲು ಸಹ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹೀಗಾಗಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ತೊಂದರೆಯಾಗ ದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ ಎಂದರು.

**8 ದಿನಕ್ಕೆ ನೀರು ಲಭ್ಯ:** ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಮಾತನಾಡಿ, ಪ್ರಸ್ತುತ ಕಲಬುರಗಿ ನಗರಕ್ಕೆ ಮುಂದಿನ 8-10 ದಿನಗಳ ಕಾಲ ನೀರು ಪೂರೈಕೆಗೆ ನೀರಿನ ಪ್ರಮಾಣ ಬ್ಯಾರೇಜ್‌ನಲ್ಲಿ ಲಭ್ಯವಿದೆ. ನಾರಾಯಣಪುರ ಜಲಾಶಯದಿಂದ ನೀರು ಹರಿಬಿಟ್ಟಿದ್ದು, ಒಂದೆರಡು ದಿನ ಬ್ಯಾರೇಜಿಗೆ ನೀರು ಬಂದು ಸೇರಲಿದ್ದು, ಅಲ್ಲಿಗೆ ಸದ್ಯದ ಮಟ್ಟಿಗೆ ಕುಡಿಯುವ ನೀರು ಪೂರೈಕೆಗೆ ಯಾವುದೇ ಸಮಸ್ಯೆ ಇಲ್ಲ. ಕಳೆದ ವರ್ಷ ಅತಿವೃಷ್ಟಿ, ಈ ವರ್ಷ ಒಂದು ತಿಂಗಳು ಕಳೆದರು ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಪೂರೈಕೆ ನಮಗೆ ಸವಾಲಾಗಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ ಒಂದೆರಡು ದಿನದಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ವರುಣನ ಆಗಮನಕ್ಕೆ ಕಾತುರರಾಗಿದ್ದೇವೆ. ಕಲಬುರಗಿ ಮಹಾನಗರದಲ್ಲಿ ಕುಡಿಯುವ ನೀರಿನ ಪೂರೈಕೆಗೆ ಚರಂಡಿ ನೀರು ಸೇರದಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ರಸ್ತೆ, ಬಿ.ಎಸ್.ಎನ್.ಎಲ್.,ವಿದ್ಯುತ್ ಕಾಮಗಾರಿ ಕೈಗೊಳ್ಳುವವರಿಗೂ ರಸ್ತೆ ನಿರ್ಮಾಣ ಮಾಡುವ ಮುನ್ನವೆ ಇವೆಲ್ಲ ಕೆಲಸಗಳನ್ನು, ದುರಸ್ತಿ ಕಾರ್ಯಗಳನ್ನು ಮಾಡಿಕೊಳ್ಳುವಂತೆ ಅನಗತ್ಯ ರಸ್ತೆ ತೋಡುವುದನ್ನು ತಡೆಯಲು ಸೂಚಿಸಲಾಗಿದೆ. ಎನ್.ಎಂ.ಪಿ.ಸಿ, 15ನೇ ಹಣಕಾಸು ಯೋಜನೆಯಡಿ ಬೇಡಿಕೆ ಇದ್ದ ಕಡೆ 60-70 ಬೋರವೆಲ್ ಕೊರೆಯಲು ಸಹ ಯೋಜನೆ ರೂಪಿಸಿದೆ ಎಂದು ಅವಿನಾಶ ಶಿಂಧೆ ತಿಳಿಸಿದರು.

## ಎಲ್ಲಾ ಶಾಲಾ-ಕಾಲೇಜುಗಳ ಬಸ್ಸುಗಳ ಕಾರ್ಯಕ್ಷಮತೆ ಪರೀಕ್ಷಿಸಲು ಸಿದ್ದೇಶ್ ಊಳೂರು ಮನವಿ



**ಬಳ್ಳಾರಿ ಜೂ 29.** ಬಳ್ಳಾರಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ವಾಹನಗಳ ಕ್ಷಮತಾ ಪ್ರಮಾಣ ಪತ್ರ ಮತ್ತು ವಿಮೆಪರೀಕ್ಷಿಸಿ ನಿಯಮ ಉಲ್ಲಂಘನೆ ಮಾಡಿರುವವರ ವಿರುದ್ಧ ಮೋಟರ್ ಆಕ್ಟ್ ನಿಯಮ ಪ್ರಕಾರ ಕ್ರಮ ಕೈಗೊಳ್ಳಲು ಸಿದ್ದೇಶ ಊಳೂರು ಸಾಮಾಜಿಕ ಹೋರಾಟಗಾರ ಬಳ್ಳಾರಿ ಅವರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಬಳ್ಳಾರಿ ನಗರ ಹಾಗೂ ಜಿಲ್ಲೆಯಾದ್ಯಂತ ಇರುವ ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಆಡಳಿತ ಮಂಡಳಿಯವರು ವಾಹನಗಳಲ್ಲಿ ದಿನನಿತ್ಯ ಮಕ್ಕಳನ್ನು ಕರೆದೊಯ್ಯುವುದೂ ಸಾಮನ್ಯವಾಗಿದೆ. ಮಕ್ಕಳ ಸುರಕ್ಷತೆಗೆ ಯಾವುದೇ ಕ್ರಮಕೈಗೋಳ್ಳದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಎಲ್ಲಾ ಶಾಲೆಗಳ ವಾಹನಗಳು ಬಹುತೇಕ ಗುಜರಿ ಹಂತಕ್ಕೆ ತಲುಪಿದ್ದು,ಕೆಲವರು ಮಾತ್ರ ಹೊಸ ಬಸ್ಸುಗಳನ್ನು ಖರೀದಿಸಿರುವುದನ್ನು ಬಿಟ್ಟರೆ ಉಳಿದ ಎಲ್ಲಾ ಶಾಲೆಗಳ ಮಾಲಿಕರು ಹಳೆ ಗುಜರಿ ಬಸ್ಸುಗಳಲ್ಲೆ ಮಕ್ಕಳನ್ನು ಶಾಲೆಗೆ ಕರೆದೂಯ್ಯೂವುದು ಕಂಡು ಬರುತ್ತದೆ. ಏನಾದರೂ ಅನಾಹುತ ಸಂಭವಿಸಿದರೆ ಇದಕ್ಯಾರು ಹೊಣೆ,

(ಶಾಲಾ ಆಡಳಿತ ಮಂಡಳಿನಾ, ಶಿಕ್ಷಣ ಇಲಾಖೆನಾ, ಸಾರಿಗೆ ಇಲಾಖೆನಾ, ಜಿಲ್ಲಾಡಳಿತನಾ ಅಥವಾ ಸರ್ಕಾರ) ನಾ ಅಂತ ಸಾರ್ವಜನಿಕರ ಪ್ರಶ್ನೆಯಾಗಿದೆ. ಬಹುತೇಕ ವಾಹನಗಳ ಚಾಲಕರ ನಿರ್ಲಕ್ಷದಿಂದ ಮತ್ತು ಬ್ರೇಕ್ ವೈಫಲ್ಯ ಅಪಘಾತಗಳು ಸಂಭವಿಸಿ ಮಕ್ಕಳ ಪ್ರಾಣ ಹಾನಿಯಾಗಿ ಕೆಲವು ಮಕ್ಕಳು ಪೆಟ್ಟು ತಿಂದ್ದಿರುವ ಉದಾಹರಣೆಗಳು ನಮ್ಮ ಕಣ್ಣ್ಮುಂದೆವೆ. ಹಲವಾರು ಶಾಲಾ ವಾಹನಗಳು ನಿಯಮಗಳನ್ನು ಉಲ್ಲಂಘಿಸಿರುವುದು ಸಾರ್ವಜನಿಕರಿಂದ ಕೇಳಿ ಬರುತ್ತೀರುವ ಹಿನ್ನಲೆಯಲ್ಲಿ

ಫಿಟ್ನೆಸ್ ಪ್ರಮಾಣ ಪತ್ರ ಇಲ್ಲದೆ/ ಅವದಿ ಮುಗಿದರೂ ವಾಹನಗಳ ಸಂಚಾರಿ. ಕಡ್ಡಾಯ ವಾಹನ ವಿಮೆ ಇಲ್ಲದರುವುದು. ಸ್ಪೀಡ್ ಗರ್ವನರ್, ಫಸ್ಟ್ ಏಡ್ ಕಿಟ್, ಆಗ್ನಿಹಾವುತ ಯಂತ್ರ ಮಹಿಳಾ ಅಟೆಂಡರ್ ಇಲ್ಲದಿರುವುದು. ಅತಿಯಾದ ವಿದ್ಯಾರ್ಥಿಗಳನ್ನು ತುಂಬಿಕೊಂಡು ಅಪಾಯಕಾರಿಯಾಗಿ ಸಂಚರಿಸುವುದು. ಮೋಟಾರು ವಾಹನ ಕಾಯ್ದೆ1968 ಮತ್ತು ಸುಪ್ರೀಂಕೋರ್ಟ್ ಮಾರ್ಗ ಸೂಚಿಗಳ ಪ್ರಕಾರ ಶಾಲಾ ವಾಹನಗಳು, ವರ್ಷಕೊಮ್ಮೆ ಫಿಟ್ನೆಸ್ ಮಾನ್ಯ ವಿಮೆ, ಪರವಾನಿಗೆ ಹೊಂದಿ ರುವುದು ಕಡ್ಡಾಯ.

ಆದುದರಿಂದ ಬಳ್ಳಾರಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಎಲ್ಲಾ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ವಾಹನಗಳನ್ನು ತಕ್ಷಣವೇ ತಪಾಸಣೆ ಪರೀಕ್ಷೆ ನಡೆಸಬೇಕು. ಫಿಟ್ನೆಸ್, ವಿಮೆ, ಪರವಾನಿಗೆ ಇತರೆ ಸುರಕ್ಷಿತ ಸಲಕರಣೆಗಳ ಕೊರತೆ ಇರುವ ವಾಹನಗಳ ಮೇಲೆ ಕಠಿಣ ಕ್ರಮ ಜರುಗಿಸಬೇಕು.

ನಿಯಮ ಉಲ್ಲಂಘಿಸಿದ ಶಾಲಾಡಳಿತ ಮಂಡಳಿ ವಿರುದ್ಧ ಕಠಿಣ ಕ್ರಮ ಹಾಗೂ ದಂಡ ಮತ್ತು ವಾಹನ ಜಪ್ತಿ ಕ್ರಮ ಕೈಗೊಳ್ಳಬೇಕು.

ತಪಾಸಣೆಯ ವರದಿಯನ್ನು ಸಾರ್ವಜನಿಕಗೊಳಿಸಬೇಕು ಹಾಗೂ ವಿದ್ಯಾರ್ಥಿಗಳ ಸುರಕ್ಷತ ಹಿತದೃಷ್ಟಿಯಿಂದ ಈ ತಪಾಸಣೆಯನ್ನು ಅದಷ್ಟು ಬೇಗ ನೆಡೆಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಮನವಿ ಮಾಡಿದ್ದಾರೆ.

## ಪೋಸ್ಟರ್ ಅಂಟಿಸಲು ಹೋದಾಗ ಏಕಾಏಕಿ ಕುಸಿದ ಕಟ್ಟಡದ ಗೋಡೆ; ಮೂವರ ದುರ್ಮರಣ



**ರಾಯಚೂರು, ಜೂ. 29:** ಜಿಲ್ಲೆಯ ದೇವದುರ್ಗದ ಬಸ್ ನಿಲ್ದಾಣದ ಬಳಿ ಸೋಮವಾರ ಭೀಕರ ದುರಂತವೊಂದು ಸಂಭವಿಸಿದೆ. ಜನನಿಬಿಡ ಪ್ರದೇಶದಲ್ಲಿದ್ದ ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಡದ ಮೆಟ್ಟಿಲು ಹತ್ತಿ ಗೊಡೆಗೆ ಪೋಸ್ಟರ್ ಅಂಟಿಸಲು ಹೋದಾಗ ಏಕಾಏಕಿ ಗೋಡೆ ಕುಸಿದು ಬಿದ್ದ ಪರಿಣಾಮ ಇಬ್ಬರು ಯುವಕರು ಸ್ಥಳದಲ್ಲೇ ಸಾವನ್ನಪ್ಪಿದ್ದು ಮತ್ತೊಬ್ಬ ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ವರದಿಯಾಗಿದೆ. ಘಟನಾ ಸ್ಥಳಕ್ಕೆ ದೇವದುರ್ಗ ಪೊಲೀಸರು ಭೇಟಿ ನೀಡಿ ಪರಿಶೀಲನೆ ಮಾಡಿದರು.

## ಆಗ್ರಾದಲ್ಲಿ ಛತ್ರಪತಿ ಚೇತನಾ ಯಾತ್ರೆ ಬಸವ ದರ್ಶನ ಕಾರ್ಯಕ್ರಮ

**ಬೀದರ್, ಜೂ. 29:** ಬರುವ ಆಗಸ್ಟ್ 17ರಂದು ಉತ್ತರ ಪ್ರದೇಶದ ಆಗ್ರಾದಲ್ಲಿ ಶಿವ ಛತ್ರಪತಿ ಚೇತನ ಯಾತ್ರೆ ಹಾಗೂ ವಿಶ್ವಗುರು ಬಸವ ದರ್ಶನ ಸಮಾವೇಶ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದ ಪ್ರಮುಖ ಸಂಘಟಕರೂ ಆದ ವಿಶ್ವಭೂಷಣರಾಜೆ ಶಿವಛತ್ರಪತಿ ವಿಶೇಷ ಪರಿಷತ್ ಮುಖ್ಯ ವಕ್ತಾರ ಜನಾರ್ದನ ಪಾಟೀಲ ತಿಳಿಸಿದರು.

ಈಗಾಗಲೇ ಕಾರ್ಯಕ್ರಮದ ಕುರಿತು ಏಳು ರಾಜ್ಯಗಳಲ್ಲಿ ಪ್ರಚಾರ ಕೈಗೊಂಡಿರುವೆ. ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳ ಪ್ರಚಾರ ಕೈಗೊಳ್ಳಲಾಗಿದೆ. ವಿಶೇಷವಾಗಿ ಅವರು ಸ್ಥಾಪಿಸಿದ ಹಿಂದವಿ ಸ್ವರಾಜ್ಯ ಸ್ಥಾಪನೆ ವಿಷಯವನ್ನು ಯುವ ಸಮೂಹಕ್ಕೆ ಪರಿಚಯಿಸಿ ಅವರಲ್ಲಿ ದೇಶಪ್ರೇಮ




ಹಾಗೂ ಮಹಾತ್ಮರ ಬಗ್ಗೆ ಗೌರವ ಹೆಚ್ಚಿಸುವುದು ಮುಖ್ಯ ಗುರಿಯಾಗಿದೆ ಎಂದು ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಇದು ಸಂಪೂರ್ಣ ರಾಜಕೀಯ ರಹಿತ ಕಾರ್ಯಕ್ರಮವಾಗಿದೆ. ದೇಶದ ಬುದ್ಧಿಜೀವಿಗಳನ್ನು ಆಹ್ವಾನಿಸಲಾಗಿದೆ. ಜಾತಿ, ಮತ, ಪಂಥದ ಭೇದವಿಲ್ಲದೆ ಎಲ್ಲರೂ ಇದರಲ್ಲಿ ಮುಕ್ತವಾಗಿ ಭಾಗವಹಿಸಬಹುದು. ಛತ್ರಪತಿ ಶಿವಾಜಿ ಮಹಾರಾಜರ ವಾಸ ಸ್ಥಾನಗಳಾಗಿದ್ದ ಶಿವನೇರಿ (ಈಗಿನ ಪುಣೆ), ಕೊಲ್ಹಾಪುರದ ಶಾಹು ಪ್ಯಾಲೇಸ್, ವಿಜಯಪುರದ ಕಾಗಲ ಹಾಗೂ ಬೀದರ್ ನಗರದ ಮರಾಠಾ ಭವನದ ನಂಟು ಬೆಸೆಯುವ ಕಾರ್ಯಕ್ರಮ ಕೂಡ ಇದಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

# ಎರಡನೇ ರಾಜತಾಂತ್ರಿಕ ವಿನಿಮಯದ ನಂತರ ತಾಂತ್ರಿಕ ಮಾತುಕತೆ ನಡೆಸಲು ಅಮೆರಿಕ-ಇರಾನ್ ಪ್ರತಿನಿಧಿಗಳು ದೋಹಾದಲ್ಲಿ ಮುಖಾಮುಖಿ

**ವಾಷಿಂಗ್ಟನ್/ಟೆಹ್ರಾನ್, ಜೂನ್ 29:** ಹೋರ್ಮುಜ್ ಜಲಸಂಧಿಯ ಮೇಲೆ ದುರ್ಬಲವಾದ ಮಧ್ಯಂತರ ಒಪ್ಪಂದವನ್ನು ಸಂರಕ್ಷಿಸುವ ಗುರಿಯನ್ನು ಹೊಂದಿರುವ ಇತ್ತೀಚಿನ ಮಿಲಿಟರಿ ಕ್ರಮವನ್ನು ನಿಲ್ಲಿಸಲು ಮತ್ತು ತಾಂತ್ರಿಕ ಮಾತುಕತೆಗಳನ್ನು ಪುನರಾರಂಭಿಸಲು ಅಮೆರಿಕ ಮತ್ತು ಇರಾನ್ ಒಪ್ಪಿಕೊಂಡಿವೆ. ಎರಡೂ ಕಡೆಯವರು ಸದ್ಯಕ್ಕೆ ಹಿಂದೆ ಸರಿಯುತ್ತಾರೆ ಮತ್ತು ಹಡಗುಗಳು ಮುಕ್ತವಾಗಿ ಚಲಿಸಬಹುದು. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಮಾತುಕತೆಯ ನಂತರ ಉಭಯ ದೇಶಗಳ ನಡುವಿನ ಎರಡನೇ ಒಪ್ಪಂದವನ್ನು ಗುರುತಿಸುವ ತಾಂತ್ರಿಕ ಮಾತುಕತೆಗಾಗಿ ಅಮೆರಿಕ ಮತ್ತು ಇರಾನ್ ಪ್ರತಿನಿಧಿಗಳು ಮಂಗಳವಾರ ದೋಹಾದಲ್ಲಿ ಭೇಟಿಯಾಗಲಿದ್ದಾರೆ ಎಂದು ವರದಿಯಾಗಿದೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗು ವ್ಯವಸ್ಥೆ ಮತ್ತು ಇತ್ತೀಚಿನ ಮಿಲಿಟರಿ ವಿನಿಮಯದ ನಂತರ ಉದ್ವಿಗ್ನತೆಯನ್ನು ಕಡಿಮೆ ಮಾಡುವ ಕ್ರಮಗಳ ಕುರಿತು ಚರ್ಚಿಸಲು ಎರಡೂ ದೇಶಗಳ ಪ್ರತಿನಿಧಿಗಳು ಮಂಗಳವಾರ ಕತಾರ್ ರಾಜಧಾನಿಯಲ್ಲಿ ಭೇಟಿಯಾಗುವ ನಿರೀಕ್ಷೆಯಿದೆ ಎಂದು ಇರಾನಿನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಹಿಂದೆ ಇದೇ ರೀತಿಯ ಹೇಳಿಕೆಯನ್ನು ಟ್ರೂತ್ ಸೋಷಿಯಲ್‌ನಲ್ಲಿ "ಇರಾನ್ ಸಭೆ ಕೋರಿದೆ. ಇದು ದೋಹಾದಲ್ಲಿ ನಡೆಯಲಿದೆ" ಎಂದು ಬರೆದಿದ್ದಾರೆ. ವರದಿಯಾದ



ಮಾತುಕತೆಗಳು ಒಂದು ವಾರಕ್ಕೂ ಹೆಚ್ಚು ಹಿಂದೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ನಡೆದ ಮಾತುಕತೆಗಳ ನಂತರ ಎರಡೂ ಕಡೆಯ ನಡುವಿನ ಮೊದಲ ನೇರ ಒಪ್ಪಂದವಾಗಿದೆ, ಅಧ್ಯಕ್ಷ ಟ್ರಂಪ್ ಮತ್ತು ಅವರ ಇರಾನಿನ ಪ್ರತಿರೂಪ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಸಹಿ ಮಾಡಿದ ಒಡಂಡಿಕೆಯ ಚೌಕಟ್ಟಿನಡಿಯಲ್ಲಿ ನಡೆಯಿತು. ಈ ಒಪ್ಪಂದವು 60 ದಿನಗಳ ಮಾತುಕತೆಯ ಅವಧಿಯನ್ನು ಸ್ಥಾಪಿಸಿತು ಮತ್ತು ತಿಂಗಳುಗಳ ಸಂಘರ್ಷದ ನಂತರ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಕರೆ ನೀಡಿತು. ಆದಾಗ್ಯೂ, ಇರಾನ್‌ನ ಹಿರಿಯ ಸಮಾಲೋಚಕ ಮತ್ತು ಉಪ ವಿದೇಶಾಂಗ ಸಚಿವ ಕಾಜೆಮ್ ಘರಿಬಬಾದಿ ಅವರು ವರದಿಗಳನ್ನು ವಿರೋಧಿಸಿದರು, ಈ ವಾರ ಯಾವುದೇ ತಾಂತ್ರಿಕ ಕಾರ್ಯನಿರತ ಗುಂಪು ಸಭೆಗಳನ್ನು ನಿಗದಿಪಡಿಸಲಾಗಿಲ್ಲ ಎಂದು ವಾದಿಸಿದರು. "ಕಾರ್ಯನಿರತ ಗುಂಪುಗಳ ತಾಂತ್ರಿಕ ಸಭೆಗಳನ್ನು ಈ ವಾರ ನಿಗದಿಪಡಿಸಲಾಗಿಲ್ಲ" ಎಂದು ಘರಿಬಬಾದಿ ಹೇಳಿದರು ಎಂದು ಇರಾನ್‌ನ ರಾಜ್ಯ ಸುದ್ದಿ ಸಂಸ್ಥೆ ಐಆರ್‌ಎನ್‌ಎ ತಿಳಿಸಿದೆ. ಜ್ಞಾಪಕ ಪತ್ರದ ಅಡಿಯಲ್ಲಿ ಬದ್ಧತೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕತಾರ್‌ನೊಂದಿಗೆ ಸಮಾಲೋಚನೆಗಳು ಮುಂದುವರೆದಿವೆ ಎಂದು ಒಪ್ಪಿಕೊಂಡರೂ, ದೋಹಾದಲ್ಲಿ ತಾಂತ್ರಿಕ ಮಾತುಕತೆಗಳ ಕುರಿತು ವರದಿಗಳನ್ನು ದೃಢೀಕರಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಎರಡೂ ಕಡೆಯವರು ಸಮಯ ಮತ್ತು ಸ್ಥಳದ ಬಗ್ಗೆ ಒಪ್ಪಿಕೊಂಡ ನಂತರವೇ ಮೊದಲ ಸುತ್ತಿನ ತಾಂತ್ರಿಕ ಚರ್ಚೆಗಳು ನಡೆಯುತ್ತವೆ ಮತ್ತು ಮಧ್ಯಸ್ಥಿಕೆ ವಹಿಸುವ ದೇಶಗಳ ಮೂಲಕ ಸಮಾಲೋಚನೆಗಳು ಮುಂದುವರಿಯುತ್ತವೆ ಎಂದು ಘರಿಬಬಾದಿ ಹೇಳಿದರು. ದಾಳಿ ಮುಂದುವರಿದರೆ ಇಸ್ಲಾಮಿಕ್ ಗಣರಾಜ್ಯವು "ಅಸ್ತಿತ್ವದಲ್ಲಿ ಉಳಿಯುವುದಿಲ್ಲ" ಎಂದು ಭಾನುವಾರದಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಕದನ ವಿರಾಮ ವ್ಯವಸ್ಥೆಗಳನ್ನು ಎತ್ತಿಹಿಡಿಯಲು ವಿಫಲವಾದರೆ ತೀವ್ರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಆದಾಗ್ಯೂ, ಒಪ್ಪಂದವು ಜಲಸಂಧಿಯ ದೀರ್ಘಾವಧಿಯ ಆಡಳಿತವನ್ನು ಪರಿಹರಿಸದೆ ಬಿಡುತ್ತದೆ.



ಸೆಶೆಲ್ಸ್‌ನ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಪ್ರಯುಕ್ತ ನಡೆದ 'ಸೆಶೆಲ್ಸ್ ರಾಷ್ಟ್ರೀಯ ದಿನಾಚರಣೆ'ಯಲ್ಲಿ ಮುಖ್ಯ ಅತಿಥಿಯಾಗಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು.



ಪ್ರಧಾನಿ ನರೇಂದ್ರ ಮೋದಿ ಸೆಶೆಲ್ಸ್ ಪ್ರವಾಸದ ನಂತರ ಸೋಮವಾರ ದೆಹಲಿಗೆ ಪ್ರಯಾಣ ಬೆಳೆಸಿದರು..

# ಹಾರ್ಮುಜ್ ಜಲಸಂಧಿಯ ಭವಿಷ್ಯದ ನಿರ್ವಹಣೆಯ ಕುರಿತು ಇರಾನ್-ಒಮಾನ್ ನಡುವೆ ಮೊದಲ ಔಪಚಾರಿಕ ಚರ್ಚೆ

**ಟೆಹ್ರಾನ್/ಮಸ್ಕತ್, ಜೂನ್ 29:** ಹಾರ್ಮುಜ್ ಜಲಸಂಧಿಯ ಭವಿಷ್ಯದ ನಿರ್ವಹಣೆಯ ಕುರಿತು ಚರ್ಚೆಗಳನ್ನು ನಡೆಸಲು ಇರಾನ್ ಮತ್ತು ಒಮಾನ್‌ಮೊದಲ ಬಾರಿಗೆ ಭೇಟಿಯಾಗಿವೆ, ಹಡಗು ಮಾರ್ಗಗಳು, ಸುಂಕಗಳು ಮತ್ತು ಕಾರ್ಯತಂತ್ರದ ಜಲಮಾರ್ಗದ ನಿಯಂತ್ರಣದ ಕುರಿತು ಎರಡೂ ರಾಷ್ಟ್ರಗಳು ಸಾರ್ವಭೌಮತ್ವವನ್ನು ಪ್ರತಿಪಾದಿಸುತ್ತಿರುವ ನಡುವೆಯೂ.

"ಮಸ್ಕತ್‌ಗೆ ಭೇಟಿಯ ಸಮಯದಲ್ಲಿ, ಜಂಟಿ ಹಾರ್ಮುಜ್ ಸಮಿತಿಯ ಮೊದಲ ಸಭೆ ನಡೆಯಿತು" ಎಂದು ಇರಾನಿನ ಉಪ ವಿದೇಶಾಂಗ ಸಚಿವ ಕಜೆಮ್ ಘರಿಬಬಾದಿ ಹೇಳಿದದ್ದಾರೆ, ಅದು ಯಾವಾಗ ಸಂಭವಿಸಿತು ಎಂದು ಹೇಳದೆ. "ಜಲಸಂಧಿಗೆ ಸಂಬಂಧಿಸಿದ ಪ್ರಸ್ತುತ ಸಮಸ್ಯೆಗಳನ್ನು ಪರಿಶೀಲಿಸುವಾಗ, ಭವಿಷ್ಯದ ನಿರ್ವಹಣೆಯ ಕುರಿತು ನಾವು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡಿದ್ದೇವೆ" ಎಂದು ಅವರು ಹೇಳಿದರು, ಸಿಬಿಎಸ್ ನ್ಯೂಸ್ ವರದಿ ಮಾಡಿದೆ. ಹಾರ್ಮುಜ್ ಜಲಸಂಧಿಯು ವಿಶ್ವದ ಪ್ರಮುಖ ಇಂಧನ ಕಾರಿಡಾರ್‌ಗಳಲ್ಲಿ ಒಂದಾಗಿದೆ, ಜಾಗತಿಕ ತೈಲ ಮತ್ತು ಅನಿಲ ಹರಿವಿನ ಶೇ.20ಕ್ಕಿಂತ ಹೆಚ್ಚು ನಿಯಂತ್ರಿಸುತ್ತದೆ, ಅದರ ಭವಿಷ್ಯದ ಆಡಳಿತವು ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವಿನ ಪ್ರಮುಖ ವಿವಾದದ ಅಂಶವಾಗಿ ಹೊರಹೊಮ್ಮುತ್ತಿದೆ.

ಇರಾನ್ ಜಲಸಂಧಿಯನ್ನು ಬಳಸುವ ಹಡಗುಗಳ ಮೇಲೆ ಸೇವಾಶುಲ್ಕವನ್ನು ವಿಧಿಸಬಹುದು ಎಂದು ಪದೇ ಪದೇ ಸೂಚಿಸಿದೆ, ಕರಾವಳಿ ದೇಶಗಳು ಅದರ ನಿರ್ವಹಣೆಯ ಮೇಲೆ ಸಾರ್ವಭೌಮ ಹಕ್ಕುಗಳನ್ನು ಹೊಂದಿವೆ ಎಂದು ವಾದಿಸಿದೆ. ಆದಾಗ್ಯೂ, ಅಮೆರಿಕವು ಈ ವಿಚಾರವನ್ನು ನಿರಂತರವಾಗಿ ತಿರಸ್ಕರಿಸುತ್ತಾ ಬಂದಿದೆ,



ಜಲಸಂಧಿಯು ಅಂತರರಾಷ್ಟ್ರೀಯ ಜಲಮಾರ್ಗವಾಗಿದ್ದು, ಅದು ಸಂಪೂರ್ಣವಾಗಿ ಮುಕ್ತವಾಗಿರಬೇಕು ಮತ್ತು ಸಾರಿಗೆ ಶುಲ್ಕಗಳಿಂದ ಮುಕ್ತವಾಗಿರಬೇಕು ಎಂದು ವಾದಿಸುತ್ತಿದೆ. ಕಳೆದ ವಾರವಷ್ಟೇ, ಮಸ್ಕತ್ ಮತ್ತು ಟೆಹ್ರಾನ್ ಜಂಟಿ ಹೇಳಿಕೆ ನೀಡಿ ಜಲಸಂಧಿಯನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಪರಿಶೀಲಿಸುತ್ತಿವೆ ಎಂದು ಸೂಚಿಸಿದ್ದರಿಂದ, ಈ ವಿಷಯದಲ್ಲಿ ಒಮಾನ್ ಹೆಚ್ಚು ಮಿಶ್ರ ನಿಲುವನ್ನು ತೆಗೆದುಕೊಂಡಂತೆ ಕಂಡುಬಂದಿದೆ. ಆದಾಗ್ಯೂ, ನಂತರ ಯಾವುದೇ "ಅಂಗೀಕಾರ ಶುಲ್ಕ"ವನ್ನು ಯೋಜಿಸಲಾಗಿಲ್ಲ ಮತ್ತು ವಿಶ್ವಸಂಸ್ಥೆಯ ಸಮನ್ವಯದೊಂದಿಗೆ "ತಾತ್ಕಾಲಿಕ ಸಮುದ್ರ ಕಾರಿಡಾರ್" ಅನ್ನು ತೆರೆಯಲಾಗುವುದು ಎಂದು ಅದು ಹೇಳಿದೆ. ಇರಾನ್‌ನ ಕರಾವಳಿಯ ಹತ್ತಿರ ಚಲಿಸುವ ಕಾರಿಡಾರ್ ಮಾತ್ರ ಅಧಿಕೃತ ಹಡಗು ಮಾರ್ಗವಾಗಿ ಉಳಿದಿದೆ ಎಂದು ಒತ್ತಾಯಿಸುವ ಮೂಲಕ ಟೆಹ್ರಾನ್ ಪ್ರತಿಕ್ರಿಯಿಸಿತು ಮತ್ತು ಇರಾನಿನ ಅಧಿಕಾರಿಗಳು ಅನುಮೋದಿಸದ ಪರ್ಯಾಯ ಮಾರ್ಗಗಳನ್ನು ಬಳಸದಂತೆ ಹಡಗುಗಳಿಗೆ ಎಚ್ಚರಿಕೆ ನೀಡಿತು. ಯುಎಸ್-ಇರಾನ್ ಜ್ಞಾಪಕ ಪತ್ರದ ಅಡಿಯಲ್ಲಿ, ಟೆಹ್ರಾನ್ ಮತ್ತು ಮಸ್ಕತ್ ಇತರ ಗಲ್ಫ್ ರಾಷ್ಟ್ರಗಳೊಂದಿಗೆ ಸಮನ್ವಯದಿಂದ ಮತ್ತು ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಜಲಸಂಧಿಯ ಭವಿಷ್ಯದ ಆಡಳಿತ ಮತ್ತು ಸಮುದ್ರ ಸೇವೆಗಳ ಕುರಿತು ಸಮಾಲೋಚನೆಗಳನ್ನು ನಡೆಸಬೇಕಾಗುತ್ತದೆ. ಒಪ್ಪಂದವು ಸಹಿ ಮಾಡಿದ ನಂತರ ಆರಂಭಿಕ 60 ದಿನಗಳ ಅವಧಿಗೆ ಹಾರ್ಮುಜ್ ಮೂಲಕ ಟೋಲ್‌ಮುಕ್ತ ಮಾರ್ಗವನ್ನು ಖಾತರಿಪಡಿಸುತ್ತದೆ.

ಅಮೆರಿಕದ ಅಧಿಕಾರಿಯೊಬ್ಬರ ಪ್ರಕಾರ, ಇರಾನ್ ಜೊತೆಗಿನ ಮಾತುಕತೆ ಮುಂದುವರಿಯಲಿದೆ ಮತ್ತು ವಾರಾಂತ್ಯದಲ್ಲಿ ವ್ಯಾಪಾರ ಮುಷ್ಕರಗಳ ನಂತರ ಅಮೆರಿಕ ಮತ್ತು ಇರಾನ್ ಎರಡೂ ಹಿಂದಕ್ಕೆ ಸರಿಯುತ್ತವೆ. ಹಾರ್ಮುಜ್ ಜಲಸಂಧಿಯಲ್ಲಿ ಹಡಗುಗಳಿಗೆ ಮುಕ್ತವಾಗಿ ಚಲಿಸಲು ಅವಕಾಶ ನೀಡಲಾಗುವುದು, ಮುಂದಿನ ದಿನಗಳಲ್ಲಿ ಎರಡೂ ಕಡೆಯ ತಾಂತ್ರಿಕ ತಂಡಗಳು ದೋಹಾದಲ್ಲಿ ಭೇಟಿಯಾಗಲಿವೆ ಎಂದು ವರದಿಯಾಗಿದೆ. ಆದರೆ ಇರಾನ್‌ನ ಉಪ ವಿದೇಶಾಂಗ ಸಚಿವರು ಇಂದು "ಈ ವಾರ ಕಾರ್ಯನಿರತ ಗುಂಪುಗಳ ಯಾವುದೇ ತಾಂತ್ರಿಕ ಸಭೆಗಳನ್ನು ಯೋಜಿಸಲಾಗಿಲ್ಲ" ಎಂದು ರಾಜ್ಯ ಟಿವಿ ವರದಿ ಮಾಡಿದೆ.

### ಇರಾನ್‌ನ ಏಕೈಕ ಸಾರ್ವಭೌಮ ನಿಯಂತ್ರಣದಲ್ಲಿರುವ ಹಾರ್ಮುಜ್ ಜಲಸಂಧಿ ಎಂದು ಅರಘ್ಚಿ ಹೇಳುತ್ತಾರೆ

ಬಾಗ್ದಾದ್‌ಗೆ ಅಧಿಕೃತ ಭೇಟಿಯ ಸಂದರ್ಭದಲ್ಲಿ ಮಾತನಾಡಿದ ಇರಾನಿನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ, ಹಾರ್ಮುಜ್ ಜಲಸಂಧಿಯ ಮೇಲೆ ದೃಢವಾದ ನಿಯಂತ್ರಣವನ್ನು ಸೂಚಿಸಿದರು, ಅದರ ನಿರ್ವಹಣೆ ಮತ್ತು ಯಾವುದೇ ಪುನರಾರಂಭದ ಜವಾಬ್ದಾರಿ ಇಸ್ಲಾಮಿಕ್ ಗಣರಾಜ್ಯಕ್ಕೆ ಮಾತ್ರ ಎಂದು ಪ್ರತಿಪಾದಿಸಿದರು. ಎಲ್ಲಾ ಬಾಹ್ಯ ನಟರು ಆಯಕಟ್ಟಿನ ಜಲಮಾರ್ಗಕ್ಕಾಗಿ ಟೆಹ್ರಾನ್‌ನ ಸಾರ್ವಭೌಮ ವ್ಯವಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಯುವಂತೆ ಒತ್ತಾಯಿಸುತ್ತಾ, ಈ ವ್ಯವಸ್ಥೆ ಮತ್ತು ನಿರ್ವಹಣೆಯನ್ನು ಅಮೆರಿಕ ಜೊತೆಗಿನ ಒಡಂಬಡಿಕೆ ಅಡಿಯಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ಅವರು ಹೇಳಿದರು. ಇರಾಕ್‌ನ ವಿದೇಶಾಂಗ ಸಚಿವ ಫುವಾದ್ ಹುಸೇನ್ ಅವರೊಂದಿಗಿನ ಜಂಟಿ ಪತ್ರಿಕಾಗೋಷ್ಠಿಯಲ್ಲಿ, ಅರಘ್ಚಿ, "ಒಡಂಬಡಿಕೆ ಆಧಾರದ ಮೇಲೆ, ಇರಾನ್ ಅಳವಡಿಸಿಕೊಳ್ಳುವ ನಿರ್ವಹಣೆಯ ಅಡಿಯಲ್ಲಿ ಹಾರ್ಮುಜ್ ಜಲಸಂಧಿಯು ಇಸ್ಲಾಮಿಕ್ ಗಣರಾಜ್ಯವು ಅಡೆತಡೆಗಳನ್ನು ತೆಗೆದುಹಾಕಿದ ನಂತರ, 30 ದಿನಗಳಲ್ಲಿ ಯುದ್ಧಪೂರ್ವ ಸಾಮರ್ಥ್ಯಕ್ಕೆ ಮರಳುತ್ತದೆ" ಎಂದು ಹೇಳಿದರು.

# ಕತಾರ್‌ನಲ್ಲಿ ಇರಿಸಲಾಗಿರುವ 600 ಕೋಟಿ ಡಾಲರ್ ಆಸ್ತಿಯನ್ನು ಇರಾನ್ ವಶಪಡಿಸಿಕೊಳ್ಳಲಿದೆ: ಅಧ್ಯಕ್ಷ ಪೆಜೆಶ್ಕಿಯಾನ್ ಎಚ್ಚರಿಕೆ

**ಟೆಹ್ರಾನ್, ಜೂನ್ 29:** ಕತಾರ್‌ನಲ್ಲಿ ಇರಿಸಲಾಗಿರುವ ಇರಾನ್‌ನ 6 ಬಿಲಿಯನ್ ಡಾಲರ್ ಘನೀಕರಿಸಿದ ಆಸ್ತಿಯನ್ನು ಬಿಡುಗಡೆ ಮಾಡಿ ದೇಶಕ್ಕೆ ಹಿಂತಿರುಗಿಸಲಾಗುವುದು ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಸೋಮವಾರ ಹೇಳಿದ್ದಾರೆ, ಈ ಕ್ರಮವನ್ನು ಇರಾನ್‌ನ ಸ್ಥಿತಿಸ್ಥಾಪಕತ್ವ ಮತ್ತು ಇತ್ತೀಚಿನ ರಾಜತಾಂತ್ರಿಕ ಪ್ರಯತ್ನಗಳ ಮೂಲಕ ಪಡೆದುಕೊಂಡ ಮಹತ್ವದ ಸಾಧನೆ ಎಂದು ಇರಾನ್ ಮಾಧ್ಯಮಗಳು ವಿವರಿಸಿವೆ. ಪವಿತ್ರ ನಗರವಾದ ಕೋಮ್‌ನಲ್ಲಿ ಗ್ರ್ಯಾಂಡ್ ಅಯತೊಲ್ಲಾ ಮೌಸಾ ಶೋಬೈರಿ ಜಂಜಾನಿ ಅವರೊಂದಿಗಿನ ಸಭೆಯಲ್ಲಿ ಮಾತನಾಡಿದ ಪೆಜೆಶ್ಕಿಯಾನ್, ಈ ಮೊತ್ತವು "ಪ್ರಸ್ತುತ ಕತಾರ್‌ನಲ್ಲಿ ಇರಿಸಲಾಗಿರುವ 12 ಬಿಲಿಯನ್ ಡಾಲರ್ ಇರಾನಿನ ಆಸ್ತಿಗಳಲ್ಲಿ ಅರ್ಧದಷ್ಟು" ಎಂದು ಹೇಳಿದರು ಮತ್ತು ಉಳಿದ ಹಣವನ್ನು ಮರುಪಡೆಯಲು ಪ್ರಯತ್ನಗಳು ಮುಂದುವರೆದಿವೆ ಎಂದು ಹೇಳಿದರು. "ಇತ್ತೀಚಿನ ವ್ಯವಸ್ಥೆಗಳ ಅಡಿಯಲ್ಲಿ $6 ಬಿಲಿಯನ್ ಘನೀಕರಿಸಿದ ಆಸ್ತಿಯನ್ನು ಬಿಡುಗಡೆ ಮಾಡಿ ದೇಶಕ್ಕೆ ಹಿಂತಿರುಗಿಸಲಾಗುವುದು" ಎಂದು ಅಧ್ಯಕ್ಷರು ಹೇಳಿದರು. ಬಾಹ್ಯ ಒತ್ತಡ ಮತ್ತು ಇತ್ತೀಚಿನ ಭದ್ರತಾ ಸವಾಲುಗಳ ನಡುವೆಯೂ ಇರಾನಿನ ಜನರು ತೋರಿಸಿದ ದೃಢತೆಯನ್ನು ಪೆಜೆಶ್ಕಿಯಾನ್ ಶ್ಲಾಘಿಸಿದರು, ರಾಷ್ಟ್ರೀಯ ಏಕತೆಯು ಇರಾನ್‌ನ ವಿರೋಧಿಗಳು ತಮ್ಮ ಉದ್ದೇಶಗಳನ್ನು ಸಾಧಿಸುವುದನ್ನು ತಡೆಯಿತು ಎಂದು ಹೇಳಿದರು. "ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ಆಡಳಿತವು ಹೇರಿದ ಇತ್ತೀಚಿನ ಯುದ್ಧದ ಸಮಯದಲ್ಲಿ ಹಿರಿಯ ಅಧಿಕಾರಿಗಳು, ಮಿಲಿಟರಿ ಕಮಾಂಡರ್‌ಗಳು, ಪ್ರಮುಖ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳು ಹುತಾತ್ಮರಾಗಿದ್ದರೂ, ಇರಾನಿನ ಜನರು, ಸಶಸ್ತ್ರ ಪಡೆಗಳು ಮತ್ತು ಸರ್ಕಾರ ಒಟ್ಟಾಗಿ ನಿಂತವು" ಎಂದು ಅವರು ಹೇಳಿದರು. ಅನಿಲ ಉತ್ಪಾದನಾ ಸೌಲಭ್ಯಗಳು, ಉಕ್ಕು ಸ್ಥಾವರಗಳು ಮತ್ತು ಪೆಟ್ರೋಕೆಮಿಕಲ್ ಕೈಗಾರಿಕೆಗಳು ಸೇರಿದಂತೆ ಕಾರ್ಯತಂತ್ರದ ಆರ್ಥಿಕ ವಲಯಗಳ ಮೇಲಿನ ನಿರ್ಬಂಧಗಳು ಮತ್ತು ದಾಳಿಗಳ ಮೂಲಕ ಹಾಗೂ ಇರಾನಿನ ತೈಲ ರಫ್ತುಗಳನ್ನು ತಡೆಯುವ ಪ್ರಯತ್ನಗಳ ಮೂಲಕ ಇರಾನ್ ಅನ್ನು ದುರ್ಬಲಗೊಳಿಸಲು ಯುನೈಟೆಡ್ ಸ್ಟೇಟ್ಸ್ ಮತ್ತು ಇಸ್ರೇಲ್ ಪ್ರಯತ್ನಿಸುತ್ತಿದೆ ಎಂದು ಅಧ್ಯಕ್ಷರು ಆರೋಪಿಸಿದರು. "ಸಾರ್ವಜನಿಕ ಬೆಂಬಲ ಮತ್ತು ರಾಷ್ಟ್ರೀಯ ಒಗ್ಗಟ್ಟಿನಿಂದಾಗಿ ಈ



> ತನ್ನ ಪರಮಾಣು ಕಾರ್ಯಕ್ರಮದ ಬಗ್ಗೆ ಟೆಹ್ರಾನ್‌ನ ನಿಲುವನ್ನು ಪುನರುಚ್ಚರಿಸುತ್ತಾ, "ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಹುಡುಕುತ್ತಿಲ್ಲ" ಎಂದು ಹೇಳಿದ ಪೆಜೆಶ್ಕಿಯನ್, ದೇಶದ ಪರಮಾಣು ಚಟುವಟಿಕೆಗಳು ಶಾಂತಿಯುತ ಉದ್ದೇಶಗಳಿಗಾಗಿ ಮತ್ತು ರಾಷ್ಟ್ರೀಯ ಅಗತ್ಯಗಳಿಗಾಗಿ ಮಾತ್ರ ಮುಂದುವರಿಯುತ್ತವೆ ಎಂದು ಹೇಳಿದರು.

ಪ್ರಯತ್ನಗಳು ವಿಫಲವಾದವು" ಎಂದು ಅವರು ಹೇಳಿದರು. ಇರಾನ್ ಮತ್ತು ಯುನೈಟೆಡ್ ಸ್ಟೇಟ್ಸ್ ನಡುವಿನ ಇತ್ತೀಚಿನ ಪಾಕಿಸ್ತಾನ-ಮಧ್ಯಸ್ಥಿಕೆಯ ತಿಳುವಳಿಕೆ ಒಪ್ಪಂದ (ಎಂಒಯು)ವನ್ನು "ಇರಾನಿನ ಜನರಿಗೆ ಒಂದು ಪ್ರಮುಖ ಗೆಲುವು" ಎಂದು ಪೆಜೆಶ್ಕಿಯನ್ ವಿವರಿಸಿದರು, ಈ ಒಪ್ಪಂದವು ಇರಾನ್‌ನ ತೈಲ ಮತ್ತು ಪೆಟ್ರೋಕೆಮಿಕಲ್ ವಲಯಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವುದನ್ನು ಒಳಗೊಂಡಿದೆ ಎಂದು ಹೇಳಿದರು. ಇಸ್ರೇಲ್ ಮತ್ತು ಕೆಲವು ರಾಜಪ್ರಭುತ್ವವಾದಿ ಗುಂಪುಗಳ ವಿರೋಧದ ಹೊರತಾಗಿಯೂ ಇತ್ತೀಚಿನ ಒಪ್ಪಂದವನ್ನು ಸ್ವೀಕರಿಸಲು ವಾಷಿಂಗ್ಟನ್ ಇಸ್ರೇಲ್ ಅನ್ನು ಮನವೊಲಿಸಿದೆ ಎಂದು ಅವರು ಹೇಳಿಕೊಂಡರು. "ಇರಾನ್‌ನ ತೈಲ ಮತ್ತು ಪೆಟ್ರೋಕೆಮಿಕಲ್ ಕೈಗಾರಿಕೆಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಲು ಜ್ಞಾಪಕ ಪತ್ರವು ಒದಗಿಸುತ್ತದೆ" ಎಂದು ಅವರು ಹೇಳಿದರು. ತಮ್ಮ ಸರ್ಕಾರವು ಏಕಕಾಲದಲ್ಲಿ ಪುನರ್ನಿರ್ಮಾಣ ಪ್ರಯತ್ನಗಳನ್ನು ಮತ್ತು ಎಲೆಕ್ಟ್ರಾನಿಕ್ ಆಹಾರ ಸಹಾಯ ವೋಚರ್‌ಗಳ ಮೌಲ್ಯವನ್ನು ಹೆಚ್ಚಿಸುವುದು ಸೇರಿದಂತೆ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳನ್ನು ವಿಸ್ತರಿಸುತ್ತಿದೆ ಎಂದು ಅಧ್ಯಕ್ಷರು ಹೇಳಿದರು.

# ಬಾಂಗ್ಲಾದೇಶದಲ್ಲಿ ದಡಾರ ರೋಗದಿಂದ ನಾಲ್ವರು ಮಕ್ಕಳ ಸಾವು: ಸೋಂಕಿನಿಂದ ಸಾವನ್ನಪ್ಪಿದವರ ಸಂಖ್ಯೆ 716ಕ್ಕೆ ಏರಿಕೆ, ಆತಂಕದ ವಾತಾವರಣ

**ಢಾಕಾ, ಜೂನ್ 29:** ಜೂನ್ 29 ರಂದು ಕಳೆದ 24 ಗಂಟೆಗಳಲ್ಲಿ ಬಾಂಗ್ಲಾದೇಶದಲ್ಲಿ ದಡಾರ ಮತ್ತು ಸಂಬಂಧಿತ ರೋಗಲಕ್ಷಣಗಳಿಂದ ಇನ್ನೂ ನಾಲ್ವರು ಮಕ್ಕಳ ಸಾವನ್ನಪ್ಪಿದ್ದಾರೆ, ಇದರಿಂದಾಗಿ ಈ ರೋಗದಿಂದ ದೃಢಪಡಿಸಿದ ಮತ್ತು ಶಂಕಿತ ಸಾವುಗಳ ಒಟ್ಟು ಒಟ್ಟು ಸಂಖ್ಯೆ 716 ಕ್ಕಿಂತ ಹೆಚ್ಚಾಗಿದೆ. ಹೊರ ಜಿಲ್ಲೆಗಳು ಮತ್ತು ಒಳನಾಡಿನಲ್ಲಿ ವರದಿಯಾಗದ ಕಾರಣ ಈ ಸಂಖ್ಯೆ ಹೆಚ್ಚಿರಬಹುದು ಎಂದು ಎಚ್ಚರಿಸಲಾಗಿದೆ. ಇತ್ತೀಚಿನ ಅಂಕಿಅಂಶಗಳ ಪ್ರಕಾರ, ಶಂಕಿತ ದಡಾರ ಸಾವುಗಳು 623 ಕ್ಕೆ ಏರಿದೆ, ಆದರೆ ಪ್ರಯೋಗಾಲಯ-ದೃಢಪಡಿಸಿದ ಸಾವುಗಳು ಈಗ 93 ರಷ್ಟಿವೆ. ಅದೇ ರೀತಿ, ಕಳೆದ 24 ಗಂಟೆಗಳಲ್ಲಿ 1,004 ಕ್ಕೂ ಹೆಚ್ಚು ಹೊಸ ಶಂಕಿತ ಸೋಂಕುಗಳು ವರದಿಯಾಗಿವೆ, ಇದು ದೇಶಾದ್ಯಂತ 100,211 ಶಂಕಿತ ಪ್ರಕರಣಗಳಿಗೆ ಕಾರಣವಾಗಿದೆ. ಹೆಚ್ಚುವರಿಯಾಗಿ 141 ಪ್ರಯೋಗಾಲಯ-ದೃಢೀಕರಿಸಿದ ಪ್ರಕರಣಗಳು ದಾಖಲಾಗಿದ್ದು, ದೃಢಪಡಿಸಿದ ಪ್ರಕರಣಗಳ ಸಂಖ್ಯೆ 11,851 ಕ್ಕೆ ತಲುಪಿದೆ.

ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ ದತ್ತಾಂಶದ ಪ್ರಕಾರ, ಏಪ್ರಿಲ್ 10 ರಿಂದ 43,806 ಕ್ಕೂ ಹೆಚ್ಚು ಶಂಕಿತ ದಡಾರ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ, ಆದರೆ ಹೆಚ್ಚುವರಿಯಾಗಿ 80,000 ಜನರು ಚೇತರಿಸಿಕೊಂಡಿದ್ದಾರೆ. ಇದಲ್ಲದೆ, ಬಾಂಗ್ಲಾದೇಶವು 2020 ರಿಂದ ರಾಷ್ಟ್ರವ್ಯಾಪಿ ಪೂರಕ ದಡಾರ ರೋಗನಿರೋಧಕ ಅಭಿಯಾನವನ್ನು ನಡೆಸಿಲ್ಲ, ಆರಂಭದಲ್ಲಿ ಕೋವಿಡ್ -19 ಸಾಂಕ್ರಾಮಿಕ ರೋಗ ಮತ್ತು ನಂತರ ರಾಜಕೀಯ ಅಸ್ಥಿರತೆಯಿಂದಾಗಿ. ಇದರ ಪರಿಣಾಮವಾಗಿ, ಅಂದಾಜು 10 ಮಿಲಿಯನ್ ಮಕ್ಕಳು ತಮ್ಮ ಮೊದಲ ಲಸಿಕೆ ಪ್ರಮಾಣವನ್ನು ತಪ್ಪಿಸಿಕೊಂಡರು ಮತ್ತು ಸುಮಾರು 20 ಮಿಲಿಯನ್ ಮಕ್ಕಳು ತಮ್ಮ ಎರಡನೇ ಪ್ರಮಾಣವನ್ನು ತಪ್ಪಿಸಿಕೊಂಡರು, ಇದು ದೀರ್ಘಕಾಲದವರೆಗೆ ಉಳಿಸಿಕೊಳ್ಳಲು ನಿರ್ವಹಿಸುತ್ತಿದ್ದ ಅಗತ್ಯವಿರುವ 95% ಮಿತಿಗಿಂತ ಹಿಂದಿನ ರೋಗನಿರೋಧಕ ಶಕ್ತಿಯನ್ನು ಕಡಿಮೆ ಮಾಡಿದೆ. ಈ ಏಕಾಏಕಿ ಈಗ ದೇಶದ ಎಲ್ಲಾ ಎಂಟು ವಿಭಾಗಗಳು ಮತ್ತು 64 ಜಿಲ್ಲೆಗಳಲ್ಲಿ ಹರಡಿದೆ, ವಾಸ್ತವಿಕವಾಗಿ ಇಡೀ ದೇಶವನ್ನು ಆವರಿಸಿದೆ. ಢಾಕಾ ವಿಭಾಗವು ಅತ್ಯಂತ ಕೆಟ್ಟ ಪೀಡಿತ ಪ್ರದೇಶವಾಗಿ ಉಳಿದಿದೆ, ಇದು 35,500 ಕ್ಕೂ ಹೆಚ್ಚು ಶಂಕಿತ ಪ್ರಕರಣಗಳು ಮತ್ತು ಸಾವುನೋವುಗಳಲ್ಲಿ ಗಮನಾರ್ಹ ಪಾಲನ್ನು ಹೊಂದಿದೆ. ಚಟ್ಟೋಗ್ರಾಮ್, ರಾಜಶಾಹಿ, ಕಾಕ್ಸ್ ಬಜಾರ್ ಮತ್ತು ಬರಿಶಾಲ್ ವಿಭಾಗಗಳು ಸಹ ಹೆಚ್ಚಿನ ಸೋಂಕಿನ ಮಟ್ಟವನ್ನು ದಾಖಲಿಸಿವೆ.

# ಫ್ರಾನ್ಸ್‌ನಲ್ಲಿ ಶಾಖದ ಅಲೆಯ ಸಮಯದಲ್ಲಿ 1,000 ಹೆಚ್ಚುವರಿ ಸಾವುಗಳು ದಾಖಲು

**ಪ್ಯಾರಿಸ್, ಜೂನ್ 29:** ಜೂನ್ 24 ರಿಂದ ಫ್ರಾನ್ಸ್ ದೇಶದ ಹೆಚ್ಚಿನ ಭಾಗಗಳಲ್ಲಿ ತೀವ್ರವಾದ ಶಾಖದ ಅಲೆ ಬೀಸಿದ್ದರಿಂದ ನಿರೀಕ್ಷೆಗಿಂತ ಸುಮಾರು 1,000 ಹೆಚ್ಚಿನ ಸಾವುಗಳು ಸಂಭವಿಸಿವೆ, ಹೆಚ್ಚಿನ ಸಾವುಗಳು ವಯಸ್ಸಾದವರ ಪಾಲಾಗಿವೆ ಎಂದು ರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ಸಂಸ್ಥೆ ಬಿಡುಗಡೆ ಮಾಡಿದ ಪ್ರಾಥಮಿಕ ಅಂಕಿಅಂಶಗಳು ತಿಳಿಸಿವೆ. ಸಾರ್ವಜನಿಕ ಆರೋಗ್ಯ ಫ್ರಾನ್ಸ್ ಈ ದತ್ತಾಂಶವು ತಾತ್ಕಾಲಿಕವಾಗಿ ಉಳಿದಿದೆ ಆದರೆ ದೀರ್ಘಕಾಲದ ತೀವ್ರ ತಾಪಮಾನಕ್ಕೆ ಸಂಬಂಧಿಸಿದ ಮರಣದಲ್ಲಿ ಗಮನಾರ್ಹ ಏರಿಕೆಯನ್ನು ಸೂಚಿಸುತ್ತದೆ ಎಂದು ಹೇಳಿದೆ. 65 ವರ್ಷಕ್ಕಿಂತ ಮೇಲ್ಪಟ್ಟ ಜನರು ಹೆಚ್ಚು ಪರಿಣಾಮ ಬೀರಿದ್ದಾರೆ, ಆದರೆ ಈ ಅವಧಿಯಲ್ಲಿ ಮನೆಯಲ್ಲಿ ಸಂಭವಿಸುವ ಸಾವುಗಳು 40% ರಷ್ಟು ಹೆಚ್ಚಾಗಿದೆ. ಹಲವಾರು ಪ್ರದೇಶಗಳಲ್ಲಿ ತಂಪಾದ ತಾಪಮಾನವು ಮರಳಿದ್ದರೂ ಸಹ ಶಾಖದ ಅಲೆಯ ಆರೋಗ್ಯದ ಪರಿಣಾಮಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಫ್ರೆಂಚ್ ಆರೋಗ್ಯ ಸಚಿವೆ ಸ್ಟೆಫನಿ ರಿಸ್ಟ್ ಎಚ್ಚರಿಸಿದ್ದಾರೆ.

"ನಾವು ಸಾಮಾನ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ಸಾವುಗಳನ್ನು ನೋಡುತ್ತಿದ್ದೇವೆ" ಎಂದು ರಿಸ್ಟ್ ಹೇಳಿದ್ದಾರೆ ಎಂದು ಫ್ರೆಂಚ್ ಪ್ರಸಾರಕ ಃಈಒಖಿಗಿ ವರದಿ ಮಾಡಿದೆ. ಫ್ರಾನ್ಸ್‌ನ ದೊಡ್ಡ ಭಾಗಗಳಲ್ಲಿ ಸತತ 11 ದಿನಗಳ ತೀವ್ರ ಶಾಖದ ನಂತರ ಮರಣ ಪ್ರಮಾಣ ಹೆಚ್ಚಳವಾಗಿದ್ದು, ಆಸ್ಪತ್ರೆಗಳು ಮತ್ತು ತುರ್ತು ಸೇವೆಗಳು ಸಂಕಷ್ಟದಲ್ಲಿವೆ. ಪ್ಯಾರಿಸ್ ತುರ್ತು ವೈದ್ಯಕೀಯ ಸೇವೆ ಶನಿವಾರ 80 ಸಾವುಗಳನ್ನು ವರದಿ ಮಾಡಿದೆ, ಇದರಲ್ಲಿ 30 ಹೃದಯ ಸ್ತಂಭನ ಪ್ರಕರಣಗಳು ಸೇರಿವೆ, ಶುಕ್ರವಾರದಂದು 109 ಸಾವುಗಳು ಸಂಭವಿಸಿವೆ. ಈ ಅಂಕಿಅಂಶಗಳು ಖಂಒಗ ನಿರ್ವಹಿಸಿದ ಘಟನೆಗಳಿಗೆ ಮಾತ್ರ ಸಂಬಂಧಿಸಿವೆ ಮತ್ತು ರಾಜಧಾನಿಯಲ್ಲಿನ ಒಟ್ಟು ಸಾವುಗಳ ಸಂಖ್ಯೆಯನ್ನು ಪ್ರತಿನಿಧಿಸುವುದಿಲ್ಲ ಎಂದು ಅಧಿಕಾರಿಗಳು ಒತ್ತಿ ಹೇಳಿದರು. ಭಾನುವಾರ ತೀವ್ರ ಗುಡುಗು ಸಹಿತ ಮಳೆಯ ನಂತರ ಹಲವಾರು ಪ್ರದೇಶಗಳಲ್ಲಿ ತಾಪಮಾನ ಕಡಿಮೆಯಾದರೂ, ಆಸ್ಪತ್ರೆಗಳು ಶಾಖ-ಸಂಬಂಧಿತ ಕಾಯಿಲೆಗಳು ಮತ್ತು ಬಿಸಿ ವಾತಾವರಣಕ್ಕೆ ಸಂಬಂಧಿಸಿದ ವಿಳಂಬಿತ ವೈದ್ಯಕೀಯ ತೊಡಕುಗಳನ್ನು ಎದುರಿಸುತ್ತಲೇ ಇವೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ದೇಶವು ರಾತ್ರಿಯಿಡೀ ವ್ಯಾಪಕವಾದ ಬಿರುಗಾಳಿಗಳನ್ನು ಅನುಭವಿಸಿತು. ಕೆರೌನೋಸ್ ಪ್ರಕಾರ

# ನಮ್ಮ ಕಾರ್ಯತಂತ್ರದ ಬಗ್ಗೆ ಪುನರ್ ವಿಮರ್ಶೆ ಅಗತ್ಯ: ಟಿ20 ವಿಶ್ವಕಪ್‌ನಿಂದ ಭಾರತೀಯ ಮಹಿಳೆಯರು ಸೋತ ನಂತರ ಮಜುಂದಾರ್ ಪ್ರತಿಕ್ರಿಯೆ

**ನವದೆಹಲಿ, ಜೂನ್ 29:** ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಿಂದ ಸತತ ಎರಡನೇ ಆವೃತ್ತಿಗೆ ಸೆಮಿಫೈನಲ್ ತಲುಪದೆ ಹೊರಬಿದ್ದ ನಂತರ ಭಾರತ ತಂಡವು ಟಿ20 ಕ್ರಿಕೆಟ್‌ನಲ್ಲಿ ತನ್ನ ವಿಧಾನವನ್ನು ಪುನರ್ವಿಮರ್ಶಿಸುವ ಅಗತ್ಯವಿದೆ ಎಂದು ಭಾರತದ ಮುಖ್ಯ ಕೋಚ್ ಅಮೋಲ್ ಮಜುಂದಾರ್ ಅಭಿಪ್ರಾಯಪಟ್ಟಿದ್ದಾರೆ. ಭಾನುವಾರ ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡ ಆರು ವಿಕೆಟ್‌ಗಳ ಸೋಲಿನೊಂದಿಗೆ ತಮ್ಮ ಅಭಿಯಾನವನ್ನು ಕೊನೆಗೊಳಿಸಿತು, ಇದು ಸತತ ಎರಡನೇ ಮಹಿಳಾ ಟಿ20 ವಿಶ್ವಕಪ್ ಆಗಿದ್ದು, ಇದರಲ್ಲಿ ಅವರು ನಾಕೌಟ್ ಹಂತಕ್ಕೆ ಅರ್ಹತೆ ಪಡೆಯುವಲ್ಲಿ ವಿಫಲರಾಗಿದ್ದಾರೆ. ನಿರ್ಗಮನದ ಬಗ್ಗೆ ಮಾತನಾಡಿದ ಮುಖ್ಯ ಕೋಚ್ ಮಜುಂದಾರ್, ಆಸ್ಟ್ರೇಲಿಯಾದಂತಹ ಅಗ್ರ ತಂಡಗಳೊಂದಿಗೆ ಸ್ಥಿರವಾಗಿ ಸ್ಪರ್ಧಿಸಲು ಬಯಸಿದರೆ ತಂಡವು ಕಡಿಮೆ ಸ್ವರೂಪದಲ್ಲಿ ತನ್ನ ಕಾರ್ಯತಂತ್ರವನ್ನು ಮರುಪರಿಶೀಲಿಸಬೇಕಾಗಿದೆ ಎಂದು ಹೇಳಿದರು. "ನಮ್ಮ ಟಿ20 ಪಂದ್ಯಕ್ಕಾಗಿ ನಾವು ನಿಜವಾಗಿಯೂ ನಮ್ಮ ಕಾರ್ಯತಂತ್ರವನ್ನು ಪುನರ್ವಿಮರ್ಶಿಸಬೇಕು ಎಂದು ನಾನು ಭಾವಿಸುತ್ತೇನೆ. ನಾವು ಯಾವ ಸಂಯೋಜನೆಗಳನ್ನು ಆಡಲಿದ್ದೇವೆ ಎಂಬುದರ ಬಗ್ಗೆ ನಾವು ನಿಜವಾಗಿಯೂ ನಮ್ಮ ತಲೆಗಳನ್ನು ಹಾಕಬೇಕಾಗಿದೆ" ಎಂದು ಸೋಲಿನ ನಂತರ ಮಜುಂದಾರ್ ಹೇಳಿದರು.

ಭಾರತ ತಂಡದ ಕೋಚ್ ಹರ್ಮನ್‌ಪ್ರೀತ್ ಕೌರ್ ಅವರನ್ನು ತಂಡವನ್ನು ಮುನ್ನಡೆಸುವುದನ್ನು ಬೆಂಬಲಿಸಿದರು ಆದರೆ ಅಂತಿಮ ನಿರ್ಧಾರವು ಆಯ್ಕೆದಾರರ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದರು. ಪಂದ್ಯಾವಳಿಯ ಉದ್ದಕ್ಕೂ ಭಾರತದ ಬ್ಯಾಟಿಂಗ್ ಸರಿಯಾದ ಉದ್ದೇಶವನ್ನು ತೋರಿಸಿದೆ ಎಂದು ಮಜುಂದಾರ್ ಭಾವಿಸಿದರು, ಆದರೆ ಬೌಲಿಂಗ್ ಮತ್ತು ಫೀಲ್ಡಿಂಗ್ ಪ್ರಮುಖ ಕ್ಷಣಗಳಲ್ಲಿ ತಂಡವನ್ನು ನಿರಾಸೆಗೊಳಿಸಿತು ಎಂದು ಒಪ್ಪಿಕೊಂಡರು. "ಬ್ಯಾಟ್ ವಿಷಯದಲ್ಲಿ, ನಾವು ಬಹಳಷ್ಟು ಉದ್ದೇಶದಿಂದ ಬ್ಯಾಟಿಂಗ್ ಮಾಡುತ್ತಿದ್ದೇವೆ ಎಂದು ನಾನು ಭಾವಿಸುತ್ತೇನೆ. ನಾವು ನಮ್ಮ ಚಿಂತನೆಯಲ್ಲಿ ಸಕಾರಾತ್ಮಕವಾಗಿದ್ದೇವೆ. ನಾವು ಬೌಂಡರಿ ಮತ್ತು ಸಿಕ್ಸರ್‌ಗಳ ಬಗ್ಗೆ ಯೋಚಿಸುತ್ತಿದ್ದೇವೆ. ಆಧುನಿಕ ಕ್ರಿಕೆಟ್ ಎಲ್ಲವೂ ಬಗ್ಗೆಯೇ ಇರುವುದರಿಂದ, ಟಿ20 ಕ್ರಿಕೆಟ್ ಎಲ್ಲವೂ ಬೌಂಡರಿ ಮತ್ತು ಸಿಕ್ಸರ್‌ಗಳ ಬಗ್ಗೆ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ನಾವು ಯೋಚಿಸುತ್ತಿದ್ದೇವೆ ಮತ್ತು ನಾವು ಖಂಡಿತವಾಗಿಯೂ ಆ ರೀತಿಯಲ್ಲಿ ಆಡುತ್ತಿದ್ದೇವೆ" ಎಂದು ಅವರು ಹೇಳಿದರು. "ನಮ್ಮ ಬೌಲಿಂಗ್ ಕೂಡ ಸ್ವಲ್ಪ ಹೆಚ್ಚಿಸಬೇಕಾಗಿದೆ ಎಂದು ನಾನು ಭಾವಿಸುತ್ತೇನೆ. ನಮ್ಮ ಬೌಲಿಂಗ್ ಅಥವಾ ನಮ್ಮ ಫೀಲ್ಡಿಂಗ್ ಕಾರಣಕ್ಕೆ ಸಹಾಯ ಮಾಡಿದೆ ಎಂದು ನಾನು ಭಾವಿಸುವುದಿಲ್ಲ, ಪ್ರಾಮಾಣಿಕವಾಗಿ ಹೇಳಬೇಕೆಂದರೆ. ಆದ್ದರಿಂದ ನಾವು ನಿಜವಾಗಿಯೂ ಹಿಂತಿರುಗಿ ಟಿ20 ಆಟವನ್ನು ಹೇಗೆ ಸಮೀಪಿಸಲಿದ್ದೇವೆ ಮತ್ತು ಆ ಸಕಾರಾತ್ಮಕ ಮನಸ್ಥಿತಿಯಲ್ಲಿರಬೇಕು ಎಂದು ನಾನು ಭಾವಿಸುತ್ತೇನೆ" ಎಂದು ಅವರು ಹೇಳಿದರು. ಭಾರತದ ಬೌಲಿಂಗ್ ದಾಳಿ ಇನ್ನೂ ತುಲನಾತ್ಮಕವಾಗಿ ಅನನುಭವಿ ಎಂದು ಮಜುಂದಾರ್ ಗಮನಸೆಳೆದರು.

ವಿಶ್ವದ ನಂ. 1 ಟಿ20ಐ ಬೌಲರ್ ಶ್ರೀ ಚರಣಿ ಮತ್ತು ವೇಗದ ಬೌಲರ್ ಕ್ರಾಂತಿ ಗೌಡ್ ಇಬ್ಬರೂ 23 ವರ್ಷದೊಳಗಿನವರು, ಆದರೆ ತಂಡವು ಸ್ಪಿನ್ನರ್ ಶ್ರೇಯಾಂಕ ಪಾಟೀಲ್ ಅವರ ಸೇವೆಯನ್ನು ಕಳೆದುಕೊಂಡಿತು,



ಅವರನ್ನು ಟೂರ್ನಮೆಂಟ್‌ನ ಆರಂಭದಲ್ಲಿ ಪಾದದ ಗಾಯದಿಂದ ಹೊರಗುಳಿದ ನಂತರ ಹೊರಗುಳಿದಿತ್ತು. ನೀವು ನಮ್ಮ ಬೌಲಿಂಗ್ ದಾಳಿಯನ್ನು ನೋಡಿದರೆ, ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಇದು ತುಂಬಾ ಅನನುಭವಿಯಾಗಿದೆ.

ಆದ್ದರಿಂದ ನಾನು ಹಿಂದಿನ ಪತ್ರಿಕಾಗೋಷ್ಠಿಯಲ್ಲಿ ಇದನ್ನು ಮೊದಲೇ ಹೇಳಿದ್ದೇನೆ, ಅದು ನಮಗೆ 18 ತಿಂಗಳುಗಳನ್ನು ನೀಡುತ್ತದೆ ಮತ್ತು ಈ ದಾಳಿ ವಿಭಿನ್ನವಾಗಿರುತ್ತದೆ, ಎಂದು ಅವರು ತೀರ್ಮಾನಿಸಿದರು.